



# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

43


ಆಗಸ್ಟ್ 19 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 124 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4


## ರಾಜ್ಯದಲ್ಲಿ ತಿಂಗಳಾಂತ್ಯಕ್ಕೆ ಮಳೆ ಅಬ್ಬರ

### ಹವಾಮಾನ ಇಲಾಖೆ ಮುನ್ಸೂಚನೆ

ಬೆಂಗಳೂರು, ಆ. 18 (ಕೆಎಂಶಿ)– ಆಗಸ್ಟ್ ಕೊನೆಯ ವಾರ ರಾಜ್ಯ ಮತ್ತೊಮ್ಮೆ ಮಳೆಯ ಅಬ್ಬರ ಎದುರಿಸಬೇಕಾಗಿದೆ.

ಸತತವಾಗಿ ಸುರಿದ ಮಳೆ ಕೆಲ ದಿನಗಳಿಂದ ಬಿಡುವು ಕೊಟ್ಟಿತ್ತು, ಹವಾಮಾನ ಇಲಾಖೆ ಪ್ರಕಾರ ಇದೇ 26 ರಿಂದ ನಾಲ್ಕು ದಿನಗಳ ಕಾಲ ಇಡೀ ರಾಜ್ಯಾದ್ಯಂತ ಭಾರಿ ಮಳೆ ಬೀಳಲಿದೆ.

ಕೊಡಗು ಜಿಲ್ಲೆಯಲ್ಲಿ 200 ಮಿಲಿ ಮೀಟರ್‌ಯಷ್ಟು ಅತೀ ಹೆಚ್ಚು ಮಳೆ ಸುರಿಯಲಿದ್ದು, ಮತ್ತೊಮ್ಮೆ ಜಿಲ್ಲೆಯಲ್ಲಿ ಪ್ರವಾಹ ಮತ್ತು ಭೂಕುಸಿತ ದೊಡ್ಡ ಪ್ರಮಾಣದಲ್ಲಿ ▶ 6ನೇ ಪುಟಕ್ಕೆ







ಮೈಸೂರು ಸುತ್ತೂರು ಶಾಖಾ ಮಠದಲ್ಲಿ ಶ್ರೀ ರಾಜೇಂದ್ರ ಮಹಾಸ್ವಾಮಿಗಳ 107ನೇ ಜಯಂತಿ ಕಾರ್ಯಕ್ರಮ

# ಭಾರತದತ್ತ ನೋಡುತ್ತಿರುವ ವಿಶ್ವದ ದೇಶಗಳು

## ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅಭಿಮತ





ಮೈಸೂರಿನ ಸುತ್ತೂರು ಮಠದಲ್ಲಿ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿಯವರ 107ನೇ ಜಯಂತಿ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ರಾಜೇಂದ್ರ ಮಹಾಸ್ವಾಮೀಜಿಯವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಚಿತ್ರದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ದಗಂಗಾ ಕ್ಷೇತ್ರದ ಶ್ರೀ ಸಿದ್ದಲಿಂಗ ಮಹಾಸ್ವಾಮೀಜಿ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉಪಸ್ಥಿತರಿದ್ದರು. ಮತ್ತೊಂದು ಚಿತ್ರದಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿವಿಧ ಮಠಾಧೀಶರನ್ನು ಕಾಣಬಹುದು.

ಮೈಸೂರು, ಆ.18 (ಆರ್‌ಕೆಬಿ)– ಅನಾದಿ ಕಾಲದಿಂದಲೂ ಭಾರತದಲ್ಲಿರುವ ಗುರುಪರಂಪರೆಗೆ ವಿಶೇಷ ಮಹತ್ವವಿದೆ. ಹಾಗಾಗಿ ಇಡೀ ವಿಶ್ವದ ದೇಶಗಳು ಆಧ್ಯಾತ್ಮಿಕ ಮಾರ್ಗದರ್ಶನಕ್ಕಾಗಿ ಭಾರತದತ್ತ ನೋಡುತ್ತಿವೆ. ಮುಂದಿನ ದಶಕದಲ್ಲಿ ಜಗತ್ತು ಚಲಿಸುವ ದಿಕ್ಕು ಭಾರತವಾಗಿದೆ ಎಂದು ಕರ್ನಾಟಕ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಅಭಿಪ್ರಾಯಪಟ್ಟರು.

ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಮಠದಲ್ಲಿ ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ 107ನೇ ಜಯಂತಿ ಮಹೋತ್ಸವಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಆಧ್ಯಾತ್ಮಿಕ ಪ್ರಜ್ಞೆ, ಆಂತರಿಕ ಯೋಗಕ್ಷೇಮ ಮತ್ತು ನಮ್ಮ ಅಸ್ತಿತ್ವದ ಆಳವಾದ ಆಯಾಮಗಳ ತಿಳುವಳಿಕೆಗಾಗಿ ನೋಡುತ್ತಿರುವ ಯಾರಿಗಾದರೂ ಭಾರತವು ಯಾವಾಗಲೂ ದಾರಿದೀಪವಾಗಿದೆ ಎಂದರು.


ಸುತ್ತೂರು ಮಠ ಮತ್ತು ಸಿದ್ದಗಂಗಾ ಮಠಗಳು ಭಾರತದ ಆಧ್ಯಾತ್ಮಿಕ ಜ್ಞಾನವನ್ನು ಜೀವಂತವಾಗಿರಿಸಿ, ಮಾರ್ಗದರ್ಶಕ ಶಕ್ತಿಗಳಾಗಿವೆ. ನಾವು ಸಾವಿರಾರು ವರ್ಷಗಳಿಂದ ನಮ್ಮ ಆಧ್ಯಾತ್ಮಿಕ ಬೇರುಗಳನ್ನು ಹೊಂದಿದ್ದೇವೆ.ನಾವು ಮಂತ್ರಗಳನ್ನು ಪಠಿಸುತ್ತಾ ಮತ್ತು ಧರ್ಮಗ್ರಂಥಗಳನ್ನು ಕೇಳುತ್ತಾ ಬೆಳೆದಿದ್ದೇವೆ. ನಮ್ಮ ಸಂಸ್ಕೃತಿ ಆದಿ ಮತ್ತು ಅನಂತ. ನಮ್ಮ ಸಾಧುಗಳು ತಮ್ಮ ಜೀವನದ ಮೂಲಕ ಎಲ್ಲವನ್ನೂ ರಕ್ಷಿಸಿದ್ದಾರೆ ಎಂದು ಗೆಹ್ಲೋಟ್ ಅಭಿಪ್ರಾಯಪಟ್ಟರು.

### ಆ.28ರಂದು ಅಮೆರಿಕದಲ್ಲಿ ಸಮಾರಂಭ

“ಆ.28ರಂದು ಅಮೆರಿಕದ ಮೇರಿಲ್ಯಾಂಡ್‌ನ ಗೈಥರ್ಸ್‌ಬರ್ಗ್‌ನಲ್ಲಿರುವ ಜೆಎಸ್‌ಎಸ್ ಆಧ್ಯಾತ್ಮಿಕ ಮಿಷನ್‌ನಲ್ಲಿ ನಡೆಯುವ ಸಮಾರಂಭದ ಪೂರ್ವಭಾವಿಯಾಗಿ ಸುತ್ತೂರು ಮಠದಲ್ಲಿ ಕಾರ್ಯಕ್ರಮ ನಡೆಯಿತು. ಗೈಥಸ್‌ಬರ್ಗ್‌ನಲ್ಲಿ ಜೆಎಸ್‌ಎಸ್ ಆಧ್ಯಾತ್ಮಿಕ ಮಿಷನ್‌ನ ಪಕ್ಕದಲ್ಲಿರುವ ಜಾಗದಲ್ಲಿ ದೇವಾಲಯ ಮತ್ತು ಸಂಕೀರ್ಣ ನಿರ್ಮಾಣಕ್ಕೆ ಭೂಮಿ ಪೂಜೆಯನ್ನು ಸಹ ನೆರವೇರಿಸಲಾಗುತ್ತದೆ.

1953 ರಲ್ಲಿ ಅಂದಿನ ಮೈಸೂರು ಸಂಸ್ಥಾನದ ಮುಖ್ಯಸ್ಥರಾಗಿದ್ದ ಗೌರವಾನ್ವಿತ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರು ಸಮಾಜಕ್ಕೆ ನೀಡಿದ ಕೊಡುಗೆಗಾಗಿ ಪರಮ ಪೂಜ್ಯ ರಾಜೇಂದ್ರ ಸ್ವಾಮೀಜಿ ಅವರಿಗೆ 'ರಾಜಗುರು ತಿಲಕ' ಎಂಬ ಬಿರುದು ನೀಡಿ ಗೌರವಿಸಿದರು. 1989ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಮರಣೋತ್ತರವಾಗಿ ಗೌರವ ಡಾಕ್ಟರೇಟ್ ನೀಡಲಾಯಿತು ಎಂದು ಹೇಳಿದರು. ಪುರಾತನ ಗ್ರಂಥಗಳ ಶ್ರೀಮಂತ ಜ್ಞಾನವನ್ನು ಪ್ರಸಾರ ಮಾಡುವ ಅಥವಾ ಆಧುನಿಕ ತಂತ್ರಜ್ಞಾನದಿಂದ ಸಮೃದ್ಧವಾಗಿರುವ ಆಧುನಿಕ ▶ 8ನೇ ಪುಟಕ್ಕೆ

# ಸಿಎಂ ಬೊಮ್ಮಾಯಿಗೆ ವರಿಷ್ಠರ ಬುಲಾವ್



ಬೆಂಗಳೂರು, ಆ. 18 (ಕೆಎಂಶಿ)– ಸರ್ಕಾರ ಮತ್ತು ಪಕ್ಷದಲ್ಲಿ ಕೆಲ ಬದಲಾವಣೆ ಮಾಡುವ ಸಲುವಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ದೆಹಲಿಗೆ ಬರುವಂತೆ ಬಿಜೆಪಿ ವರಿಷ್ಠರು ಬುಲಾವ್ ಮಾಡಿದ್ದಾರೆ.

ವರಿಷ್ಠರ ಕರೆಯ ಮೇರೆಗೆ ಭಾನುವಾರದ ನಂತರ ಯಾವುದೇ ಸಂದರ್ಭದಲ್ಲಿ ಮುಖ್ಯಮಂತ್ರಿಯವರು ದೆಹಲಿಗೆ ತೆರಳಲಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಪಕ್ಷದ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ಅವರಿಗೆ ದೊಡ್ಡ ಹೊಣೆಗಾರಿಕೆ ನೀಡಿದ ನಂತರ ಕರ್ನಾಟಕ ಬಿಜೆಪಿ ಮತ್ತು ಸರ್ಕಾರದಲ್ಲೂ ಮಹತ್ತರ ಬದಲಾವಣೆಗೆ ವರಿಷ್ಠರು ಮುಂದಾಗಿದ್ದಾರೆ. ಸಂಪುಟ ಪುನಾರಚನೆ, ಇಲ್ಲವೆ ವಿಸ್ತರಣೆ ಅಥವಾ ಖಾತೆಗಳಲ್ಲಿ ಬದಲಾವಣೆ ಮಾಡಲು ಮುಖ್ಯಮಂತ್ರಿಯವರಿಗೆ ಸೂಚಿಸುವುದು, ಇದೇ ಕಾಲಕ್ಕೆ ನಳೀನ್‌ಕುಮಾರ್ ಕಟೀಲ್

### ಸರ್ಕಾರ, ಪಕ್ಷದಲ್ಲಿ ಬದಲಾವಣೆ ಸಾಧ್ಯತೆ

ಅವರ ಅಧಿಕಾರವಧಿ ಮುಗಿಯುತ್ತಿರುವುದರಿಂದ ಅವರ ಸ್ಥಾನಕ್ಕೆ ಬಿಜೆಪಿ ರಾಜ್ಯಾಧ್ಯಕ್ಷರ ನೇಮಕಾತಿ ಬಗ್ಗೆಯು ವರಿಷ್ಠರು ಮುಖ್ಯಮಂತ್ರಿಯವರ ಬಳಿ ಸಮಾಲೋಚನೆ ಮಾಡಲಿದ್ದಾರಂತೆ.

ಚುನಾವಣಾ ಸಮೀಪವಾಗುತ್ತಿದ್ದಂತೆ ಕಾಂಗ್ರೆಸ್ ಸಂಘಟನಾತ್ಮಕವಾಗಿ ಬೀದಿಗಿಳಿದು, ಹೋರಾಟ ನಡೆಸುತ್ತಿರುವುದು ಬಿಜೆಪಿಯ ಕಣ್ತೆರೆಸಿದೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್ ಹಾಗೂ ಕಂದಾಯ ಸಚಿವ ಆರ್.ಅಶೋಕ್ ಅವರನ್ನು ಕಳೆದೆರಡು ದಿನಗಳ ಹಿಂದೆಯೇ ಕೇಶವ ಕೃಪಕ್ಕೆ ಕರೆಸಿಕೊಂಡ ಸಂಘ ಪರಿವಾರದ ನಾಯಕರು ಕೆಲವು ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಸರ್ಕಾರದ ಕಾರ್ಯ ವೈಖರಿಯ ಬಗ್ಗೆ ಅಸಮಧಾನವನ್ನು ವ್ಯಕ್ತಪಡಿಸಿರುವ ಸದಸ್ಯರು ಇದೇ ರೀತಿ ಮುಂದುವರೆದರೆ, ಚುನಾವಣೆಯಲ್ಲಿ ಪಕ್ಷಕ್ಕೆ ಭಾರಿ ಹಿನ್ನಡೆಯಾಗುತ್ತದೆ. ಈಗಲೇ ಎಚ್ಚೆತ್ತುಕೊಂಡು ಕಾಂಗ್ರೆಸ್ ಸರಿಸಾಟಿಯಾಗಿ ಹೋರಾಟ ನಡೆಸಿ ಎಂದು ಸೂಚಿಸಿದ್ದಾರೆ. ▶ 8ನೇ ಪುಟಕ್ಕೆ

# ಅದ್ಧೂರಿ ದಸರಾ ಯಶಸ್ವಿಗೆ ಶ್ರಮಿಸಿ

## ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಸೂಚನೆ





ಮೈಸೂರು, ಆ.18(ಆರ್‌ಕೆ)–ಈ ಬಾರಿಯ ಅದ್ಧೂರಿ ದಸರಾ ಮಹೋತ್ಸವ ಯಶಸ್ವಿಯಾಗಿ ನಡೆಯಲು ಪ್ರತಿಯೊಬ್ಬರೂ ಶ್ರಮಿಸಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.


ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಇಂದು ದಸರಾ ಮಹೋತ್ಸವ ಕುರಿತು ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಈ ಬಾರಿ ವಿಜೃಂಭಣೆಯಿಂದ ಯಾವುದೇ ಲೋಪ–ದೋಷವಿಲ್ಲದೇ ದಸರಾ ಆಚರಿಸಲು ಸರ್ಕಾರ ನಿರ್ಧರಿಸಿರುವುದರಿಂದ ಈಗಾಗಲೇ ರಚನೆಯಾಗಿರುವ ಅಧಿಕಾರಿಗಳ ಉಪ ಸಮಿತಿ ಸದಸ್ಯರು ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸುವಂತೆ ಸೂಚನೆ ನೀಡಿದರು.

ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಈ ಹಿಂದೆ ದಸರಾ ಮಹೋತ್ಸವದಲ್ಲಿ ಪ್ರದರ್ಶನ ನೀಡಿದ ಕಲಾವಿದರು ಪುನರಾವರ್ತನೆಯಾಗದಂತೆ ನೋಡಿಕೊಂಡು ಹೊಸ ಕಲಾವಿದರು, ಪ್ರತಿಭೆಗಳಿಗೆ ಅವಕಾಶ ನೀಡಬೇಕು. ವಿಭಿನ್ನ ರೀತಿಯ ಸೃಜನಾತ್ಮಕ ಕಲಾವಿದರುಗಳಿಂದ ಉತ್ತಮ ಕಲಾ ಪ್ರದರ್ಶನವಾಗುವಂತೆ ಸಚಿವರು ಸಲಹೆ ನೀಡಿದರು. ವಿದ್ಯುತ್ ದೀಪಾಲಂಕಾರವನ್ನು ಆಕರ್ಷಕವಾಗಿ ಮಾಡುವ ಮೂಲಕ ದೇಶ–ವಿದೇಶಗಳಿಂದ ಪ್ರವಾಸಿಗರು ಮೈಸೂರಿಗೆ ಆಗಮಿಸುವಂತೆ ಮಾಡಿ ಎಂದು ಚೆಸ್ಕಾಂ ಅಧಿಕಾರಿಗಳಿಗೆ ತಿಳಿಸಿದ ಅವರು, ಈಗಿನಿಂದಲೇ ಸಕಲ ಸಿದ್ಧತೆ ಮಾಡಿಕೊಂಡು ಕಾರ್ಯ ಪ್ರವೃತ್ತರಾಗಿ ಎಂದರು. ರೈತ ದಸರಾ, ಯೋಗ ದಸರಾ, ಚಲನ ಚಿತ್ರೋತ್ಸವ, ಕುಸ್ತಿ, ಯುವ ದಸರಾ, ಯುವ ಸಂಭ್ರಮ, ಮಹಿಳಾ ದಸರಾ, ಮತ್ಸ್ಯ ಪ್ರದರ್ಶನ, ಆಹಾರ ಮೇಳಗಳನ್ನು ಆಯಾ ಉಪ ಸಮಿತಿ ಸದಸ್ಯರು ಅಚ್ಚುಕಟ್ಟಾಗಿ ನಿರ್ವಹಿಸಬೇಕು.

ಕಾರ್ಯಕ್ರಮದ ರೂಪು–ರೇಷೆ ಸಿದ್ಧಪಡಿಸಿ ಎಸ್ಟಿಮೇಟ್ ತಯಾರಿಸಿ ಎಷ್ಟು ಅನುದಾನ ಬೇಕೆಂಬುದರ ಬಗ್ಗೆ ಪ್ರಸ್ತಾವನೆ ಸಲ್ಲಿಸಿ ಎಂದು ಎಸ್.ಟಿ.ಸೋಮಶೇಖರ್ ಅವರು ಸೂಚನೆ ನೀಡಿದರು. ಕೊರೊನಾ ಪರಿಸ್ಥಿತಿಯಿಂದಾಗಿ ಕಳೆದ ಎರಡು ವರ್ಷ ಸರಳ ಹಾಗೂ ಸಾಂಪ್ರದಾಯಿಕವಾಗಿ ದಸರಾ ಆಚರಿಸಲಾಯಿತು. ಈ ಬಾರಿ ಅಂತಹ ಸಮಸ್ಯೆ ಇಲ್ಲದಿರುವುದರಿಂದ ಎಲ್ಲಾ ಕಾರ್ಯಕ್ರಮಗಳನ್ನು ಪೂರ್ಣ ಪ್ರಮಾಣದಲ್ಲಿ ಆಯೋಜಿಸಿ ಜನರಿಗೆ ▶ 6ನೇ ಪುಟಕ್ಕೆ

# ಕೊಡಗಲ್ಲಿ ಸಿದ್ದರಾಮಯ್ಯಗೆ ಬಿಜೆಪಿ ಕಾರ್ಯಕರ್ತರ ಘೇರಾವ್

## ●ಕಪ್ಪು ಬಾವುಟ ಪ್ರದರ್ಶನ, ಕಾರಿಗೆ ಮೊಟ್ಟೆ ಎಸೆತ ●ಮಡಿಕೇರಿಯಲ್ಲಿ ಬಿಜೆಪಿ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರ ಪ್ರತಿಭಟನೆ






ಮಡಿಕೇರಿಯಲ್ಲಿ ಪೊಲೀಸ್ ಬ್ಯಾರಿಕೇಡ್ ತಳ್ಳಿ ಸಿದ್ದರಾಮಯ್ಯ ಕಾರಿನತ್ತ ನುಗ್ಗಲು ಯತ್ನಿಸುತ್ತಿರುವ ಬಿಜೆಪಿ ಕಾರ್ಯಕರ್ತರು. ಮತ್ತೊಂದು ಚಿತ್ರದಲ್ಲಿ ಬಿಜೆಪಿ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರ ಪ್ರತಿಭಟನೆ

ಮಡಿಕೇರಿ, ಆ.18– ನೆರೆ, ಪ್ರವಾಹದಿಂದ ಹಾನಿಗೀಡಾದ ಪ್ರದೇಶಗಳ ವೀಕ್ಷಣೆಗಾಗಿ ಗುರುವಾರ ಕೊಡಗಿಗೆ ಬಂದ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರಿಗೆ ಬಿಜೆಪಿ ಕಾರ್ಯಕರ್ತರು ಘೇರಾವ್ ಹಾಕಿ, ಕಪ್ಪು ಬಾವುಟ ಪ್ರದರ್ಶಿಸಿ, ಅವರ ಕಾರಿಗೆ ಮೊಟ್ಟೆ ಎಸೆದ ಘಟನೆ ನಡೆದಿದೆ.


ಮಡಿಕೇರಿಯಲ್ಲಿ ಬಿಜೆಪಿ ಕಾರ್ಯಕರ್ತರ ಪ್ರತಿಭಟನೆಗೆ ಪ್ರತಿಯಾಗಿ ಕೆಪಿಸಿಸಿ ವಕ್ತಾರ ಎ.ಎಸ್.ಪೊನ್ನಣ್ಣ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆಗಿಳಿದಾಗ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಯಿತು. ಕೊನೆಗೆ ಜಿಲ್ಲಾ ಎಸ್ಪಿ ಎಂ.ಎ.ಅಯ್ಯಪ್ಪ ಅವರು ಪರಿಸ್ಥಿತಿ ತಿಳಿಗೊಳಿಸುವಲ್ಲಿ ಯಶಸ್ವಿಯಾದರು. ಕೊಡಗು ಜಿಲ್ಲಾ ಕೇಂದ್ರ ಮಡಿಕೇರಿ, ತಿತಿಮತಿ ಮತ್ತು ಗುಡ್ಡೆಹೊಸೂರಿನಲ್ಲಿ ಸಿದ್ದರಾಮಯ್ಯ ಅವರು ಬಿಜೆಪಿ ಕಾರ್ಯಕರ್ತರ ಪ್ರತಿಭಟನೆ ಎದುರಿಸಬೇಕಾಯಿತು. ಮಡಿಕೇರಿಯ ಜನರಲ್ ತಿಮ್ಮಯ್ಯ ವೃತ್ತದಲ್ಲಿ ಜಮಾಯಿಸಿದ್ದ ಬಿಜೆಪಿ ಯುವ ಮೋರ್ಚಾ ಹಾಗೂ ಹಿಂದೂ ಪರ ಸಂಘಟನೆ ಕಾರ್ಯಕರ್ತರು, ▶ 8ನೇ ಪುಟಕ್ಕೆ

### ಸಿದ್ದರಾಮಯ್ಯ ಕಾರಿಗೆ ಮೊಟ್ಟೆ ಎಸೆದಿದ್ದು ಸರಿಯಲ್ಲ...



ಬೆಂಗಳೂರು, ಆ.18–ವಿಪಕ್ಷ ನಾಯಕ ಸಿದ್ದರಾಮಯ್ಯ ಕಾರಿಗೆ ಮೊಟ್ಟೆ ಎಸೆದಿದ್ದು ಸರಿಯಲ್ಲ. ಇಂತಹ ನಡೆವಳಿಕೆಯನ್ನು ಸಹಿಸಲ್ಲ ಎಂದು ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಕುರಿತು ಮಾತನಾಡಿದ ಬಿ.ಎಸ್.ಯಡಿಯೂರಪ್ಪ, ಮೊಟ್ಟೆ ಎಸೆದಿದ್ದು ಸರಿಯಲ್ಲ ಇಂಥ ಘಟನೆ ನಡೆಯಬಾರದು. ಸಿದ್ದರಾಮಯ್ಯ ವಿಪಕ್ಷ ನಾಯಕರಿದ್ದಾರೆ, ಸಿದ್ದರಾಮಯ್ಯರನ್ನು ಗೌರವಯುತವಾಗಿ ನಡೆಸಿಕೊಳ್ಳಬೇಕು. ಇಂತಹ ನಡವಳಿಕೆಯನ್ನು ಸಹಿಸಲ್ಲ ಎಂದು ಖಂಡಿಸಿದರು.

### ಸಿಎಂ ಅಸಮಾಧಾನ



ಬೆಂಗಳೂರು, ಆ.18–ಕೊಡಗಿನಲ್ಲಿ ಬಿಜೆಪಿ ಕಾರ್ಯಕರ್ತರು ಸಿದ್ದರಾಮಯ್ಯ ಕಾರಿನ ಮೇಲೆ ಮೊಟ್ಟೆ ಎಸೆದಿರುವುದಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಸಂಬಂಧ ಟ್ವೀಟ್ ಮಾಡಿರುವ ಅವರು, 'ಮಾನ್ಯ ಸಿದ್ದರಾಮಯ್ಯ ಅವರು ವಿರೋಧ ಪಕ್ಷದ ನಾಯಕರಾಗಿದ್ದು, ವಿರೋಧ ಪಕ್ಷದ ನಾಯಕ ಸ್ಥಾನಕ್ಕೆ ತನ್ನದೇ ಆದ ಗೌರವ ಇರುತ್ತದೆ. ಯಾವುದೇ ವಿಷಯದ ಬಗ್ಗೆಯೂ ಭಿನ್ನಾಭಿಪ್ರಾಯವಿದ್ದರೆ, ಅದನ್ನು ಬಲವಾದ ಅಭಿಪ್ರಾಯದೊಂದಿಗೆ ವಿರೋಧಿಸಬೇಕು. ಯಾವುದೇ ದೈಹಿಕ ಕಾರ್ಯದಿಂದಲ್ಲ. ಇದನ್ನು ಎಲ್ಲರೂ ಪಾಲಿಸಬೇಕು ಎಂದಿದ್ದಾರೆ.

### ಮೊಟ್ಟೆ ಎಸೆಯುವುದು ಒಳ್ಳೆಯ ಸಂಸ್ಕೃತಿಯಲ್ಲ, ಆದರೆ...



ಮೈಸೂರು, ಆ.18–ವಿಪಕ್ಷ ನಾಯಕ ಸಿದ್ದರಾಮಯ್ಯ ಕೊಡಗಿಗೆ ಭೇಟಿ ನೀಡಿದ ವೇಳೆ ಪ್ರತಿಭಟನಾ ನಿರತರು ಅವರ ಕಾರಿನ ಮೇಲೆ ಮೊಟ್ಟೆ ಎಸೆದಿರುವ ಬಗ್ಗೆ ಸಂಸದ ಪ್ರತಾಪ್ ಸಿಂಹ ಬೇಸರ ವ್ಯಕ್ತಪಡಿಸಿದ್ದಾರೆ. ಸುದ್ದಿಗಾರರ ಜೊತೆ ಮಾತನಾಡಿದ ಅವರು, ಮೊಟ್ಟೆ ಎಸೆಯುವುದು ಒಳ್ಳೆಯ ಸಂಸ್ಕೃತಿಯಲ್ಲ. ಅದನ್ನು ಯಾರೂ ಮಾಡಬೇಡಿ ಎಂದು ಮನವಿ ಮಾಡಿದರು. ಆದರೆ ಕೊಡಗಿನಲ್ಲಿ ಸಿದ್ದರಾಮಯ್ಯನವರಿಗೆ ಈ ಪರಿಸ್ಥಿತಿ ಬರಲು ಏನು ಕಾರಣ ಎಂಬುದರ ಬಗ್ಗೆ ಸಿದ್ದರಾಮಯ್ಯ ▶ 8ನೇ ಪುಟಕ್ಕೆ

### ನಮ್ಗೆ ಮೊಟ್ಟೆ ಎಸೆಯೋಕೆ ಬರಲ್ವಾ? ಅದನ್ನೆಲ್ಲಾ ನಾವು ಮಾಡಿಕೊಂಡೇ ಬಂದಿರೋದು



ಮಡಿಕೇರಿ, ಆ.18– ನಮಗೆ ಮೊಟ್ಟೆ ಎಸೆಯೋಕೆ ಬರಲ್ವಾ ನಾವು ಹೋರಾಟ ಮಾಡೋಕೆ ಶುರು ಮಾಡಿದರೆ ಸಿಎಂ ಎಲ್ಲೂ ಓಡಾಡೋಕೆ ಆಗಲ್ಲ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ಕಿಡಿಕಾರಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ಬಂದು ಮಳೆ ಹಾನಿಯಾದ ಪ್ರದೇಶಗಳನ್ನು ನೋಡ್ತೀನಿ ಎಂದು ಕಾರ್ಯಕರ್ತರನ್ನು ಬಿಟ್ಟು ಪ್ರತಿಭಟನೆ ಮಾಡಿಸಿದ್ದಾರೆ. ಈ ಬಾರಿ ಕೊಡಗಿನಲ್ಲಿ ಎರಡೂ ಕಡೆ ಕಾಂಗ್ರೆಸ್ ಗೆಲ್ಲುತ್ತೆ ಎಂದು ಬಿಜೆಪಿಯವರು ಹತಾಶರಾಗಿ ಹೀಗೆ ಪ್ರತಿಭಟನೆ ಮಾಡಿದ್ದಾರೆ. ನಮಗೆ ಮೊಟ್ಟೆ ಎಸೆಯೋಕೆ ಬರಲ್ವಾ? ▶ 8ನೇ ಪುಟಕ್ಕೆ




ಮೈಸೂರಿನ ವಿಜಯನಗರ 1ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದಿಂದ ಜಿಲ್ಲಾ ಕನ್ನಡ ಸಾಹಿತ್ಯ ಭವನದ ಆವರಣದಲ್ಲಿ 75ನೇ ಸ್ವಾತಂತ್ರ್ಯ ದಿನವನ್ನು ಆಚರಿಸಲಾಯಿತು. ಈ ವೇಳೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷ ಕಾಳಿಂಗು, ಕಾರ್ಯದರ್ಶಿ ಸಿ.ಜಿ.ಮೂರ್ತಿ, ನಿಕಟಪೂರ್ವ ಅಧ್ಯಕ್ಷ ನರಸೇಗೌಡ, ಗೌರವಾಧ್ಯಕ್ಷ ನಂಜಯ್ಯ, ಸಂಘದ ಪದಾಧಿಕಾರಿಗಳು ಹಾಗೂ ನಿವಾಸಿಗಳು ಹಾಜರಿದ್ದರು.

## ಇಂದು ವೇಷಭೂಷಣ ಸ್ಪರ್ಧೆ



ಮೈಸೂರು, ಆ.18–ಮಕ್ಕಳಲ್ಲಿ ಧಾರ್ಮಿಕ ಪ್ರಜ್ಞೆ ಬೆಳೆಸುವ ಪ್ರಯತ್ನವಾಗಿ ಮತ್ತು ಅವರಲ್ಲಿನ ಪ್ರತಿಭೆಯನ್ನು ಗುರುತಿಸಿ ಬೆಳೆಸುವ ಸದುದ್ದೇಶದಿಂದ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಶ್ರೀಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ 6 ವರ್ಷದೊಳಗಿನ ಮಕ್ಕಳಿಗೆ ಮುದ್ದು ಬಾಲರಾಧಾಕೃಷ್ಣ ವೇಷಭೂಷಣ ಸ್ಪರ್ಧೆಯನ್ನು ಆ.19ರಂದು ಬೆಳಗ್ಗೆ 10.30ರಿಂದ ಮಧ್ಯಾಹ್ನ 12.30ರವರೆಗೆ ವಿಶ್ವೇಶ್ವರ ನಗರದಲ್ಲಿರುವ ಮಹರ್ಷಿ ಪಬ್ಲಿಕ್ ಶಾಲೆ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ವಿಜೇತರಾದ ಮಕ್ಕಳಿಗೆ ಮೊದಲನೇ ಬಹುಮಾನ 2222 ರೂ., ದ್ವಿತೀಯ ಬಹುಮಾನ 1111 ರೂ., ತೃತೀಯ ಬಹುಮಾನ 555ರೂ, ನಗದು ಹಾಗೂ ಪ್ರಶಸ್ತಿ ಫಲಕ ನೀಡಿ ಅಭಿನಂದಿಸಲಾಗುವುದು. ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲಾ ಮಕ್ಕಳಿಗೂ ಆಕರ್ಷಕ ಬಹುಮಾನ ಮತ್ತು ಪ್ರಶಸ್ತಿ ಪತ್ರ ನೀಡಲಾಗುವುದು ಎಂದು ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ



ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ಶಾಸಕ ಸಿ.ಟಿ.ರವಿ ಸುತ್ತೂರು ಮಠಕ್ಕೆ ಭೇಟಿ ನೀಡಿ ಶ್ರೀಗಳ ಆಶೀರ್ವಾದ ಪಡೆದು ಪ್ರಸ್ತುತ ರಾಜ್ಯದಲ್ಲಾಗುತ್ತಿರುವ ಬೆಳವಣಿಗೆಗಳ ಬಗ್ಗೆ ಚರ್ಚಿಸಿದರು. ನಗರ ಬಿಜೆಪಿ ಅಧ್ಯಕ್ಷ ಶ್ರೀವತ್ಸ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರತಾಪ್. ಜಿ. ದೇವನೂರು ಜೊತೆಯಲ್ಲಿದ್ದರು.

## ನಾಳೆ ಅರಸು ಆದರ್ಶ ಭೂಷಣ ಪ್ರಶಸ್ತಿ ಪ್ರದಾನ

### ಡಿಸಿ ಕಚೇರಿ ಆವರಣದಲ್ಲಿ ಅರಸು ಪ್ರತಿಮೆ ಸ್ಥಾಪಿಸಲು ಅನುಮೋದನೆ

ಮೈಸೂರು, ಆ.18(ಆರ್‌ಕೆಬಿ)– ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನಾ ಸಮಿತಿ ವತಿಯಿಂದ ಆ.20ರಂದು ಬೆಳಗ್ಗೆ 11.30ಕ್ಕೆ ಮೈಸೂರಿನ ರಾಣಿ ಬಹದ್ದೂರ್ ಸಭಾಂಗಣದಲ್ಲಿ ದೇವರಾಜ ಅರಸು ಅವರ ಜನ್ಮದಿನೋತ್ಸವ ಹಾಗೂ ಸಾಧಕರಿಗೆ ಅರಸು ಆದರ್ಶ ಭೂಷಣ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ ಎಂದು ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಿವೃತ್ತ ಲೋಕಾಯುಕ್ತ ಎನ್.ಸಂತೋಷ್ ಹೆಗಡೆ, ಶಾಸಕ ಕೆ.ಆರ್. ರಮೇಶ್‌ಕುಮಾರ್, ಕುಲಪತಿ ಪ್ರೊ.ಜಿ. ಹೇಮಂತ್‌ಕುಮಾರ್, ಮಾಜಿ ಶಾಸಕ ವಾಸು ಇನ್ನಿತರರು ಅತಿಥಿಗಳಾಗಿ ಭಾಗವಹಿಸುವರು. ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್, ಶಾಸಕ ತನ್ವೀರ್‌ಸೇಠ್, ರಘು ಆರ್.ಕೌಟಿಲ್ಯ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು. ಇದೇ ಸಂದರ್ಭದಲ್ಲಿ ಮೈಸೂರಿನ ನೂತನ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪಿಸಲು ಸರ್ಕಾರದ ಅನುಮೋದನೆ ದೊರೆತಿದೆ. ಸದ್ಯದಲ್ಲೇ ಇದಕ್ಕೆ ಚಾಲನೆ ದೊರೆಯಲಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಮಿತಿ ಅಧ್ಯಕ್ಷ ಜಾಕೀರ ಹುಸೇನ್, ಪ್ರಶಾಂತ್ ಆರ್ಯ, ದ್ಯಾವಪ್ಪ ನಾಯಕ, ಕಮಲ ಅನಂತರಾಮನ್ ಉಪಸ್ಥಿತರಿದ್ದರು.


## ವಿದ್ಯುತ್ ಅದಾಲತ್ ಕಾರ್ಯಕ್ರಮ

ಮೈಸೂರು, ಆ.18– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ವತಿಯಿಂದ ಆಗಸ್ಟ್ 20 ರಂದು ಶನಿವಾರ ವಿದ್ಯುತ್ ಅದಾಲತ್ ಹಮ್ಮಿಕೊಳ್ಳಲಾಗಿದೆ. ನ.ರಾ.ಮೊಹಲ್ಲಾ ವಿಭಾಗ ವ್ಯಾಪ್ತಿಯ ಉಪವಿಭಾಗಗಳಾದ ಕೇಂದ್ರ ಉಪವಿಭಾಗದ ಕಳಸ್ತವಾಡಿ, ವರುಣ ಉಪವಿಭಾಗದ ಯಾಂದಳ್ಳಿ, ಚಾಮುಂಡಿಪುರಂ ಉಪವಿಭಾಗದ ಏಳಿಗೆಹುಂಡಿ, ಜ್ಯೋತಿನಗರ ಉಪವಿಭಾಗದ ಜ್ಯೋತಿನಗರ ಉಪವಿಭಾಗ, ನ.ರಾ ಮೊಹಲ್ಲಾ ಉಪವಿಭಾಗದ ಕಳಸ್ತವಾಡಿ ಉಪವಿಭಾಗದ ವ್ಯಾಪ್ತಿಯ ಗ್ರಾಮಗಳಲ್ಲಿ ವಿದ್ಯುತ್ ಅದಾಲತ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಗ್ರಾಹಕರು ವಿದ್ಯುತ್ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳೇನಾದರೂ ಇದ್ದಲ್ಲಿ ಆಯಾ ಉಪವಿಭಾಗದ ವ್ಯಾಪ್ತಿಯ ಆಯ್ದ ಗ್ರಾಮಗಳಲ್ಲಿ ನಡೆಯುವ ಸಭೆಯಲ್ಲಿ ಲಿಖಿತ ಅರ್ಜಿಗಳನ್ನು ಸಲ್ಲಿಸಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ನ.ರಾ.ಮೊಹಲ್ಲಾ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಸ್ತೆಗೆ ಹೊಸ ನಾಮಕರಣ: ಆಕ್ಷೇಪಣೆಗೆ ಆಹ್ವಾನ


ಮೈಸೂರು, ಆ.18–ಹೂಟಗಳ್ಳಿ ನಗರಸಭಾ ಕಾರ್ಯಾಲಯ ವತಿಯಿಂದ ಹೂಟಗಳ್ಳಿ ನಗರ ವ್ಯಾಪ್ತಿಗೆ ಒಳಪಡುವ ಎಸ್‌ಆರ್‌ಎಸ್‌ಬಸ್ ನಿಲ್ದಾಣದ ಎದುರಿನ ರಸ್ತೆಗೆ ಸರ್ಕಾರಿ ಮಹಿಳಾ ಕಾಲೇಜು ರಸ್ತೆ ಎಂದು ನಾಮಕರಣ ಮಾಡುವ ಬಗ್ಗೆ ತಮ್ಮ ಸಲಹೆ/ಸೂಚನೆ/ಆಕ್ಷೇಪಣೆಗಳನ್ನು ಪ್ರಕಟಣೆಯ 30 ದಿನಗಳೊಳಗಾಗಿ ಕಚೇರಿಗೆ ಸಲ್ಲಿಸಬೇಕು ಎಂದು ಹೂಟಗಳ್ಳಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಹಿಳೆ ನಾಪತ್ತೆ




ಮೈಸೂರು, ಆ.18 –ಆಸ್ಪತ್ರೆಗೆ ಚಿಕಿತ್ಸೆಗಾಗಿ ತೆರಳಿದ್ದ ಮಹಿಳೆ ನಾಪತ್ತೆಯಾಗಿದ್ದು, ಕೆ.ಆರ್.ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಕಳೆದ ಆರು ತಿಂಗಳ ಹಿಂದೆ ವಿವಾಹವಾಗಿದ್ದ ಎಂ. ಲತಾ (19) ನಾಪತ್ತೆಯಾದವರು. ನಗರದ ಜೆಎಸ್‌ಎಸ್ ಆಸ್ಪತ್ರೆಗೆ ಚಿಕಿತ್ಸೆಗಾಗಿ ಪತಿ ಜೊತೆ ಆಗಮಿಸಿದ್ದ ಅವರು, ಚಿಕಿತ್ಸೆ ಬಳಿಕ ಪತಿ ಬೈಕ್ ತರುವಷ್ಟರಲ್ಲಿ ನಾಪತ್ತೆಯಾಗಿದ್ದಾರೆ. ಕೆ.ಆರ್. ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ದೂ. 0821–2418319, 2418519 ಸಂಪರ್ಕಿಸಬಹುದು.

## ವ್ಯಕ್ತಿ ನಾಪತ್ತೆ



ಮೈಸೂರು, ಆ. 18– ವ್ಯಕ್ತಿಯೋರ್ವ ನಾಪತ್ತೆಯಾಗಿರುವ ಬಗ್ಗೆ ವಿದ್ಯಾರಣ್ಯಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೈಸೂರಿನ ವಿದ್ಯಾರಣ್ಯಪುರಂ ನಿವಾಸಿ ಡಿ. ಪ್ರಶಾಂತ್ (40) ನಾಪತ್ತೆಯಾದವರು. ಜೂನ್ 27 ರಂದು ಕೆಲಸಕ್ಕೆ ಹೋಗುತ್ತೇನೆಂದು ಹೇಳಿ ಹೋದವರು ಇದುವರೆಗೂ ಮನೆಗೆ ವಾಪಸ್ ಬಂದಿಲ್ಲ ಎಂದು ಆತನ ಪತ್ನಿ ಮಂಜುಳ ದೂರು ನೀಡಿದ್ದಾರೆ. ಈತನ ಬಗ್ಗೆ ಮಾಹಿತಿ ತಿಳಿದಲ್ಲಿ ವಿದ್ಯಾರಣ್ಯಪುರಂ ಪೊಲೀಸ್ ಠಾಣೆ ದೂ. 2418122, 2418339 ಸಂಪರ್ಕಿಸಲು ಕೋರಲಾಗಿದೆ.

## ನಿಧನ



### ಕೆ. ಗಂಗಯ್ಯ

ಮೈಸೂರು, ಆ. 18– ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಹಾಗೂ ಮೈಸೂರಿನ ವಿಜಯನಗರ 3ನೇ ಹಂತದ ನಿವಾಸಿ ಕೆ.ಗಂಗಯ್ಯ (82) ಗುರುವಾರ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನಲ್ಲಿರುವ ಚಿರಶಾಂತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ರಾಜ್ಯಪಾಲರಿಂದ ಎಂಆರ್‌ಸಿ ಕಣ್ಣಿನ ಆಸ್ಪತ್ರೆಯಲ್ಲಿ ಉಚಿತ ನೇತ್ರ ತಪಾಸಣಾ ಶಿಬಿರ ಉದ್ಘಾಟನೆ

### ಅತ್ಯಾಧುನಿಕ ಸೌಲಭ್ಯ, ಉಚಿತ ಸೇವೆಗೆ ತಾವರ್‌ಚಂದ್ ಗೆಹ್ಲೋಟ್ ಪ್ರಶಂಸೆ

ಮೈಸೂರು, ಆ. 18(ಆರ್‌ಕೆ)– ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಎಂಆರ್‌ಸಿ ಕಣ್ಣಿನ ಆಸ್ಪತ್ರೆಯಲ್ಲಿ ಗುರುವಾರ ಏರ್ಪಡಿಸಿದ್ದ ಮೆಗಾ ಉಚಿತ ನೇತ್ರ ತಪಾಸಣೆ ಹಾಗೂ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸಾ ಶಿಬಿರವನ್ನು ರಾಜ್ಯಪಾಲ ತಾವರ್‌ಚಂದ್ ಗೆಹ್ಲೋಟ್ ಉದ್ಘಾಟಿಸಿದರು.

ದಿ ಮೈಸೂರು ರೇಸ್ ಕ್ಲಬ್ (ಎಂಆರ್‌ಸಿ) ಚಾರಿಟಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಮೆಗಾ ಕಣ್ಣಿನ ತಪಾಸಣಾ ಶಿಬಿರ ಮತ್ತು ಜಯ ಚಾಮರಾಜ ಒಡೆಯರ್ ಅವರ 103ನೇ ವರ್ಷದ ಜನ್ಮ ದಿನೋತ್ಸವವನ್ನು ಉದ್ಘಾಟಿಸಿದ ರಾಜ್ಯಪಾಲರು, ಜಯಚಾಮ ರಾಜ ಒಡೆಯರ್ ಭಾವಚಿತ್ರವನ್ನು ಅನಾ ವರಣಗೊಳಿಸಿದರು. ನಂತರ ಆಸ್ಪತ್ರೆಯಲ್ಲಿ ಒದಗಿಸಿರುವ ಅತ್ಯಾಧುನಿಕ ಸೌಲಭ್ಯ ಗಳನ್ನು ವೀಕ್ಷಿಸಿದ ಅವರು, ಎಂಆರ್‌ಸಿ ಚಾರಿಟಬಲ್ ಟ್ರಸ್ಟ್‌ನಿಂದ ಸಾರ್ವಜನಿಕ ರಿಗೆ ಸಲ್ಲಿಸುತ್ತಿರುವ ಉಚಿತ ಸೇವೆಯನ್ನು ಪ್ರಶಂಸಿಸಿದರು. ಆಸ್ಪತ್ರೆ ಮತ್ತು ಶಿಕ್ಷಣ ಸಂಸ್ಥೆಗಳ ಕಾರ್ಯಕ್ರಮದಲ್ಲಿ ಭಾಗವಹಿ ಸುವುದೆಂದರೆ ತಮಗೆ ತುಂಬಾ ಇಷ್ಟ ಎಂದು ರಾಜ್ಯಪಾಲರು ಎಂಆರ್‌ಸಿ ಚಾರಿಟಬಲ್ ಟ್ರಸ್ಟ್ ಪದಾಧಿಕಾರಿಗಳಿಗೆ ಚಹಾ ಸವಿಯುವ ವೇಳೆ ತಿಳಿಸಿದರು. ಎಂಆರ್‌ಸಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವೈ.ಬಿ. ಗಣೇಶ್, ಟ್ರಸ್ಟಿಗಳಾದ ಕೆ.ಎಂ.ಚಂದ್ರೇಗೌಡ, ಡಾ.ಸಿ.ಡಿ. ಶ್ರೀನಿವಾಸಮೂರ್ತಿ, ಚದುರಂಗ ಕಾಂತರಾಜ ಅರಸ್, ದುಶ್ಯಂತ್ ಪ್ರಸಾದ್, ಎಂಆರ್‌ಸಿ ಕಾರ್ಯಕಾರಿಣಿ ಸಮಿತಿ ಸದಸ್ಯರಾದ ಹೆಚ್.ಕೆ. ರಮೇಶ್, ವೈ.ಪಿ. ಉದಯಶಂಕರ್, ಜಯರಾಜ ಅರಸ್, ಎಂ.ಆರ್. ಕಾಂತರಾಜ ಅರಸ್ ಹಾಗೂ ಹಲವರು ಈ ಸಂದರ್ಭ ಉಪಸ್ಥಿತರಿದ್ದರು.

ಇಂದಿನ ಉಚಿತ ನೇತ್ರ ತಪಾಸಣಾ ಶಿಬಿರದಲ್ಲಿ ಸಿ.ಎಸ್. ಮುರಳಿ ಅವರು ತಮ್ಮ ತಂದೆ ಸಿ. ಶೇಷಾಚಲನ್ ಅವರ ಸ್ಮರಣಾರ್ಥ ಎಂಆರ್‌ಸಿ ಚಾರಿಟಬಲ್ ಟ್ರಸ್ಟ್‌ಗೆ 1 ಲಕ್ಷ ರೂ.ಗಳ ಚೆಕ್ ಅನ್ನು ಇದೇ ಸಂದರ್ಭ ಕೊಡುಗೆಯಾಗಿ ನೀಡಿದರು. ಇಂದಿನ ಶಿಬಿರದಲ್ಲಿ 53 ಮಂದಿಯ ನೇತ್ರ ತಪಾಸಣೆ ಮಾಡಲಾಗಿ, ಆ ಪೈಕಿ 51 ರೋಗಿಗಳಿಗೆ ಪೊರೆ ಶಸ್ತ್ರ ಚಿಕಿತ್ಸೆಗೆ ಗುರುತಿಸಲಾಯಿತು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ವೈ.ಬಿ. ಗಣೇಶ್ ಅವರು, ಕಳೆದ ಏಪ್ರಿಲ್‌ನಿಂದ ಮೈಸೂರು ಜಿಲ್ಲೆಯಲ್ಲಿ 8 ಶಿಬಿರಗಳನ್ನು ನಡೆಸಿ 151 ರೋಗಿಗಳಿಗೆ ಉಚಿತ ಕ್ಯಾಟರಾಕ್ಟ್ ಸರ್ಜರಿ ಮಾಡಲಾಗಿದೆ. ಚಾಮರಾಜ ನಗರದಲ್ಲೂ ನಡೆಸಿದ ಕಣ್ಣಿನ ತಪಾಸಣಾ ಶಿಬಿರದಲ್ಲಿ 21 ಸರ್ಜರಿ ನಡೆಸಲಾಗಿದೆ ಎಂದರು.

ಎಂಆರ್‌ಸಿ ಕಣ್ಣಿನ ಆಸ್ಪತ್ರೆಯಲ್ಲಿ ಅತ್ಯಾಧುನಿಕ ಉಪಕರಣಗಳು ಹಾಗೂ ಇನ್ನಿತರ ಸೌಲಭ್ಯಗಳನ್ನು ಒದಗಿಸಲಾಗಿದ್ದು, ಜನರಿಗೆ ಉಚಿತವಾಗಿ ಕಣ್ಣಿನ ತಪಾಸಣೆ ಮಾಡಿ ಶಸ್ತ್ರ ಚಿಕಿತ್ಸೆ ಮಾಡಲಾಗುತ್ತಿದೆ. ಅಗತ್ಯವಿರುವವರು ವೆಬ್‌ಸೈಟ್ https: //mrceyehospital.in ಸಂಪರ್ಕಿಸಿ ಸೇವೆಯನ್ನು ಪಡೆಯಬೇಕೆಂದು ಗಣೇಶ್ ಅವರು ತಿಳಿಸಿದರು. ಜಿಲ್ಲಾಧಿಕಾರಿ ಡಾ.ಬಗಾದಿಗೌತಮ್, ಮೈಸೂರು ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ, ಮುಡಾ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್, ಪಾಲಿಕೆ ಆಯುಕ್ತ ಜಿ. ಲಕ್ಷ್ಮಿಕಾಂತರೆಡ್ಡಿ ಸೇರಿದಂತೆ ಹಲವು ಅಧಿಕಾರಿಗಳು ಈ ವೇಳೆ ಉಪಸ್ಥಿತರಿದ್ದರು.



ಮೈಸೂರಿನ ಎಂಆರ್‌ಸಿ ಕಣ್ಣಿನ ಆಸ್ಪತ್ರೆಯಲ್ಲಿ ಗುರುವಾರ ಉಚಿತ ನೇತ್ರ ತಪಾಸಣಾ ಶಿಬಿರ ಉದ್ಘಾಟಿಸಿದ ರಾಜ್ಯಪಾಲ ತಾವರ್‌ಚಂದ್ ಗೆಹ್ಲೋಟ್ ಅವರು ಜಯಚಾಮರಾಜ ಒಡೆಯರ್ ಅವರ ಭಾವಚಿತ್ರವನ್ನು ಅನಾವರಣಗೊಳಿಸಿದರು. ಎಂಆರ್‌ಸಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವೈ.ಬಿ. ಗಣೇಶ್, ಟ್ರಸ್ಟಿಗಳಾದ ಕೆ.ಎಂ. ಚಂದ್ರೇಗೌಡ, ಡಾ.ಸಿ.ಡಿ.ಶ್ರೀನಿವಾಸಮೂರ್ತಿ, ಪಾಲಿಕೆ ಸದಸ್ಯೆ ಅಶ್ವಿನಿ ಅನಂತು ಹಾಗೂ ಡಾ. ರೂಪಾ ಅವರನ್ನು ಚಿತ್ರದಲ್ಲಿ ಕಾಣಬಹುದು.

## ಆ.21ರಿಂದ 29ರವರೆಗೆ ಕೃಷ್ಣೋತ್ಸವ ಕಾರ್ಯಕ್ರಮ

ಮೈಸೂರು, ಆ.18– ಧಾರ್ಮಿಕ ದತ್ತಿ ಇಲಾಖೆಯ ವತಿಯಿಂದ ಮೈಸೂರು ಅರಮನೆ ಆವರಣದಲ್ಲಿರುವ ಶ್ರೀ ಕೃಷ್ಣಸ್ವಾಮಿ ದೇವಸ್ಥಾನದಲ್ಲಿ ಕೃಷ್ಣಜನ್ಮಾಷ್ಟಮಿಯ ಪ್ರಯುಕ್ತ ಆಗಸ್ಟ್ 21 ರಿಂದ 29 ರವರೆಗೆ ಕೃಷ್ಣೋತ್ಸವದ ಕಾರ್ಯಕ್ರಮಗಳು ನಡೆಯಲಿವೆ.

**ಕಾರ್ಯಕ್ರಮಗಳ ವಿವರ:** 2022ರ ಆ.21 ರಂದು ಭಾನುವಾರ ಶಿಕ್ಯೋತ್ಸವ, ಆ.22ರಂದು ಸೋಮವಾರ ಪೂತನಿ ಸಂಹಾರ, ಆ,23ರಂದು ಮಂಗಳವಾರ ಶಕಟಾಸುರ ಸಂಸಾರ, ಆ.24ರಂದು ಬುಧವಾರ ಬಕಾಸುರ ವಧೆ, ಆ.25 ಗುರುವಾರ ಯಮಳಾರ್ಜುನ ಮೋಕ್ಷ, ಆ.26ರ ಶುಕ್ರವಾರ ಮೋಹಿನಿ ಅಲಂಕಾರ, ಆ.27ರ ಶನಿವಾರ ಮಲ್ಲಯುದ್ಧ, ಆ.28ರ ಭಾನುವಾರ ರಾಸಕ್ರೀಡೆ ಗೋವಿಗೆ ಕಾಮಧೇನು ಅಲಂಕಾರ ರಾತ್ರಿ 8 ಗಂಟೆಗೆ ಕಂಸವಧೆ, ಆ.29ರ ಸೋಮವಾರ ರುಕ್ಮಿಣಿ ಕಲ್ಯಾಣೋತ್ಸವ ಕಾರ್ಯಕ್ರಮಗಳು ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಉಚಿತ ಸಂವಾದ

ಮೈಸೂರು, ಆ. 18 – ಮೈಸೂರಿನ ಕೃಷಿಕ್ ನವೋದಯ ಫೌಂಡೇಷನ್ ವತಿಯಿಂದ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಆ. 22 ರಂದು ಸಂಜೆ 5.30ಕ್ಕೆ ಉಚಿತ ಸಂವಾದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಭಾಗವಹಿಸಲು ಕೋರಲಾಗಿದೆ. ಮೊ. 9945752592, ದೂ. 0821–2301564

### ಎಸ್‌ಯುಸಿಐ ಸಂಸ್ಥಾಪಕ ಶಿವದಾಸ್ ಘೋಷ್ ಜನ್ಮ ಶತಾಬ್ಧಿ ಅಂಗವಾಗಿ ಪುಸ್ತಕ ಬಿಡುಗಡೆ ಕಾರ್ಯಕ್ರಮ

# 75 ವರ್ಷವಾದರೂ ದೇಶದಲ್ಲಿ ಕೋಮುವಾದ, ಬಡತನ, ನಿರುದ್ಯೋಗ ಇಂದಿಗೂ ಜೀವಂತ

### ಎಸ್‌ಯುಸಿಐ ರಾಜ್ಯ ಸಮಿತಿ ಸದಸ್ಯ ಎಂ.ಎನ್.ಶ್ರೀರಾಮ್ ಬೇಸರ


ಮೈಸೂರು, ಆ.18(ಆರ್‌ಕೆಬಿ)– ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಿಸುತ್ತಿರುವ ಸಂದರ್ಭದಲ್ಲೂ ದೇಶದಲ್ಲಿ ಇಂದಿಗೂ ಕೋಮುವಾದ, ಬಡತನ, ಹಸಿವು, ನಿರುದ್ಯೋಗ, ಅತ್ಯಾಚಾರದಂತಹ ಮೂಲ ಸಮಸ್ಯೆಗಳಿಂದ ನಾವಿನ್ನು ಮುಕ್ತರಾಗಿಲ್ಲ ಎಂದು ಸೋಶಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಎಸ್‌ಯುಸಿಐ) ಪಕ್ಷದ ರಾಜ್ಯ ಸಮಿತಿ ಸದಸ್ಯ ಎಂ.ಎನ್.ಶ್ರೀರಾಮ್ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಇಂಜಿನಿಯರುಗಳ ಸಂಸ್ಥೆ ಸಭಾಂಗಣದಲ್ಲಿ ಪಕ್ಷದ ಸಂಸ್ಥಾಪಕ ಶಿವದಾಸ್ ಘೋಷ್ ಅವರ ಜನ್ಮ ಶತಾಬ್ದಿಯ ಅಂಗವಾಗಿ ಗುರುವಾರ ಆಯೋಜಿಸಿದ್ದ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ನಮ್ಮ ಸಮಾಜ ಅನೇಕ ಹಂತಗಳ ವ್ಯವಸ್ಥೆಯನ್ನು ದಾಟಿ ಬಂಡವಾಳಶಾಹಿ ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ತಲುಪಿದೆ. ಬಂಡವಾಳಶಾಹಿ ವ್ಯವಸ್ಥೆ ತನ್ನ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಕೋಮುವಾದವನ್ನು ಮುನ್ನೆಲೆಗೆ ತರುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.


18ನೇ ವಯಸ್ಸಿನಲ್ಲಿ ಗಾಂಧಿ ಕರೆ ನೀಡಿದ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದ ಶಿವದಾಸ್ ಘೋಷ್, ಎರಡು ವರ್ಷ ಕಾಲ ಜೈಲುವಾಸ ಅನುಭವಿಸಿದ್ದರು. ನಂತರ ಸೆರೆವಾಸದಿಂದ ಬಿಡುಗಡೆಗೊಂಡು ಈಗಾಗಲೇ ಅಸ್ತಿತ್ವದ ಸಿಪಿಐ ಎಂಬ ಕಮ್ಯುನಿಸ್ಟ್ ಪಕ್ಷವಿದ್ದರೂ ಅದು ಮಾರ್ಕ್ಸ್‌ವಾದವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೇ ಭಾರತದಲ್ಲಿ ಸಮಾಜವಾದಿ ಕ್ರಾಂತಿಗೆ ಪೂರಕ ವಾತಾವರಣವಿದ್ದರೂ ಕಾರ್ಮಿಕರನ್ನು ಕ್ರಾಂತಿಯೆಡೆಗೆ ಕೊಂಡೊಯ್ಯಲು ವಿಫಲವಾದ ಕಾರಣ ಶಿವದಾಸ್ ಘೋಷನ್ ಮತ್ತು ಇತರೆ 7 ಮಂದಿ ಸ್ನೇಹಿತರು ಎಸ್‌ಯುಸಿಐ ಪಕ್ಷವನ್ನು ಸ್ಥಾಪಿಸಿದರು ಎಂದು ತಿಳಿಸಿದರು.

ಮಾರ್ಕ್ಸ್‌ವಾದವೇ ಕಾರ್ಮಿಕರ ಅಸ್ತ್ರವಾದರೆ ಮಾತ್ರ ನೀವು ಅನುಭವಿಸುತ್ತಿರುವ ಎಲ್ಲಾ ರೀತಿಯ ಶೋಷಣೆಯಿಂದ ಮುಕ್ತಗೊಳ್ಳಲು ಸಾಧ್ಯ ಎಂದ ಅವರು, ವಿಶ್ವದ ಪ್ರತಿಯೊಬ್ಬ ಕಾರ್ಮಿಕನು ಗೌರವಯುತ ಜೀವನ ನಡೆಸಬೇಕು. ಬಂಡವಾಳಶಾಹಿಗಳು ಜಾರಿಗೊಳಿಸುವ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಸದಾ ಜಾಗೃತರಾಗಿರಬೇಕು. ತಮ್ಮ ಹಕ್ಕುಗಳ ರಕ್ಷಣೆಗಾಗಿ ಹೋರಾಟಕ್ಕೆ ಮುಂದಾಗಬೇಕು ಎಂದು ಕರೆ ನೀಡಿದರು.

ಎಸ್‌ಯುಸಿಐ ಪಕ್ಷದ ರಾಜ್ಯ ಸಮಿತಿ ಸದ್ಯರಾದ ಕೆ.ಉಮಾದೇವಿ, ಚಂದ್ರಶೇಖರ ಮೇಟಿ ಇನ್ನಿತರೆ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.




## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

**19.08.2022 ಶುಕ್ರವಾರ, ಮಳೆ ನಕ್ಷತ್ರ : ಮಖೆ 17.08.2022 ರಿಂದ 30.08.2022**
**ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ,**
**ತಿಥಿ: ಅಷ್ಟಮೀ, ನಕ್ಷತ್ರ : ಕೃತ್ತಿಕಾ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ**

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.05 ಚಿಂತನ, 6.20ಗೀತಾರಾಧನ, 6.35 ಗಾಂಧಿ ಒಂದು ನೆನಪು, ಪ್ರಸ್ತುತಿ– ಪ್ರೊ. ಎನ್. ವೆಂಕೋಬರಾವ್, 6.40 ಅರಿವಿನ ಶಿಖರ, ಗಾಯನ– ಟಿ.ಎನ್. ಅಶ್ವಿನಿ ಮತ್ತು ಎಂ.ಎ. ಶೋಭಾ, ವ್ಯಾಖ್ಯಾನ– ಡಾ. ಪ್ರದೀಪ್ ಕುಮಾರ್ ಹೆಬ್ರಿ, 7.15 ಭಾವಗೀತೆ, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಪ್ರಾಯೋಜಿತ ಆರೋಗ್ಯ ಕಾರ್ಯಕ್ರಮ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳುವಳಿಯ ಪಯಣ– ಆಕಾಶವಾಣಿಯೊಂದಿಗೆ", 10.00 ಎಂ.ಎಸ್. ಆನಂದ್ ಮತ್ತು ಸಂಗಡಿಗರಿಂದ ನಾಗಸ್ವರ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

**ಮಧ್ಯಾಹ್ನ:** 12.30 ದೇವರನಾಮ–ವಂದನ ವಿ., 12.45 ಕಾದಂಬರಿ ವಿಹಾರ– ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ ಉಮೇಶ್ ಎಸ್.ಎಸ್., 1.20 ಭಾವಗೀತೆ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರಕುಮಾರ್, 4.00ಮಹಿಳಾರಂಗ–ಸಖೀಪದ, ಪ್ರಸ್ತುತಿ– ಎಂ.ಎಸ್. ಭಾರತಿ, 4.30 ವೃತ್ತಿ ಮಾಗದರ್ಶನ– ಕಂಪ್ಯೂಟರ್ ಸೈನ್ಸ್ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ವಿ. ರವಿಕುಮಾರ್ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ, ಸಿರಿಧಾನ್ಯಗಳ ಕೃಷಿ, ಮೌಲ್ಯವರ್ಧನೆ ಹಾಗೂ ಮಾರಾಟದಲ್ಲಿನ ಅನುಭವ ಕುರಿತು ಬಿ. ಮಹೇಶ್ ಕುಮಾರ್ ಹಾಗೂ ಸೌಮ್ಯ ಅವರೊಂದಿಗೆ ಮಾತುಕತೆ, 9.00 ಕನ್ನಡ ಭಾರತಿ–ವಿಶ್ವ ಕೋಶ– ಪರಿಕ್ರಮ ಪ್ರಯೋಜನ ಕುರಿತು ಸಂವಾದದಲ್ಲಿ ಭಾಗವಹಿಸುವವರು ಡಾ.ಜಿ.ಎಲ್.ಹೆಗಡೆ, ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಮತ್ತು ಜಿ.ಎಸ್. ಭಟ್, ನಡೆಸಿಕೊಡುವವರು ದಿವಾಕರ ಹೆಗಡೆ

■ **ಪಿ.ಆರ್. ತಿಪ್ಪೇಸ್ವಾಮಿ ಪ್ರತಿಷ್ಠಾನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್‌ನ ಯುವ ನಿಸರ್ಗ ಚಿತ್ರ ಕಲಾವಿದರಿಂದ ವರ್ಷಧಾರೆ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ಬೆಳಗ್ಗೆ 10 ರಿಂದ.

■ **ಜೀವಧಾರ ರಕ್ತನಿಧಿ ಕೇಂದ್ರ :** ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷರು, ಸಾಹಿತಿಗಳಾದ ಡಾ. ಸುಧಾಮೂರ್ತಿ ಅವರ ಜನ್ಮ ದಿನದ ಅಂಗವಾಗಿ ಸರ್ಕಾರಿ ಶಾಲಾ ಮಕ್ಕಳಿಗೆ ಚೇರು, ಓದುವ ಸಾಮಗ್ರಿ ವಿತರಣಾ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಶಾಸಕ ಎಲ್. ನಾಗೇಂದ್ರ, ಮೇಯರ್ ಸುನಂದ ಪಾಲನೇತ್ರ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ಕೃಷ್ಣಮೂರ್ತಿಪುರಂ ರೈಲ್ವೆ ಗೇಟ್ ಬಳಿ, ಬೆಳಗ್ಗೆ 10ಕ್ಕೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿಯವರ 19ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ಶ್ರೀ ಕೃಷ್ಣಾಷ್ಟಮಿ ಪ್ರಯುಕ್ತ ಚಂಡೀಹೋಮ, ಅನಘಾಷ್ಟಮಿ ವ್ರತ, ಗೋಪೂಜೆ, ಗೋಪಾಲಕರಿಗೆ ಸನ್ಮಾನ, ಜನ್ಮಾಷ್ಟಮಿ ಪ್ರಯುಕ್ತ ನಿಶೀಥಿಪೂಜೆ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಮೈಸೂರು ಫೋಟೋಗ್ರಫಿ ಅಸೋಸಿಯೇಷನ್ :** ವಿಶ್ವ ಛಾಯಾಗ್ರಾಹಣ ದಿನಾಚರಣೆ ಪ್ರಯುಕ್ತ ಛಾಯಾಚಿತ್ರ ಪ್ರದರ್ಶನ, ಉದ್ಘಾಟನೆ : ಖ್ಯಾತ ಛಾಯಾಚಿತ್ರಗ್ರಾಹಕರಾದ ಕೃಪಾಕರ ಮತ್ತು ಸೇನಾನಿ, ಸ್ಥಳ: ಸುಚಿತ್ರ ಆರ್ಟ್ ಗ್ಯಾಲರಿ, ಕಲಾಮಂದಿರ, ಬೆಳಗ್ಗೆ 10.30ಕ್ಕೆ.

■ **ಮಹಾರಾಣಿ ಮಹಿಳಾ ಕಲಾ ಕಾಲೇಜು, ಸಾಂಸ್ಕೃತಿಕ ವೇದಿಕೆ, ಅಭಿವ್ಯಕ್ತಿ ವೇದಿಕೆ :** ಸಾಂಸ್ಕೃತಿಕ ಚಟುವಟಿಕೆಗಳ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಶಾಸಕ ಎಲ್. ನಾಗೇಂದ್ರ, ಸಂಸದ ಪ್ರತಾಪ್ ಸಿಂಹ, ಸಮಾರೋಪ ಭಾಷಣ : ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ. ಬಿ.ವಿ. ವಸಂತಕುಮಾರ್, ವಿಶೇಷ ಆಹ್ವಾನಿತರು : ನಟಿ ಭಾವನಾ, ಸ್ಥಳ: ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ವೇದಿಕೆ, ಬೆಳಗ್ಗೆ 10.30ಕ್ಕೆ.

■ **ಪಾಲಿ ಇನ್ಸ್‌ಟಿಟ್ಯೂಟ್, ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ :** ಪಾಲಿಭಾಷಾ ಕಾರ್ಯಾಗಾರ, ಉದ್ಘಾಟನೆ : ರಾಷ್ಟ್ರಪತಿ ಪ್ರಶಸ್ತಿ ಪುರಸ್ಕೃತರಾದ ಡಾ. ಗುರುಪಾದ ಕೆ. ಹೆಗಡೆ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಜಿ. ಹೇಮಂತಕುಮಾರ್, ಮುಖ್ಯ ಅತಿಥಿಗಳು : ಪಾಲಿ ಇನ್ಸ್‌ಟಿಟ್ಯೂಟ್ ಅಧ್ಯಕ್ಷ ರಾಹುಲ್ ಎಂ. ಖರ್ಗೆ, ಆಶಯ ಭಾಷಣ : ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಸ್ಥಳ: ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಬೆಳಗ್ಗೆ 10.30 ರಿಂದ.

■ **ಕೆ.ಎಂ. ಪ್ರವೀಣ್‌ಕುಮಾರ್ ಚಾರಿಟಬಲ್ ಟ್ರಸ್ಟ್ :** ಶ್ರೀ ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ವೇಷಭೂಷಣ ಸ್ಪರ್ಧೆ ವಿಜೇತ ಮಕ್ಕಳಿಗೆ ಬಹುಮಾನ ವಿತರಣಾ ಕಾರ್ಯಕ್ರಮ, ಮುಖ್ಯ ಅತಿಥಿಗಳು : ನಗರ ಬಿಜೆಪಿ ಅಧ್ಯಕ್ಷ ಟಿ.ಎಸ್. ಶ್ರೀವತ್ಸ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಮೈಲ್ಯಾಕ್ ಅಧ್ಯಕ್ಷ ರಘು ಕೌಟಿಲ್ಯ, ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಭವಾನಿ ಶಂಕರ್, ಸ್ಥಳ: ಮಹರ್ಷಿ ಪಬ್ಲಿಕ್ ಶಾಲೆ ಆವರಣ, ಬೆಳಗ್ಗೆ 10.30ಕ್ಕೆ.

■ **ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶ್ರೀ ಕೃಷ್ಣ ಜಯಂತ್ಯೋತ್ಸವ ಸಮಿತಿ :** ಶ್ರೀ ಕೃಷ್ಣ ಜಯಂತಿ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ : ಶಾಸಕ ಎಲ್. ನಾಗೇಂದ್ರ, ಮುಖ್ಯ ಅತಿಥಿಗಳು : ಮೇಯರ್ ಸುನಂದಾ ಪಾಲನೇತ್ರ, ಸಂಸದರಾದ ಪ್ರತಾಪ್ ಸಿಂಹ, ವಿ. ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಷ್, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರದ ಆವರಣ, ಬೆಳಗ್ಗೆ 11ಕ್ಕೆ.

■ **ಭಾವಸಾರ ಕ್ಷತ್ರಿಯ ಮಂಡಳಿ :** ಶ್ರೀ ಕೃಷ್ಣ ಜನ್ಮಾಷ್ಟಮಿ, ಬೆಳಗ್ಗೆ 7 ಗಂಟೆಗೆ ದೇವರಿಗೆ ಅಭಿಷೇಕ, ಕುಂಕುಮಾರ್ಚನೆ, ರಾತ್ರಿ 10.30 ಗಂಟೆಗೆ ಭಾವಸಾರ ಕ್ಷತ್ರಿಯ ಭಜನಾ ಮಂಡಳಿಯವರಿಂದ ಪಂಡರೀ ಭಜನೆ, ರಾತ್ರಿ 12ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಪಾಂಡುರಂಗ ವಿಠ್ಠಲಸ್ವಾಮಿ ದೇವಸ್ಥಾನ, ಕೊತ್ವಾಲ್ ರಾಮಯ್ಯ ರಸ್ತೆ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ), ಚಾಮುಂಡಿಬೆಟ್ಟದ ತಪ್ಪಲು :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ ಅವರಿಂದ ಶರಣ ಸಂಸ್ಕೃತಿ ಕುರಿತು ಪ್ರವಚನ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30 ರಿಂದ.

■ **ಸುಶಿರ ಶ್ರೀ ದೇಶಿಕಾಚಾರ್ಯ ಸಂಗೀತ ಅಕಾಡೆಮಿ :** 20ನೇ ವಾರ್ಷಿಕ ಸಂಗೀತೋತ್ಸವ, ಕೇಶವ್ ಚಂದ್ರ ಅವರಿಂದ ಕೊಳಲು ವಾದನ, ಕೇಶವ್ ಮೋಹನ್–ವಯೋಲಿನ್, ಎ.ರಾಧೇಶ್–ಮೃದಂಗ, ಶಮಿತ್‌ಗೌಡ–ಘಟಂ, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಸಂಗೀತ ಕಲಾನಿಧಿ ಕೆ. ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಲಕ್ಷ್ಮೀಪುರಂ, ಸಂಜೆ 6ಕ್ಕೆ.

**ಸುತ್ತೂರಿನಲ್ಲಿಂದು**

■ **ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ:** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರವಚನ : ಜೆಎಸ್‌ಎಸ್ ಕಾಲೇಜು ಪ್ರಾಧ್ಯಾಪಕ ಪ್ರೊ. ಹೆಚ್.ಬಿ. ದೇವಣ್ಣ, ವಾಚನ : ಜೆಎಸ್‌ಎಸ್ ಪ್ರೌಢಶಾಲೆ ದೈಹಿಕ ಶಿಕ್ಷಕ ಡಿ.ಎಂ. ಸಿದ್ದಲಿಂಗಸ್ವಾಮಿ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಸುತ್ತೂರು ಮಠ, ಸಂಜೆ 6.30ರಿಂದ.

ಮೈಸೂರು ಮಿತ್ರ ಶುಕ್ರವಾರ 19 ಆಗಸ್ಟ್ 2022

# ವಿದ್ಯಾರ್ಥಿಗಳ ದೈಹಿಕ ಬೆಳವಣಿಗೆಗೆ ಕ್ರೀಡೆ ಅಗತ್ಯ

## ಎಂಎಲ್‌ಸಿ ಸಿ.ಎನ್.ಮಂಜೇಗೌಡ ಅಭಿಮತ



ಮೈಸೂರು, ಆ.18– ವಿದ್ಯಾರ್ಥಿಗಳ ದೈಹಿಕ ಬೆಳವಣಿಗೆಗೆ ಕ್ರೀಡೆ ಅಗತ್ಯವಾಗಿದ್ದು, ಪ್ರತಿಯೊಬ್ಬ ವಿದ್ಯಾರ್ಥಿಯು ಯಾವುದಾದರೊಂದು ಕ್ರೀಡೆಯನ್ನು ಕಲಿಯಬೇಕೆಂದು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಕರೆ ನೀಡಿದರು.

ಜಯಪುರದಲ್ಲಿರುವ ಸಿ.ಎನ್.ಎಂ. ಪಬ್ಲಿಕ್ ಶಾಲೆಯಲ್ಲಿ ನಡೆದ ಸಮಾರಂಭದಲ್ಲಿ ಜಯಪುರ ಹೋಬಳಿ ಮಟ್ಟದ ಹಿರಿಯ ಪ್ರಾಥಮಿಕ ಶಾಲಾ ಕ್ರೀಡಾಕೂಟದಲ್ಲಿ ಭಾಗವಹಿಸಿ, ಜಯ ಗಳಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಯಾದ ಕ್ರೀಡೆಯನ್ನು ಕಲಿತು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಆಟ ಆಡಿ ಶಾಲೆಗೆ ಕೀರ್ತಿ ತನ್ನಿರಿ. ಕ್ರೀಡೆಯಲ್ಲಿ ರಾಜ್ಯ ಮತ್ತು ರಾಷ್ಟ್ರ ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳಿಗೆ ಸರ್ಕಾರದ ಉದ್ಯೋಗದಲ್ಲಿ ಮೀಸಲಾತಿ ಇದೆ. ಸಚಿನ್ ತೆಂಡೂಲ್ಕರ್, ಪಿ.ಟಿ. ಉಷಾ, ಪಿ.ವಿ.ಸಿಂಧು, ಕರ್ಣಂ ಮಲ್ಲೇಶ್ವರಿ ಇಂತಹ ಇನ್ನೂ ಹಲವಾರು ಕ್ರೀಡಾಪಟುಗಳು ನಮ್ಮ ದೇಶಕ್ಕೆ ಕೀರ್ತಿ ತಂದಿದ್ದಾರೆ. ಇಂತಹ ಕ್ರೀಡಾಪಟುಗಳನ್ನು ಅನುಸರಿಸಿ ಆಟ ಆಡಬೇಕು. ಆಟ ಆಡುವಾಗ ಶ್ರದ್ಧೆ, ಗುರಿ ಇಟ್ಟುಕೊಂಡು ಶ್ರಮವಹಿಸಿ ಸಾಧನೆ ಮಾಡಬೇಕು. ಸರ್ಕಾರವು ಸಹ ತಾಲೂಕು ಮಟ್ಟದಲ್ಲಿ ಕ್ರೀಡಾಂಗಣಗಳನ್ನು ನಿರ್ಮಿಸಿ ಕ್ರೀಡಾಪಟುಗಳಿಗೆ ಅನುಕೂಲ ಮಾಡಿಕೊಡಬೇಕು. ಸರ್ಕಾರಿ ಶಾಲೆಗಳಲ್ಲಿ ದೈಹಿಕ ಶಿಕ್ಷಕರಿಲ್ಲದೆ ತೊಂದರೆಯಾಗುತ್ತಿದ್ದು, ಸರ್ಕಾರ ದೈಹಿಕ ಶಿಕ್ಷಕರ ನೇಮಕಾತಿ ಮಾಡಿಕೊಂಡು ಕ್ರೀಡಾಪಟುಗಳಿಗೆ ಪ್ರೋತ್ಸಾಹಿಸಬೇಕು ಎಂದರು. ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ಭರತ್ ಮಂಜೇಗೌಡ, ಪ್ರಾಂಶುಪಾಲ ನಾಗೇಶ್, ಹಿರಿಯ ಉಪನ್ಯಾಸಕ ಬಸವನಗೌಡ, ಖಜಾಂಚಿ ಭಾರ್ಗವಿ ಎಂ ಗೌಡ, ಮುಖ್ಯ ಶಿಕ್ಷಕಿ ಸತ್ಯಶೀಲಾ, ನಿರ್ದೇಶಕರುಗಳಾದ ರಾಘವೇಂದ್ರ ಭವ್ಯರಾಘವೇಂದ್ರ, ನಂದರಾಜು, ಮಹಾದೇವಸ್ವಾಮಿ, ಮಹೇಶ್ ಹಾಜರಿದ್ದರು.

## ನಾಳೆ ದೇವರಾಜ ಅರಸು ಜನ್ಮದಿನೋತ್ಸವ; ಪ್ರಶಸ್ತಿ ಪ್ರಧಾನ



ಮೈಸೂರು, ಆ.18– ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನ ಸಮಿತಿ ವತಿಯಿಂದ ಡಿ.ದೇವರಾಜ ಅರಸು ಜನ್ಮದಿನೋತ್ಸವ ಹಾಗೂ 'ಅರಸು ಆದರ್ಶ ಭೂಷಣ' ಪ್ರಶಸ್ತಿ ಪ್ರದಾನ ಸಮಾರಂಭವನ್ನು ಮೈಸೂರಿನ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಆ.20ರ ಬೆಳಗ್ಗೆ 11.30ಕ್ಕೆ ಆಯೋಜಿಸಲಾಗಿದೆ.

ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಅವರು ಸಮಾರಂಭ ಉದ್ಘಾಟಿಸಲಿದ್ದು, ಮಾಜಿ ಸಭಾಪತಿ ಕೆ.ಆರ್.ರಮೇಶ್‌ಕುಮಾರ್ 'ಅರಸು' ಕುರಿತು ಮಾತನಾಡಲಿದ್ದಾರೆ. ಆ ವೇಳೆ ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್, ಶಾಸಕ ತನ್ವೀರ್ ಸೇಠ್ ಹಾಗೂ ಅರಗು ಮತ್ತು ಬಣ್ಣದ ಕಾರ್ಖಾನೆ ಅಧ್ಯಕ್ಷ ರಘು ಆರ್.ಕೌಟಿಲ್ಯ ಅವರಿಗೆ 'ಅರಸು ಆದರ್ಶ ಭೂಷಣ ಪ್ರಶಸ್ತಿ' ಪ್ರದಾನ ಮಾಡಿ, ಅಭಿನಂದಿಸಲಾಗುವುದು. ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಸಮಿತಿ ಗೌರವಾಧ್ಯಕ್ಷ ಎಂ.ಚಂದ್ರಶೇಖರ್, ಅಧ್ಯಕ್ಷ ಜಾಕೀರ್ ಹುಸೇನ್ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

# ಹಲಗಲಿ ಬೇಡರ ಸ್ವಾತಂತ್ರ್ಯ ಹೋರಾಟ ಸದಾ ಸ್ಮರಣೀಯ



ಮೈಸೂರು, ಆ.18–ಬಾಗಲಕೋಟೆಯ ಮುಧೋಳ ತಾಲೂಕಿನ ಹಲಗಲಿ ಗ್ರಾಮದ ಬೇಡರು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮದೇ ರೀತಿಯಲ್ಲಿ ಬಂಡಾಯದ ಕಹಳೆ ಮೊಳಗಿಸಿ ಜನತೆಯಲ್ಲಿ ಬ್ರಿಟಿಷರ ವಿರುದ್ಧ ಜನಜಾಗೃತಿ ಮೂಡಿಸಿದ ವೀರ ಸೇನಾನಿಗಳು. ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕದ ಮೊದಲ ಪ್ರತಿಭಟನೆ ಎಂದೇ ಕರೆಯಲ್ಪಡುವ ಹಲಗಲಿ ಬೇಡರ ಹೋರಾಟ ಸದಾಕಾಲವೂ ಸ್ಫೂರ್ತಿಯಾಗಿದೆ ಎಂದು ಶಾಸಕರಾದ ಎಲ್.ನಾಗೇಂದ್ರ ತಿಳಿಸಿದರು.

ಮೈಸೂರು ನಾಯಕರ ಪಡೆ ವತಿಯಿಂದ ಜಲದರ್ಶಿನಿ ಅತಿಥಿಗೃಹದಲ್ಲಿ ಹಮ್ಮಿಕೊಂಡಿದ್ದ ಹಲಗಲಿ ಬೇಡರ ಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಪುಷ್ಪನಮನ ಸಲ್ಲಿಸಿ ಮಾತನಾಡಿದ ನಾಗೇಂದ್ರ ಅವರು, 1857 ಬ್ರಿಟೀಷ್ ಸರ್ಕಾರದಿಂದ ಶಸ್ತ್ರಾಸ್ತ್ರ ನಿಷೇಧ ಹೇರಲಾಯಿತು. ಇದು ಕ್ರೂರ ಕಾಯ್ದೆ ಆಗಿತ್ತು. ಕೆಲವರು ಒಪ್ಪಿಸಿದರು. ಆದರೆ ಸ್ವಾಭಿಮಾನಿಗಳು ಬೇಟೆಯ ಕಸುಬನ್ನು ಜೀವನದ ಮೂಲವಾಗಿಸಿ ಬದುಕುತ್ತಿದ್ದ ಹಲಗಲಿ ಬೇಡರ ಆಯುಧವೆಂದರೆ ಬಿಲ್ಲು–ಬಾಣ, ಭರ್ಜಿ, ಕತ್ತಿ ಬಿಚ್ಚುಗತ್ತಿ, ಕಠಾರಿಗಳಾಗಿದ್ದವು. ಇವರು ಈ ಕಾಯ್ದೆಯನ್ನು ವಿರೋಧಿಸಿದರು. ಪ್ರಾಣ ಬಿಟ್ಟೇವು ಆದರೆ ನಮ್ಮ ಶಸ್ತ್ರಾಸ್ತ್ರ ಬಿಡೆವು ಎಂದು ಬ್ರಿಟಿಷರ ಆದೇಶ ವಿರೋಧಿಸಿದರು. ಇದರಿಂದಾಗಿ ರೊಚ್ಚಿಗೆದ್ದ ಬ್ರಿಟೀಷ್ ಸರ್ಕಾರದ ಸೈನ್ಯ ಹಲಗಲಿಗೆ ರಾತ್ರೋರಾತ್ರಿ ಯುದ್ಧ ಸಾರಿತು.

ಹಲಗಲಿ ಬೇಡರಲ್ಲಿ ಪ್ರಮುಖವಾಗಿ ಪೂಜಾರಿ ಹಣಮಪ್ಪ, ಜಡಗ, ಬಾಲ, ರಾಮ, ಭೀಮ, ದ್ಯಾಮ ಬೇಡರ ಪಡೆಯ ಮುಂಚೂಣಿಯಲ್ಲಿದ್ದು ಹೋರಾಡಿದರು. ಇವರನ್ನು ಸೋಲಿಸಲು ವಿಫಲವಾದ ಬ್ರಿಟೀಷ್ ಪಡೆ ನಡುರಾತ್ರಿಯಲ್ಲಿ ಊರಿಗೆ ಬೆಂಕಿ ಹಚ್ಚಿತು. ಇಪ್ಪತ್ತೂರು ಮಂದಿ ಹತ್ತಿಕಟ್ಟಿಗೆಯಲ್ಲಿ ಬಚ್ಚಿಟ್ಟುಕೊಂಡಿದ್ದ ಬೇಡರನ್ನು ಬೆಂಕಿ ಹಚ್ಚಿ ಜೀವಂತವಾಗಿ ಕೊಂದರು. ಯಾವ ಸಂಸ್ಥಾನದ ನೆರವು ಪಡೆಯದೇ ಹೋರಾಡಿದ ವೀರಮಣಿಗಳಾದ ಹಲಗಲಿ ಬೇಡರು ಸ್ವಾತಂತ್ರ್ಯ ಸ್ವಾಭಿಮಾನ ತಾಯಿ ನಾಡಿಗೆ ಬಲಿಯಾದವರ ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರದಲ್ಲಿ ಬರೆಯಬೇಕು ಎಂದರು.

ಕಾರ್ಯಕ್ರಮದಲ್ಲಿ ಬಿಜೆಪಿ ಮುಖಂಡರಾದ ಎಲ್.ಚೌಡಪ್ಪ, ಮೈಸೂರು ನಾಯಕರ ಪಡೆ ಅಧ್ಯಕ್ಷ ಪಡುವಾರಹಳ್ಳಿ ಎಂ ರಾಮಕೃಷ್ಣ, ನಗರಪಾಲಿಕೆ ಸದಸ್ಯರಾದ ಆರ್. ರಂಗಸ್ವಾಮಿ, ಎಂ. ಚಿಕ್ಕವೆಂಕಟು, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಸಿ.ರೇವಣ್ಣ, ನಿರ್ದೇಶಕರಾದ ಕೆ.ಉಮಾಶಂಕರ್, ಹೆಚ್.ಹರೀಶ್ ಕುಮಾರ್, ರಾ.ಸಿದ್ದರಾಮು, ಯತೀಶ್, ಎಂ. ಶಿವಪ್ರಕಾಶ್, ಚಾಮರಾಜ ಬಿಜೆಪಿ ಎಸ್‌ಟಿ ಮೋರ್ಚಾದ ನಾರಾಯಣಸ್ವಾಮಿ, ಎಂ. ರವಿಕುಮಾರ್, ಮಂಜುನಾಥಪುರಂ ಎಂ. ಮಹೇಶ್, ತಬಲ ರಾಮಣ್ಣ, ಅರ್ಜುನ್, ಗೋವಿಂದ, ನಟರಾಜು, ಜಯಣ್ಣ, ದಿನೇಶ್ ಗೌಡ, ಜೆಸಿಬಿ ರವಿ.ಕಿರಣ್, ನಾಗನಾಯಕ, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕರಾದ ಸಿ.ಡಿ.ಕುಮಾರ್, ಬಿ.ಕುಮಾರ್ ಗೌಡ, ರವಿಚಾಮ, ರಘು, ಪ್ರವೀಣ್, ಲೋಕೇಶ್, ಸುಧಾ ಬೋರಪ್ಪ, ಬಂಬೂಬಜಾರ್ ಶ್ರೀನಿವಾಸ್ ಇನ್ನಿತರರಿದ್ದರು.

## ಆ.21ರಂದು ಸಿಜಿಕೆ ರಂಗ ಪುರಸ್ಕಾರ ಪ್ರಶಸ್ತಿ ಪ್ರದಾನ

ಮೈಸೂರು, ಆ.18(ಆರ್‌ಕೆಬಿ)– ನೆಲೆ ಹಿನ್ನೆಲೆ ಸಂಸ್ಥೆ, ಕರ್ನಾಟಕ ಬೀದಿ ನಾಟಕ ಅಕಾಡೆಮಿ ಹಾಗೂ ಕರ್ನಾಟಕ ರಂಗ ಪರಿಷತ್ ಜಂಟಿ ಆಶ್ರಯದಲ್ಲಿ ಆ.21 ರಂದು ಸಂಜೆ 6.15ಕ್ಕೆ ಕಲಾಮಂದಿರದ ಕಿರು ರಂಗಮಂದಿರದಲ್ಲಿ ಸಿಜಿಕೆ ರಂಗ ಪುರಸ್ಕಾರ ಪ್ರಶಸ್ತಿ ನೀಡಿಕೆ ಹಾಗೂ ಫೂಲನ್ ದೇವಿ ನಾಟಕ ಪ್ರದರ್ಶನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕರ್ನಾಟಕ ರಂಗ ಪರಿಷತ್ ರಾಜ್ಯ ಸಂಚಾಲಕ ಸಿ.ಎಂ.ನರಸಿಂಹಮೂರ್ತಿ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಎಂ.ಎಂ.ಸುಗುಣ ಹಾಗೂ ಶಿವಾಜಿರಾವ್ ಜಾಧವ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಬಳಿಕ ಸ್ವತಂತ್ರ ಭಾರತದ ಬಹು ದೊಡ್ಡ ಕಥನವನ್ನು, ರಾಜಕೀಯ ಮತ್ತು ಸಾಂಸ್ಕೃತಿಕ ವ್ಯವಸ್ಥೆಯ ಕ್ರೂರತೆಯನ್ನು ಎಳೆ ಎಳೆಯಾಗಿ ಬಿಚ್ಚಿಡುತ್ತಾ, ಸಾಂಸ್ಕೃತಿಕ ಪರಂಪರೆಯನ್ನು ಎದುರಿಸುತ್ತಲೇ ಬೆಳೆದ ದಸ್ಯು ಸುಂದರಿ 'ಫೂಲನ್ ದೇವಿ' ನಾಟಕ ಪ್ರದರ್ಶನ ನಡೆಯಲಿದೆ ಎಂದು ತಿಳಿಸಿದರು.

ಅಂದು ಸಂಜೆ 6.15ಕ್ಕೆ ಯೋಜನಾ ಇಲಾಖೆಯ ಪ್ರದೇಶ ಅಭಿವೃದ್ಧಿ ಮಂಡಳಿ ನಿರ್ದೇಶಕ ಡಿ.ಚಂದ್ರಶೇಖರಯ್ಯ ಉದ್ಘಾಟನೆ ನೆರವೇರಿಸುವರು. ಕರ್ನಾಟಕ ನಾಟಕ ಅಕಾಡೆಮಿ ಮಾಜಿ ಅಧ್ಯಕ್ಷ ಶ್ರೀನಿವಾಸ ಜಿ.ಕಪ್ಪಣ್ಣ ಪ್ರಶಸ್ತಿ ಪ್ರದಾನ ಮಾಡುವರು. ಹಾಸನ ವಾಣಿಜ್ಯ ತೆರಿಗೆಗಳ ಇಲಾಖೆ ಉಪ ಆಯುಕ್ತ ಡಿ.ಎಂ.ಮಂಜುನಾಥ ಸೋಸ್ಲೆ ಅಧ್ಯಕ್ಷತೆ ವಹಿಸುವರು. ಎಪಿಎಂಸಿ ಮಾಜಿ ಉಪಾಧ್ಯಕ್ಷ ಜವರಪ್ಪ ಭಾಗವಹಿಸುವರು ಎಂದರು. ನೆಲೆ ಹಿನ್ನೆಲೆ ಅಧ್ಯಕ್ಷ ಕೆ.ಆರ್. ಗೋಪಾಲಕೃಷ್ಣ, ನಿರ್ದೇಶಕ ರಾಜ್‌ಗುರು, ನಯನ ಸೂಡಾ, ಶ್ರೀಧರ್ ಹಾಜರಿದ್ದರು.

## ——— ಕೊಡಗಲ್ಲಿ ಸಿದ್ದರಾಮಯ್ಯ ಕಾರಿನ ಮೇಲೆ ಮೊಟ್ಟೆ ಎಸೆತ ———

# ಮೈಸೂರಿನ ವಿವಿಧೆಡೆ ಕಾಂಗ್ರೆಸ್ ಪ್ರತಿಭಟನೆ

### ರಸ್ತೆ ತಡೆ, ಟೈರ್‌ಗೆ ಬೆಂಕಿ | ಮೊಟ್ಟೆ ಎಸೆದವರ ಬಂಧನಕ್ಕೆ ಆಗ್ರಹ | ಬಿಜೆಪಿ ನಾಯಕರಿಗೆ ಕಪ್ಪುಪಟ್ಟಿ ಪ್ರದರ್ಶನ ಎಚ್ಚರಿಕೆ



ಮೈಸೂರಿನ ರಾಮಸ್ವಾಮಿ ವೃತ್ತದ ಬಳಿ ರಸ್ತೆ ತಡೆದು ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.



ಮೈಸೂರು ಸಿಲ್ಕ್ ಫ್ಯಾಕ್ಟರಿ ವೃತ್ತದ ಬಳಿ ಕೆ.ಆರ್.ಕ್ಷೇತ್ರದ ಕಾಂಗ್ರೆಸ್ ಮುಖಂಡರು ಪ್ರತಿಭಟನೆ ನಡೆಸಿ, ಬಿಜೆಪಿ ನಡೆ ಖಂಡಿಸಿದರು.

ಮೈಸೂರು, ಆ.18(ಎಸ್‌ಬಿಡಿ)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕೊಡಗು ಜಿಲ್ಲೆ ಭೇಟಿ ವೇಳೆ ಬಿಜೆಪಿಯವರು ಗೂಂಡಾವರ್ತನೆ ತೋರಿದ್ದಾರೆಂದು ಆರೋಪಿಸಿ ಮೈಸೂರಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರು ದಿಢೀರ್ ಪ್ರತಿಭಟನೆ ನಡೆಸಿ, ಆಕ್ರೋಶ ವ್ಯಕ್ತಪಡಿಸಿದರು.

ನಗರದ ರಾಮಸ್ವಾಮಿ ವೃತ್ತದಲ್ಲಿ ಜಮಾಯಿಸಿದ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ರಸ್ತೆ ತಡೆದು, ಟೈರ್‌ಗೆ ಬೆಂಕಿ ಹಚ್ಚಿ ಪ್ರತಿಭಟಿಸುವ ಮೂಲಕ ಬಿಜೆಪಿಯವರ ನಡೆಯನ್ನು ತೀವ್ರವಾಗಿ ಖಂಡಿಸಿದರು.

ಸಿದ್ದರಾಮಯ್ಯನವರ ಜನಪ್ರಿಯತೆ ಕಂಡು ವಿಚಲಿತವಾಗಿರುವ ಬಿಜೆಪಿ, ಸಮಾಜದಲ್ಲಿ ಅಶಾಂತಿ ಸೃಷ್ಟಿಸುವ ಮೂಲಕ ಬೇಳೆ ಬೇಯಿಸಿಕೊಳ್ಳುವ ಪ್ರಯತ್ನ ನಡೆಸಿದೆ. ಈಗ ಇನ್ನಷ್ಟು ಮುಂದುವರೆದು ಸಿದ್ದರಾಮಯ್ಯನವರ ಕಾರ್ಯಕ್ರಮಕ್ಕೆ ಅಡ್ಡಿಪಡಿಸುವ ಮಟ್ಟಕ್ಕೆ ಹೋಗಿದ್ದಾರೆ. ಕಾರಿನ ಮೇಲೆ ಮೊಟ್ಟೆ ಎಸೆದು ಗೂಂಡಾಗಳ ರೀತಿಯಲ್ಲಿ ವರ್ತಿಸಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಿದ್ದರಾಮಯ್ಯನವರ ಫೋಟೋ ಹಿಡಿದು ಅವರಿಗೆ ಜೈಕಾರ ಹಾಕಿ, ಬಿಜೆಪಿಗೆ ಧಿಕ್ಕಾರ ಕೂಗಿದರು. ರಸ್ತೆ ಮಧ್ಯೆ ಟೈರ್‌ಗೆ ಬೆಂಕಿ ಹಚ್ಚಿ, ವಾಹನಗಳನ್ನು ತಡೆದ ಪರಿಣಾಮ ಕೆಲ ಕಾಲ ಸಂಚಾರ ಅಸ್ತವ್ಯಸ್ಥವಾಗಿತ್ತು. ತಕ್ಷಣವೇ ಪೊಲೀಸರು ಪ್ರತಿಭಟನಾಕಾರರ ಮನವೊಲಿಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರು.



ಮೈಸೂರು ನ್ಯಾಯಾಲಯ ಮುಂಭಾಗದ ಗಾಂಧೀಜಿ ಪುತ್ಥಳಿ ಬಳಿ ಕರ್ನಾಟಕ ರಾಜ್ಯ ಸಿದ್ದರಾಮಯ್ಯನವರ ಅಭಿಮಾನಿಗಳ ಬಳಗ ಪ್ರತಿಭಟಿಸಿತು.

ಈ ವೇಳೆ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಮಾತನಾಡಿ, ದಾವಣಗೆರೆಯಲ್ಲಿ ನಡೆದ ಸಿದ್ದರಾಮಯ್ಯನವರ ಜನ್ಮದಿನ ಅಮೃತ ಮಹೋತ್ಸವ ಯಶಸ್ವಿಯಾಗಿದ್ದು ಬಿಜೆಪಿಯವರ ಸಂಕಟ ಹೆಚ್ಚಿಸಿದೆ. ಸಿದ್ದರಾಮಯ್ಯ ಅವರಿಗಿರುವ ಜನಬೆಂಬಲ, ವಿಶ್ವಾಸವನ್ನು ಕಂಡು ಬೆದರಿದ್ದಾರೆ. ಹಾಗಾಗಿ ಅವರನ್ನು ರಾಜಕೀಯವಾಗಿ ಎದುರಿಸಲಾಗದೆ ಅನ್ಯಮಾರ್ಗ ಹಿಡಿದಿದ್ದಾರೆ. ಕೊಡಗಿನಲ್ಲಿ ಪೂರ್ವ ನಿಯೋಜಿತವಾಗಿ ಸಿದ್ದರಾಮಯ್ಯನವರ ವಿರುದ್ಧ ಪ್ರತಿಭಟಿಸಿದ್ದಾರೆ. ಮೊಟ್ಟೆ ಎಸೆದು ವಿಕೃತಿ ಮೆರೆದಿದ್ದಾರೆ. ಬಿಜೆಪಿ ದ್ವೇಷ ರಾಜಕಾರಣಕ್ಕೆ ಕಾಂಗ್ರೆಸ್ ಸಮರ್ಪಕ ಪ್ರತ್ಯುತ್ತರ ನೀಡಲಿದೆ ಎಂದರು.

ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಮುಖಂಡ ಕೆ.ಹರೀಶ್ ಗೌಡ, ನಗರಾಧ್ಯಕ್ಷ ಆರ್.ಮೂರ್ತಿ, ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಕೆಪಿಸಿಸಿ ಸದಸ್ಯೆ ವೀಣಾ, ಪಾಲಿಕೆ ಸದಸ್ಯರಾದ ಜೆ.ಗೋಪಿ, ಶೋಭಾ ಸುನೀಲ್, ಮಾಜಿ ಸದಸ್ಯರಾದ ಎಂ.ಸುನೀಲ್, ಶಿವಣ್ಣ, ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು, ಮುಖಂಡರಾದ ಶ್ರೀಧರ್, ಭವ್ಯ, ವಿದ್ಯಾ, ಶಿವು, ಯೋಗೇಶ್, ಡೈರಿ ವೆಂಕಟೇಶ್, ಶಿವಮಲ್ಲು, ವಿಶ್ವ, ಮಹದೇವು, ಮೂರ್ತಿ, ವಿಜಯ್ ಕುಮಾರ್, ರಾಜಾರಾಂ, ಮಾಲೇಗೌಡ, ಲೋಕೇಶ್ ಕುಮಾರ್, ಯೋಗೇಶ್ ಉಪ್ಪಾರ, ರೋಹಿತ್, ಮಹೇಂದ್ರ ಕಾಗಿನೆಲೆ, ಸೋಮು, ಪೈಲ್ವಾನ್ ಮಹೇಶ್, ಅಭಿಷೇಕ್ ಶಿವಣ್ಣ, ಫಾರುಖ್, ಗುಣಶೇಖರ್, ಛಾಯಾ, ಸುರೇಶ್, ರಜತ್, ಶಾದಿಖ್ ಉಲ್ಲಾ ರೆಹಮಾನ್, ಇರ್ಫಾನ್, ಮಂಜು, ನಾಗೇಶ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

**ಅಭಿಮಾನಿಗಳ ಬಳಗ ಆಕ್ರೋಶ:** ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕ್ಷಮೆ ಕೇಳದಿದ್ದರೆ ಬಿಜೆಪಿ ನಾಯಕರು ಭಾಗವಹಿಸುವ ಎಲ್ಲಾ ಕಾರ್ಯಕ್ರಮಗಳಲ್ಲೂ ಕಪ್ಪುಪಟ್ಟಿ ಪ್ರದರ್ಶಿಸಿ ಪ್ರತಿಭಟಿಸುವುದಾಗಿ ಕರ್ನಾಟಕ ರಾಜ್ಯ ಸಿದ್ದರಾಮಯ್ಯನವರ ಅಭಿಮಾನಿಗಳ ಬಳಗ ಎಚ್ಚರಿಸಿದೆ. ಮೈಸೂರು ನ್ಯಾಯಾಲಯ ಮುಂಭಾಗದ ಗಾಂಧೀ ಪುತ್ಥಳಿ ಬಳಿ ಪ್ರತಿಭಟನೆ ನಡೆಸಿದ ಸಿದ್ದರಾಮಯ್ಯ ಅಭಿಮಾನಿಗಳು, ಬಿಜೆಪಿ ಕ್ಷಮೆಯಾಚಿಸದಿದ್ದರೆ ತಾವೂ ಅದೇ ರೀತಿಯಲ್ಲಿ ಪ್ರತ್ಯುತ್ತರ ನೀಡುವುದಾಗಿ ಎಚ್ಚರಿಕೆ ನೀಡಿದರು.

ಈ ವೇಳೆ ಬಳಗದ ರಾಜ್ಯಾಧ್ಯಕ್ಷ ಹಿನಕಲ್ ಪ್ರಕಾಶ್ ಮಾತನಾಡಿ, ಮಳೆ ಹಾನಿ ಪರಿಶೀಲನೆಗೆ ತೆರಳಿದ್ದ ನಾಡಿನ ಹಿರಿಯ ನಾಯಕರಾದ ಸಿದ್ದರಾಮಯ್ಯನವರನ್ನು ಅಪಮಾನಿಸುವ ರೀತಿಯಲ್ಲಿ ಬಿಜೆಪಿ ಕಾರ್ಯಕರ್ತರು ನಡೆದುಕೊಂಡಿದ್ದಾರೆ. ಕಪ್ಪು ಬಾವುಟ ಪ್ರದರ್ಶಿಸಿ, ಪ್ರತಿಭಟನೆ ನಡೆಸಿದ್ದಲ್ಲದೆ ಕೆಲ ಕಿಡಿಗೇಡಿಗಳು ಕಾರಿನ ಮೇಲೆ ಮೊಟ್ಟೆ ಎಸೆದಿದ್ದಾರೆ. ಈ ರೀತಿಯ ಉದ್ಧಟತನದ ನಡೆ ಖಂಡನೀಯ ಎಂದು ಕಿಡಿಕಾರಿದರು.

ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಕೊಡಗಿನಲ್ಲಿ ವೈದ್ಯಕೀಯ ಕಾಲೇಜು, ರಸ್ತೆಗಳ ಅಭಿವೃದ್ಧಿ, ಹಾಡಿ ಜನರಿಗೆ ಪುನರ್ವಸತಿ ಸೇರಿದಂತೆ ಹತ್ತಾರು ಅಭಿವೃದ್ಧಿ ಕಾರ್ಯಗಳಾಗಿವೆ. ಆದರೂ ಕೇವಲ ರಾಜಕೀಯಕ್ಕಾಗಿ ಬಿಜೆಪಿಯವರು ಈ ರೀತಿ ನಡೆದುಕೊಳ್ಳುತ್ತಿದ್ದಾರೆ. ಈಗಾಗಲೇ ಬಿಜೆಪಿಗೆ ಸೋಲಿನ ಭೀತಿ ಶುರುವಾಗಿದ್ದು, ಸಮಾಜದಲ್ಲಿ ಗಲಭೆ ಸೃಷ್ಟಿಸಿ ಅದರಲ್ಲೂ ಅನುಕಂಪ ಗಿಟ್ಟಿಸುವ ವಿಫಲ ಯತ್ನ ನಡೆಸುತ್ತಿದ್ದಾರೆ. ಬಿಜೆಪಿಯವರು ಸಿದ್ದರಾಮಯ್ಯನವರ ಕ್ಷಮೆಯಾಚಿಸಬೇಕು. ತಪ್ಪಿದರೆ ರಾಜ್ಯಾದ್ಯಂತ ಮುಖ್ಯಮಂತ್ರಿಗಳು ಸೇರಿದಂತೆ ಬಿಜೆಪಿಯ ಎಲ್ಲಾ ಸಚಿವರು ಭಾಗವಹಿಸುವ ಕಾರ್ಯಕ್ರಮಗಳಲ್ಲಿ ಕಪ್ಪು ಬಾವುಟ ಪ್ರದರ್ಶಿಸಿ, ಪ್ರತಿಭಟನೆ ನಡೆಸುತ್ತೇವೆ ಎಂದರು.

ಬಳಗದ ಜಿಲ್ಲಾಧ್ಯಕ್ಷ ಬೋಗಾದಿ ಮಹದೇವಸ್ವಾಮಿ, ಕಾಂಗ್ರೆಸ್ ಮುಖಂಡರಾದ ಬ್ರಾಡ್‌ವೇ ಕಿರಣ್, ರಾಜಾರಾಂ, ಕಮಲಾ ಅನಂತರಾವ್, ವಕೀಲೆ ಕವಿತಾ ಕಾಳೆ, ಎಸ್.ಆರ್.ರವಿ, ಸುನೀಲ್, ಮಾದೇಶ್, ಮಹೇಶ್ ಗೌಡ, ಬೀರೇಶ್ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

**ಬಂಧನಕ್ಕೆ ಆಗ್ರಹ:** ಸಿದ್ದರಾಮಯ್ಯ ಅವರ ಕಾರಿಗೆ ಮೊಟ್ಟೆ ಎಸೆದ ದುಷ್ಕರ್ಮಿಗಳನ್ನು ಬಂಧಿಸಬೇಕೆಂದು ಆಗ್ರಹಿಸಿ ಮೈಸೂರು–ಮಾನಂದವಾಡ ರಸ್ತೆ ಸಿಲ್ಕ್ ಫ್ಯಾಕ್ಟರಿ ಸರ್ಕಲ್‌ನಲ್ಲಿ ಪ್ರತಿಭಟನೆ ನಡೆಸಲಾಯಿತು.

ಕಾಂಗ್ರೆಸ್ ಮುಖಂಡ ನವೀನ್ ಕುಮಾರ್ ನೇತೃತ್ವದಲ್ಲಿ ನಡೆಸಲಾದ ಪ್ರತಿಭಟನೆಯಲ್ಲಿ ಬಿಜೆಪಿ ಚಿಹ್ನೆ ಉಲ್ಟಾ ಇರುವ ಚಿತ್ರವುಳ್ಳ ಘೋಷಣಾ ಫಲಕ ಪ್ರದರ್ಶಿಸಲಾಯಿತು. ಸಿದ್ದರಾಮಯ್ಯನವರ ಭೇಟಿ ವೇಳೆ ಗೂಂಡಾವರ್ತನೆ ತೋರಿದವರನ್ನು ಬಂಧಿಸಬೇಕು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಗೃಹ ಸಚಿವ ಆರಗ ಜ್ಞಾನೇಂದ್ರ ರಾಜೀನಾಮೆ ನೀಡಬೇಕು ಎಂದು ಘೋಷಣೆ ಕೂಗಲಾಯಿತು.

ಈ ವೇಳೆ ಕೆ.ಆರ್.ಕ್ಷೇತ್ರದ ಮುಖಂಡ ನವೀನ್ ಕುಮಾರ್ ಮಾತನಾಡಿ, ಬಿಜೆಪಿಯವರು ನಡೆದುಕೊಂಡಿರುವ ರೀತಿ ಖಂಡನಾರ್ಹ. ಪ್ರತಿಭಟನೆ ನಡೆಸುವ ಹಕ್ಕು ಎಲ್ಲರಿಗೂ ಇದೆ. ಆದರೆ ಪ್ರತಿಭಟನೆ ಸರಿಯಾದ ರೀತಿಯದ್ದಾಗಿರಬೇಕು. ರಾಜ್ಯದ ಮುಖ್ಯಮಂತ್ರಿಯಾಗಿ 5 ವರ್ಷ ಜನಪರ ಆಡಳಿತ ನಡೆಸಿದ ಹಿರಿಯ ನಾಯಕರನ್ನು ಅವಮಾನಿಸುವಂತೆ ನಡೆದುಕೊಂಡಿರುವುದು ಖಂಡನೀಯ. ಕಾರಿನ ಮೇಲೆ ಮೊಟ್ಟೆ ಎಸೆದವರನ್ನು ಕೂಡಲೇ ಬಂಧಿಸಬೇಕು. ಘಟನೆ ಬಗ್ಗೆ ಕ್ಷಮೆಯಾಚಿಸಬೇಕು. ಇಲ್ಲವಾದಲ್ಲಿ ನಾವೂ ಕೂಡ ಅದೇ ರೀತಿಯ ಪ್ರತ್ಯುತ್ತರ ನೀಡುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಪೈಲ್ವಾನ್ ಸುನೀಲ್, ಎಂ.ರಾಜೇಶ್, ರಘುರಾಮ್, ಮೈಸೂರು ಬಸವಣ್ಣ, ಶ್ರೀಧರ್ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

### ಮಹಿಳೆಯರ ಬಗ್ಗೆ ಅವಹೇಳನಕಾರಿ ಹೇಳಿಕೆ ಆರೋಪ

# ಮೈಸೂರಲ್ಲಿ ಶಾಸಕ ಪ್ರಿಯಾಂಕ ಖರ್ಗೆ ವಿರುದ್ಧ ಬಿಜೆಪಿ ಮಹಿಳಾ ಮೋರ್ಚಾದಿಂದ ಪ್ರತಿಭಟನೆ



ಮೈಸೂರು, ಆ.18(ಜಿಎ)– ಶಾಸಕ ಪ್ರಿಯಾಂಕ ಖರ್ಗೆಯವರು ಮಹಿಳೆಯರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಎಂದು ಆರೋಪಿಸಿ ಭಾರತೀಯ ಜನತಾ ಪಾರ್ಟಿ ಮಹಿಳಾ ಮೋರ್ಚಾ ವತಿಯಿಂದ ನಗರದ ನ್ಯಾಯ್ಯಾಲಯದ ಮುಂಭಾಗವಿರುವ ಗಾಂಧೀ ಪುತ್ಥಳಿ ಬಳಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು ನಗರ ಮತ್ತು ಗ್ರಾಮಾಂತರ ಮಹಿಳಾ ಮೋರ್ಚಾದ ಸದಸ್ಯರು ಶಾಸಕ ಪ್ರಿಯಾಂಕ ಖರ್ಗೆ 'ರಾಜ್ಯ ಬಿಜೆಪಿ ಸರ್ಕಾರದಲ್ಲಿ ಉದ್ಯೋಗ ಸಿಗಬೇಕು ಎಂದರೆ ಮಹಿಳೆಯರು ಮಂಚ ಹತ್ತಬೇಕು' ಎಂಬ ಅವಹೇಳನಕಾರಿ ಹೇಳಿಕೆ ನೀಡುವುದರೊಂದಿಗೆ ಪದೇ ಪದೇ ಮಹಿಳಾ ವಿರೋಧಿ ಹೇಳಿಕೆಯನ್ನು ನೀಡಿದ್ದಾರೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಈ ವೇಳೆ ಬಿಜೆಪಿ ನಗರ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾ ನಂದೀಶ್ ಮಾತನಾಡಿ, ಭಾರತೀಯ ಜನತಾ ಪಕ್ಷ ಸಂಸ್ಕೃತಿ, ಪರಂಪರೆ ಆಧಾರದ ಮೇಲೆ ಅಧಿಕಾರಕ್ಕೆ ಬಂದಂತಹ ಪಕ್ಷ, ಮಹಿಳೆಯರಿಗೆ ವಿಶೇಷ ಸ್ಥಾನಮಾನವನ್ನು ಕೊಟ್ಟು ಇಂದಿಗೂ ಸಾಕ್ಷಿಯಾಗಿದೆ. ಕೇಂದ್ರ ಸರ್ಕಾರದಲ್ಲಿ ಮಹಿಳೆಯರಿಗೆ ಕೊಟ್ಟಿರುವ ಅಧಿಕಾರದಿಂದ ಇಂದು ಭಾರತಕ್ಕೆ ಇಡೀ ವಿಶ್ವವೇ ಗೌರವ ಕೊಡುತ್ತಿದೆ ಎಂದರು.

ನಮ್ಮ ದೇಶದಲ್ಲಿ ಹಲವಾರು ಮಹಿಳೆಯರು ಐಎಎಸ್ ಐಪಿಎಸ್ ಅತ್ಯುನ್ನತ ಹುದ್ದೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಅವರು ಅನ್ಯಮಾರ್ಗದಿಂದ ಅಧಿಕಾರ ತೆಗೆದುಕೊಂಡವರಲ್ಲ, ಇಂತಹ ಮಹಿಳೆಯರು ದೇಶಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಇಂತಹ ಸಮಯದಲ್ಲಿ ಪ್ರಿಯಾಂಕ ಖರ್ಗೆ ಮಹಿಳಾ ವಿರೋಧಿ ಹೇಳಿಕೆಯನ್ನು ಕೊಟ್ಟಿರುವುದು, ಮೂರ್ಖತನದ ಪರಮಾವಧಿ,ಕೂಡಲೇ ಪ್ರಿಯಾಂಕ ಖರ್ಗೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಕರ್ನಾಟಕದ ಮಹಿಳೆಯರಿಗೆ ಕ್ಷಮೆ ಕೇಳಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ನಡೆಸುತ್ತೇವೆ ಎಂದು ತಿಳಿಸಿದರು.

ಪ್ರತಿಭಟನೆಯಲ್ಲಿ ಗ್ರಾಮಾಂತರ ಅಧ್ಯಕ್ಷೆ ಶ್ರೀಮತಿ ಮಂಜುಳಾ, ಉಪಾಧ್ಯಕ್ಷೆ ಡಾ.ಪ್ರಫುಲ್ಲ ಮಲ್ಲಾಡಿ, ಪ್ರಧಾನ ಕಾರ್ಯದರ್ಶಿ ನಾಗರತ್ನ ಗೌಡ, ಉಪಾಧ್ಯಕ್ಷೆ ಆಶಾ ಲಕ್ಷ್ಮೀ ನಾರಾಯಣ್, ಕಾವೇರಿ ನಾಗರಾಜ್, ಸರಸ್ವತಿ ಪ್ರಸಾದ್, ಯಶೋಧ ರಾಜು, ಕಾರ್ಯದರ್ಶಿ ಪದ್ಮಶ್ರೀ, ಮಂಡಲ ಅಧ್ಯಕ್ಷರಾದ ಮಮತಾ ಚಂದ್ರಶೇಖರ್, ತನುಜಾ ಮಹೇಶ್, ಶಾಂತ, ಯಮುನಾ, ಗೀತ, ರಾಧಾ, ಪದ್ಮ, ಗೀತಾ, ಕಮಲ, ಪ್ರಕಾಶ್, ಶುಭಶ್ರೀ, ಸುಲೋಚನ, ಯಶೋಧ, ಶೋಭಾ ಸತೀಶ್, ಜಯಂತಿ ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

# ಸಿದ್ದರಾಮಯ್ಯರ ಮೇಲೆ ಮೊಟ್ಟೆ ಎಸೆದು ವಿಕೃತಿ ಮೆರೆಯಲು ಗೃಹ ಸಚಿವರೇ ಮೂಲ ಕಾರಣ

## ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯ ಕಿಡಿ



ಮೈಸೂರು, ಆ.18–ಕೊಡಗು ಜಿಲ್ಲೆಯಲ್ಲಿ ಸಿದ್ದರಾಮಯ್ಯ ಅವರ ವಿರುದ್ಧ ನಡೆದ ಪ್ರತಿಭಟನೆಗೆ ಗೃಹಸಚಿವರೇ ಮೂಲಕಾರಣ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಕಿಡಿ ಕಾರಿದ್ದಾರೆ. ಕೊಡಗು ಜಿಲ್ಲೆಯ ಮಳೆಹಾನಿ ಪ್ರದೇಶಗಳಿಗೆ ಭೇಟಿ ನೀಡಿ ಅಲ್ಲಿನ ಜನರ ಕಷ್ಟ ಸುಖಗಳನ್ನು ವಿಚಾರಿಸಿ ಸಾಧ್ಯವಾದಷ್ಟು ಸಹಾಯ ಮಾಡುವುದಕ್ಕಾಗಿ ಸಿದ್ದರಾಮಯ್ಯ ತೆರಳಿದ್ದರು. ಆದರೆ ಅಲ್ಲಿನ ಬಿಜೆಪಿ ಕಾರ್ಯಕರ್ತರು, ಹಿಂದೂಪರ ಸಂಘಟನೆ, ಆರ್‌ಎಸ್‌ಎಸ್‌ನವರು ಸಿದ್ದರಾಮಯ್ಯ ಅವರ ಕಾರಿನ ಮೇಲೆ ಮೊಟ್ಟೆ ಎಸೆದು ವಿಕೃತಿ ಮೆರೆದಿದ್ದಾರೆ. ಕಪ್ಪು ಬಾವುಟ ತೋರಿಸಿ ಸಿದ್ದರಾಮಯ್ಯರಿಗೆ ಅವಮಾನ ಮಾಡಿದ್ದಾರೆ. ಇದಕ್ಕೆಲ್ಲ ಗೃಹ ಸಚಿವರೇ ಮೂಲ ಕಾರಣ. ಬೇಕಂತಲೇ ಕಾರ್ಯಕರ್ತರಿಂದ ಇದೆಲ್ಲವನ್ನು ಮಾಡಿಸಿದ್ದಾರೆ. ಸಿದ್ದರಾಮಯ್ಯ ಅವರು ಕೊಡಗಿಗೆ ಭೇಟಿ ನೀಡುವ ಎರಡು ದಿನಕ್ಕೂ ಮುನ್ನವೇ ಪ್ರವಾಸ ಕಾರ್ಯಕ್ರಮದ ಪಟ್ಟಿ ಕಳುಹಿಸಿದ್ದರೂ ಸೂಕ್ತ ಪೊಲೀಸ್ ಭದ್ರತೆ ನೀಡದೇ ಕರ್ತವ್ಯ ಲೋಪ ಎಸಗುವಂತೆ ಮಾಡಿದ್ದಾರೆ. ವಿರೋಧ ಪಕ್ಷದ ನಾಯಕರು ಹಾಗೂ ಮಾಜಿ ಮುಖ್ಯಮಂತ್ರಿಗಳಿಗೆ ಸೂಕ್ತ ಪೊಲೀಸ್ ಬಂದೋಬಸ್ತ್ ಕೊಡಲಾಗದ ಸರ್ಕಾರ ಸಿದ್ದರಾಮಯ್ಯ ವಿರುದ್ಧ ಎತ್ತಿ ಕಟ್ಟುತ್ತಿದೆ ಎಂದಿದ್ದಾರೆ.

ಶಿವಮೊಗ್ಗದಲ್ಲಿ ಮುಸ್ಲಿಂ ಏರಿಯಾದಲ್ಲಿ ಸಾವರ್ಕರ್ ಫೋಟೋ ಹಾಕಿದ್ದಾರೆ. ಹಾಕಲಿ ಬೇಡ ಅನ್ನಲ್ಲ. ಆದರೆ ಟಿಪ್ಪು ಫೋಟೋ ತೆಗೀತಾರೆ. ಹೀಗೆ ಮಾಡಿದರೆ ಗಲಭೆ ಆಗಲ್ವಾ...? ಇದೆಲ್ಲಾ ತಪ್ಪು ಅಂತಲೂ ಸಿದ್ದರಾಮಯ್ಯ ಹೇಳಿದ್ದಾರೆ. ಶಿವಮೊಗ್ಗದಲ್ಲಿ ಗಲಭೆ, ಉದ್ವಿಗ್ನತೆ ಉಂಟಾಗಲು ಬಿಜೆಪಿ ಕಾರಣ. ಅದನ್ನು ಮರೆ ಮಾಚಲು ಸಿದ್ದರಾಮಯ್ಯ ಅವರ ಹೇಳಿಕೆಯನ್ನು ತಿರುಚಿ ಬಿಜೆಪಿ ನಾಲಿಗೆ ಹರಿಯಬಿಡುತ್ತಿದೆ.

ಒಂದು ಊರು ಅಂದ ಮೇಲೆ ಒಂದೇ ಸಮುದಾಯದ ಹೆಚ್ಚಿನ ಸಂಖ್ಯೆಯ ಜನ ಒಂದೇ ಕಡೆ ಇದ್ದಾಗ ಆ ಸಮುದಾಯದ ಹೆಸರನ್ನೇ ಉಲ್ಲೇಖಿಸಿ ಆ ಸಮುದಾಯದ ಬೀದಿ ಎಂದು ಗುರುತಿಸುವುದು ರೂಢಿಗತವಾಗಿ ಬಂದಿದೆ. ಇದು ಒಂದು ಸಹಜ ಬೆಳವಣಿಗೆ. ಸಿದ್ದರಾಮಯ್ಯ ಅವರು ಹೇಳಿರುವುದೂ ಅದೇ ಅರ್ಥದಲ್ಲಿ. ಆದರೆ ಬಿಜೆಪಿ ತಲೆ–ಬುಡ ಇಲ್ಲದಂತೆ ಮಾತನಾಡುತ್ತಿದೆ. ಸಿದ್ದರಾಮಯ್ಯ ಅವರ ವಿರುದ್ಧ ಇದೇ ರೀತಿ ಟೀಕೆಗಳು ಮುಂದುವರಿದರೆ ಆಡಳಿತ ಬಿಜೆಪಿ ಸರ್ಕಾರ ಉಗ್ರ ಪ್ರತಿಭಟನೆಯನ್ನು ಎದುರಿಸಬೇಕಾಗುತ್ತದೆ. ಸಮಾಜದ ಎಲ್ಲ ವರ್ಗದ ಸಂಘಟನೆಗಳನ್ನು ಒಗ್ಗೂಡಿಸಿ ಬೃಹತ್ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

# ಮೈಸೂರಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಸಂಭ್ರಮ

## ಇಸ್ಕಾನ್, ಶ್ರೀ ಕೃಷ್ಣಧಾಮ ಸೇರಿದಂತೆ ಹಲವೆಡೆ ವಿಶೇಷ ಕಾರ್ಯಕ್ರಮ







ಮೈಸೂರು, ಆ.18(ಎಂಕೆ)– ಅರಮನೆ ನಗರಿ ಮೈಸೂರಿನಲ್ಲಿ ನಂದನವನದ ಮುದ್ದು–ಮುದ್ದಾದ ರಾಧ–ಕೃಷ್ಣರ ಅವತಾರದಲ್ಲಿ ಪುಟಾಣಿಗಳು ಮಿಂಚು ಹರಿಸಲು ರೆಡಿಯಾಗಿದ್ದಾರೆ. ಶ್ರೀ ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ನಗರದ ವಿವಿಧ ಸಂಘಟನೆಗಳು, ಖಾಸಗಿ ಶಾಲೆಗಳು ಹಾಗೂ ಶ್ರೀ ಕೃಷ್ಣನ ದೇವಾಲಯಗಳಲ್ಲಿ ಕಷ್ಣನ ಪುಟ್ಟ–ಪುಟ್ಟ ಹೆಜ್ಜೆಗಳನ್ನು ರಂಗೋಲಿಯಲ್ಲಿ ಬರೆದು, ತೊಟ್ಟಿಲು ಕಟ್ಟಿ, ಪುಟಾಣಿಗಳಿಗೆ ರಾಧ–ಕೃಷ್ಣರ ವೇಷಭೂಷಣ ತೊಡಿಸಿ ಸಂಭ್ರಮಿಸಲು ಸಿದ್ಧತೆ ನಡೆಸಿದ್ದಾರೆ.

ದೇವಸ್ಥಾನಗಳಲ್ಲಿ ವಿಶೇಷ ಪೂಜಾ ಕೈಂಕರ್ಯಗಳೊಂದಿಗೆ ನೈವೇದ್ಯ, ಪ್ರಸಾದ ವಿತರಣೆ, ಶ್ರೀ ಕೃಷ್ಣನ ಭಜನೆ ನಡೆದರೆ, ವಿವಿಧ ಸಾಂಸ್ಕೃತಿಕ ಸಂಘಟನೆಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ರಾಧ–ಕೃಷ್ಣರ ವೇಷಭೂಷಣ ಸ್ಪರ್ಧೆ ಆಯೋಜಿಸುವ ಮೂಲಕ ಪುಟಾಣಿಗಳಲ್ಲಿ ಧಾರ್ಮಿಕ ಪ್ರಜ್ಞೆ ಜೊತೆಗೆ ಸ್ಪರ್ಧಾ ಮನೋಭಾವ ಮೂಡಿಸಲು ಸಜ್ಜಾಗಿದ್ದಾರೆ.

**ಮೈಸೂರು ಇಸ್ಕಾನ್ ಟೆಂಪಲ್:** ಮೈಸೂರಿನ ಜಯನಗರದಲ್ಲಿರುವ ಇಸ್ಕಾನ್‌ನಲ್ಲಿ ಮುಂಜಾನೆ 4.15 ರಿಂದ ಮಧ್ಯರಾತ್ರಿಯವರೆಗೂ ವಿಶೇಷ ಪೂಜೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇಸ್ಕಾನ್‌ನ ಪೀಠಾಧಿಪತಿಗಳಾದ ಶ್ರೀ ಕೃಷ್ಣ, ಬಲರಾಮ ದೇವರಿಗೆ ವಿಶೇಷವಾಗಿ ಅಲಂಕರಿಸಲಾಗಿದೆ. ಭಕ್ತರಿಗೆ ದರ್ಶನ ಅವಕಾಶ ಮಾಡಿಕೊಡಲಾಗಿದೆ. ರಾತ್ರಿ 10 ಗಂಟೆಗೆ ಮಹಾ ಅಭಿಷೇಕ, ಮಹಾ ಮಂಗಳಾರತಿ ಹಾಗೂ ಸಂಕೀರ್ತನೆಗಳು ನಡೆಯಲಿವೆ. ಹಲವು ಗಾಯಕರಿಂದ ಸಂಗೀತೋತ್ಸವ, ಭಜನೆ, ಶ್ರೀ ಕೃಷ್ಣನ ಕುರಿತಾದ ವಿಶೇಷ ನೃತ್ಯ ನಾಟಕ ಪ್ರದರ್ಶನ ಹಾಗೂ ಹರಿನಾಮ ಮಂಟಪದ ದರ್ಶನವಿರಲಿದೆ.

**ಶ್ರೀ ಕೃಷ್ಣಧಾಮ:** ಸರಸ್ವತಿಪುರಂನಲ್ಲಿರುವ ಶ್ರೀ ಕೃಷ್ಣಧಾಮದಲ್ಲಿ ಶ್ರೀ ಕೃಷ್ಣಜನ್ಮಾಷ್ಟಮಿ ಅಂಗವಾಗಿ ಆ.20ರಂದು ಮಧ್ಯಾಹ್ನ 12 ವರ್ಷದೊಳಗಿನ ಪುಟಾಣಿಗಳಿಂದ ಕೃಷ್ಣ, ರಾಧೆ, ಬಾಲರಾಮ ಸೇರಿದಂತೆ ಇತ್ಯಾದಿ ವೇಷಭೂಷಣ ಸ್ಪರ್ಧೆ ಏರ್ಪಡಿಸಲಾಗಿದೆ. ಸಂಜೆ 5 ಗಂಟೆಯಿಂದ ಶ್ರೀ ಕೃಷ್ಣನ ಮೆರವಣಿಗೆ ಹಾಗೂ ಉತ್ಸವ ನೆರವೇರಲಿದೆ. ಹಾಗೆಯೇ ಒಂಟಿಕೊಪ್ಪಲಿನ ಶ್ರೀ ಲಕ್ಷ್ಮಿ ವೆಂಕಟೇಶ್ವರ ದೇವಸ್ಥಾನದಲ್ಲಿರುವ ಶ್ರೀ ಕೃಷ್ಣ ಮಂದಿರ, ಗೊಲ್ಲಗೇರಿಯಲ್ಲಿರುವ ಕೃಷ್ಣನ ದೇವಾಸ್ಥಾನ ಸೇರಿದಂತೆ ನಗರದೆಲ್ಲೆಡೆ ಇರುವ ಶ್ರೀ ಕೃಷ್ಣ ದೇವಾಲಯಗಳಲ್ಲಿ ವಿಶೇಷ ಪೂಜೆ ಇರಲಿದೆ.

**ವೇಷಭೂಷಣ ಸ್ಪರ್ಧೆ:** ವಿವಿಧ ಸಾಂಸ್ಕೃತಿಕ ಸಂಘ–ಸಂಸ್ಥೆಗಳಿಂದಲೂ ಶ್ರೀ ಕೃಷ್ಣ ಜನ್ಮಾಷ್ಟಮಿ ಹಿನ್ನೆಲೆ ವೇಷಭೂಷಣ ಸ್ಪರ್ಧೆ ಆಯೋಜಿಸಲಾಗಿದೆ. ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ವತಿಯಿಂದ ನಾಳೆ(ಆ.19) ಶ್ರೀ ಕೃಷ್ಣ ಹಾಗೂ ರಾಧೆಯ ವೇಷಭೂಷಣ ಸ್ಪರ್ಧೆಯನ್ನು ವಿಶ್ವೇಶ್ವರ ನಗರದಲ್ಲಿರುವ ಮಹರ್ಷಿ ಪಬ್ಲಿಕ್ ಶಾಲೆ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ವಿಜೇತ ಪುಟಾಣಿಗಳಿಗೆ ನಗದು ಬಹುಮಾನ ಪ್ರಶಸ್ತಿ ಪದಕ ನೀಡಿ ಅಭಿನಂದಿಸಲಾಗುವುದು. ಹಾಗೆಯೇ ಖಾಸಗಿ ಶಾಲೆಗಳಲ್ಲಿಯೂ ಶ್ರೀ ಕೃಷ್ಣ ಆಚರಣೆ ನಡೆಯಲಿದ್ದು, ರಾಧ–ಕೃಷ್ಣ ವೇಷದಲ್ಲಿ ಚಿಣ್ಣರು ಕಂಗೊಳಿಸಲಿದ್ದಾರೆ.

**ಕೊಳಲು, ಕಿರೀಟಕ್ಕೆ ಬೇಡಿಕೆ:** ಪುಟಾಣಿಗಳನ್ನು ರಾಧ–ಕೃಷ್ಣರ ಅವತಾರದಲ್ಲಿ ನೋಡಿ ಖುಷಿಪಡಲು ಮಾರುಕಟ್ಟೆಗಳು, ಪ್ರಾವಿಜನ್ ಸ್ಟೋರ್‌ಗಳಿಗೆ ಪೋಷಕರ ದಂಡೆ ಹರಿದು ಬಂದಿದ್ದು. ಕೊಳಲು, ಕಿರೀಟ, ಹೂವಿನ ಹಾರ, ಅಲಂಕೃತ ಮಡಿಕೆಗಳನ್ನು ಕೊಳ್ಳಲು ಮುಗಿಬಿದ್ದರು. ಸಿಜನ್ ಎಂಬಂತೆ ವ್ಯಾಪಾರಿಗಳು ವಿವಿಧ ಗಾತ್ರದ ಕೊಳಲುಗಳನ್ನು 30–50 ರೂ., ಮಾರಾಟ ಮಾಡಿದರು.

## ನಕ್ಕರೆ ಅದೇ ಸ್ವರ್ಗ

ಆಕೆ : ಡಾಕ್ಟರ್, ನನ್ನ ಗಂಡ ನಿದ್ದೆಯಲ್ಲಿ ಸದಾ ಏನಾದರೂ ಮಾತನಾಡುತ್ತಲೇ ಇರುತ್ತಾರೆ. ಇದನ್ನು ತಪ್ಪಿಸುವುದು ಹೇಗೆ?

ಡಾಕ್ಟರ್ : ನಿಮ್ಮ ಯಜಮಾನರಿಗೆ ಯಾವುದೇ ರೋಗವಿಲ್ಲ. ನೀವು ಹಗಲು ಹೊತ್ತು ಅವರಿಗೆ ಮಾತನಾಡಲು ಅವಕಾಶ ಮಾಡಿಕೊಟ್ಟರೆ ಈ ಸಮಸ್ಯೆ ಬಗೆಹರಿಯುತ್ತದೆ.

ಮೈಸೂರು ಮಿತ್ರ
ಶುಕ್ರವಾರ, 19 ಆಗಸ್ಟ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ *M.A.*

### ಅಮೃತವಾಹಿನಿ

ತಪ್ಪು ಮಾಡುವುದು ಸ್ವಾಭಾವಿಕ. ಆದರೆ ಅದನ್ನು ಮುಂದುವರಿಸಿಕೊಂಡು ಹೋಗುವುದು ಕೆಟ್ಟ ಕೆಲಸ – ಆಗಸ್ಟೈನ್

### ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಹಲಸಿನ ಹಣ್ಣು ಬೇಕು ಅಂಟು ಬ್ಯಾಡ ಅಂದ್ಹಂಗೆ

## ನಿಮ್ಮ ಪತ್ರಗಳು

### ಇ–ತ್ಯಾಜ್ಯಕ್ಕೆ ಕಟ್ಟುನಿಟ್ಟಾದ ಆದೇಶ ಅಗತ್ಯ

ಮಾನ್ಯರೆ,

ನಮ್ಮ ದೇಶದಲ್ಲಿ ಲ್ಯಾಪ್‌ಟಾಪ್‌ಗಳು, ಲ್ಯಾಂಡ್‌ಲೈನ್ ಫೋನ್, ಮೊಬೈಲ್ ಫೋನ್‌ಗಳು, ಕ್ಯಾಮೆರಾಗಳು, ರೆಕಾರ್ಡರ್‌ಗಳು, ಸಂಗೀತ ಉಪಕರಣಗಳು, ಮೈಕ್ರೋವೇವ್‌ಗಳು, ರೆಫ್ರಿಜರೇಟರ್‌ಗಳು ಮತ್ತಿತರ ಉಪಕರಣಗಳು ಸೇರಿದಂತೆ ವ್ಯಾಪಕ ಶ್ರೇಣಿಯ ಎಲೆಕ್ಟ್ರಾನಿಕ್ ಸರಕುಗಳಿಂದ ವರ್ಷಕ್ಕೆ ಸಾವಿರಾರು ಟನ್ನು ಗಟ್ಟಲೆ ಇ–ತ್ಯಾಜ್ಯ ಉತ್ಪಾದನೆಯಾಗುತ್ತಿದೆ. ಇ–ತ್ಯಾಜ್ಯ ನಿರ್ವಹಣೆಯು ದೇಶದ ಪ್ರಮುಖ ಸವಾಲಾಗಿದೆ. ಇದಕ್ಕೆ ಸಂಬಂಧಪಟ್ಟ ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿ (ಸಿಪಿಸಿಬಿ) ಎಲೆಕ್ಟ್ರಾನಿಕ್ಸ್ ಸರಕು ತಯಾರಿಕಾ ಕಂಪನಿಗಳು ತಮ್ಮ ಎಲೆಕ್ಟ್ರಾನಿಕ್ ತ್ಯಾಜ್ಯದ ಕನಿಷ್ಠ ಶೇ.60 ರಷ್ಟು 2023ರ ವೇಳೆಗೆ ಸಂಗ್ರಹಿಸಿ ಮರುಬಳಕೆ ಮಾಡುವುದನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ಅವುಗಳನ್ನು ಕ್ರಮವಾಗಿ 2024 ಮತ್ತು 2025 ರಲ್ಲಿ ಶೇ.70 ಮತ್ತು ಶೇ.80ಕ್ಕೆ ಹೆಚ್ಚಿಸುವ ಗುರಿಯನ್ನು ಹೊಂದಿರಬೇಕು ಎಂದು ಹೇಳಿದೆ ಹೊರತು ಕಟ್ಟುನಿಟ್ಟಾಗಿ ಈ ನಿಯಮಗಳನ್ನು ಜಾರಿಗೆ ತಂದಿಲ್ಲ. ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿ ಇ–ತ್ಯಾಜ್ಯದ ನಿಯಮಾವಳಿಗಳನ್ನು ಒಂದು ವೇಳೆ ಎಲೆಕ್ಟ್ರಾನಿಕ್ಸ್ ಕಂಪನಿಗಳು ಪಾಲಿಸದಿದ್ದರೆ ಅಂತಹ ಕಂಪನಿಗಳ ವಿರುದ್ಧ ಯಾವ ರೀತಿ ಕಠಿಣ ಕ್ರಮ ಕೈಗೊಳ್ಳುತ್ತದೆ ಎಂಬುದು ಇಲ್ಲಿವರೆಗೂ ಎಲ್ಲೂ ತಿಳಿಸಿಲ್ಲ.

ಪ್ರಮುಖ ವಿಷಯವೆಂದರೆ ಪ್ರತಿ ಎಲೆಕ್ಟ್ರಾನಿಕ್ಸ್ ಕಂಪನಿಗಳು ಸಿಪಿಸಿಬಿಯ ಆನ್‌ಲೈನ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು ಮತ್ತು ತಮ್ಮ ವಾರ್ಷಿಕ ಉತ್ಪಾದನೆ ಮತ್ತು ಇ–ತ್ಯಾಜ್ಯ ಸಂಗ್ರಹ ಗುರಿಗಳನ್ನು ನಿರ್ದಿಷ್ಟಪಡಿಸಬೇಕು ಎಂದು ನಿಯಮಾವಳಿಗಳಲ್ಲಿ ತಿಳಿಸಿದರೂ ಸಹ ಯಾವುದೇ ಕಂಪನಿಯು ಇದರ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಎಲೆಕ್ಟ್ರಾನಿಕ್ಸ್ ಕಂಪನಿಯೊಂದು ನಿರ್ದಿಷ್ಟ ವರ್ಷದಲ್ಲಿ ಸಂಗ್ರಹಿಸಿದ ಮತ್ತು ಮರುಬಳಕೆ ಮಾಡಿದ ಇ–ತ್ಯಾಜ್ಯದ ಪ್ರಮಾಣವನ್ನು ಇಪಿಆರ್ (ವಿಸ್ತೃತ ನಿರ್ಮಾಪಕ ಜವಾಬ್ದಾರಿ) ಪ್ರಮಾಣ ಪತ್ರ ಎಂದು ಕರೆಯಲ್ಪಡುತ್ತದೆ. ಈ ಪ್ರಮಾಣ ಪತ್ರವನ್ನು ಸಿಪಿಸಿಬಿ ಎಲೆಕ್ಟ್ರಾನಿಕ್ ಕಂಪನಿಗಳಿಗೆ ಕಡ್ಡಾಯ ಪಡಿಸಬೇಕಾದ ಅವಶ್ಯಕತೆ ಇದೆ. ತಮ್ಮ ವಾರ್ಷಿಕ ಗುರಿಗಳನ್ನು ಪೂರೈಸದ ಎಲೆಕ್ಟ್ರಾನಿಕ್ಸ್ ಕಂಪನಿಗಳಿಗೆ ಯಾವ ರೀತಿ ದಂಡ ಅಥವಾ ಪರಿಹಾರವನ್ನು ಪಾವತಿಸಬೇಕಾಗುತ್ತದೆ ಎಂದೂ ಸಿಪಿಸಿಬಿ ಸ್ಪಷ್ಟ ಮಾಹಿತಿ ನೀಡಿಲ್ಲ. ಈ ಕಾನೂನುಗಳ ಒಟ್ಟಾರೆ ಎಲೆಕ್ಟ್ರಾನಿಕ್ಸ್ ಕಂಪನಿಗಳ ಇ–ತ್ಯಾಜ್ಯ ನಿರ್ವಹಣೆಯನ್ನು ಸಿಪಿಸಿಬಿ ಅಧ್ಯಕ್ಷರ ನೇತೃತ್ವದ ಸ್ಟೀರಿಂಗ್ ಸಮಿತಿಯು ನಿಯಮಾವಳಿಗಳ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡಬೇಕು. ಇಲ್ಲವಾದಲ್ಲಿ ಪರಿಸರ ಮಾಲಿನ್ಯ ಹೆಚ್ಚುವುದು ಖಚಿತ. ಇನ್ನೂ ನಾಗರಿಕ ಸಮಾಜ ಸಂಸ್ಥೆಗಳಿಂದ ಪ್ರಾತಿನಿಧ್ಯವನ್ನು ಹೊಂದಿಸುವಲ್ಲಿ ಸಿಪಿಸಿಬಿ ಸಫಲವಾದಲ್ಲಿ ಮಾತ್ರ ನಮ್ಮ ದೇಶದಲ್ಲಿ ಇ–ತ್ಯಾಜ್ಯ ಪರಿಣಾಮಕಾರಿಯಾಗಿ ನಿರ್ವಹಿಸಬಹುದು.

–ವಿಜಯಕುಮಾರ್ ಎಚ್.ಕೆ., ರಾಯಚೂರು

### ವೀರ ಸಾವರ್ಕರ್‌ಗೆ ಅವಮಾನ ಖಂಡನೀಯ

ಮಾನ್ಯರೆ,

ಶಿವಮೊಗ್ಗದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರಗಳನ್ನು ಸಾಲಾಗಿ ಹಾಕಲಾಗಿತ್ತು. ಅದರಲ್ಲಿ ವೀರ ಸಾವರ್ಕರ್ ಅವರ ದೊಡ್ಡದಾದ ಭಾವಚಿತ್ರ ಕೂಡ ಇತ್ತು. ಅದನ್ನು ಕೆಲವು ಕಿಡಿಗೇಡಿಗಳು ಕಿತ್ತು ಹಾಕುವಲ್ಲಿ ಯಶಸ್ವಿಯಾದರು. ಒಂದು ಮತೀಯ ಜನಾಂಗ ಹಾಗೂ ಪಕ್ಷವೊಂದರ ಕೆಲವರು ಸಾವರ್ಕರ್ ಅವರನ್ನು ದೂಷಿಸುತ್ತಿದ್ದಾರೆ. ಅದಲ್ಲದೆ ಅವರನ್ನು ಜಾತಿ ಸೂಚಕವಾಗಿಯೂ ನಿಂದಿಸಿದ್ದಾರೆ. ಸ್ವಾತಂತ್ರ್ಯಕ್ಕಾಗಿ ಅಂಡಮಾನ್ ಜೈಲಿನಲ್ಲಿ 20 ವರ್ಷ ಕಾಲಪಾನಿ ಹಾಗೂ ಇತರ ಕ್ರೂರ ಶಿಕ್ಷೆಗಳನ್ನು ಬ್ರಿಟಿಷರಿಂದ ಅನುಭವಿಸಿದ ಒಬ್ಬ ಸ್ವಾತಂತ್ರ್ಯ ಪ್ರೇಮಿಗೆ ಈ ಜನಗಳು ತೋರುತ್ತಿರುವ ಅವಮಾನ ಖಂಡನೀಯ. ನಾನು ಸ್ವತಃ ಅಂಡಮಾನಿನ ಸೆಲ್ಯೂಲರ್ ಜೈಲಿಗೆ ಭೇಟಿ ನೀಡಿ ಅಲ್ಲಿ ಬ್ರಿಟಿಷರು ಸ್ವಾತಂತ್ರ್ಯ ಪ್ರೇಮಿಗಳಿಗೆ ನೀಡಿದ ಶಿಕ್ಷೆಗಳ ವೀಡಿಯೋ ಚಿತ್ರಣವನ್ನು ನೋಡಿದ್ದೇನೆ. ನಾವು ಇಂದು 75 ವರ್ಷಗಳ ಸ್ವಾತಂತ್ರ್ಯ ಸಿಕ್ಕ ಸಂಭ್ರಮವನ್ನು ಅನುಭವಿಸುತ್ತಿದ್ದೇವೆ. ಈ ದೇಶಕ್ಕಾಗಿ ಸಾವಿರಾರು ಜನ ಬ್ರಿಟಿಷರ ದೌರ್ಜನ್ಯಕ್ಕೆ ಒಳಗಾಗಿ ಜೀವ ತೆತ್ತಿದ್ದಾರೆ. ಅದರ ಕಿಂಚಿತ್ತು ನೋವಾದರೂ ನಮಗೆ ಆಗಬೇಕಿದೆ. ಶಿವಮೊಗ್ಗದಲ್ಲಿ ನಡೆದ ಪುಂಡಾಟಿಕೆಯನ್ನು ಖಂಡಿಸಬೇಕಿದೆ. ಪುಂಡಾಟಿಕೆ ನಡೆಸಿದವರ ವಿರುದ್ಧ ಕ್ರಮ ಕೈಗೊಳ್ಳಬೇಕಿದೆ.

–ಮಜೂರು ರಘುವೀರ ಪುರಾಣಿಕ, ಸಿದ್ಧಾರ್ಥನಗರ, ಮೈಸೂರು.

### ಪಾರ್ಥೇನಿಯಂ ನಿವಾರಣೆಗೆ ಸೂಕ್ತ ಸಮಯ

ಮಾನ್ಯರೆ,

ಮೈಸೂರಿನ ಹಲವಾರು ಬಡಾವಣೆಗಳಲ್ಲಿ ಬೆಳೆದು ನಿಂತಿರುವ ಪಾರ್ಥೇನಿಯಂ ಕಳೆ ಕಿತ್ತು ಹಾಕಲು ಇದು ಸೂಕ್ತ ಸಮಯ. ಎಲ್ಲಾ ಕಡೆ ಮಳೆಯಾಗಿದ್ದು, ಭೂಮಿ ಮೃದುವಾಗಿದೆ. ಕಳೆಗಳನ್ನು ಸುಲಭವಾಗಿ ಬೇರು ಸಹಿತ ಕೀಳಬಹುದು. ಕೀಳುವವರಿಗೆ ಕೈ ಗವಸು ಒದಗಿಸಿದರೆ ಸಾಕು. ಎರಡು ವಾರದಲ್ಲಿ ಬಹಳಷ್ಟು ಪಾರ್ಥೇನಿಯಂ ಕೀಳಬಹುದು. ಇದರ ಬಗ್ಗೆ ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು ಗಮನಹರಿಸಲು ಮನವಿ.


– ಲೋಕೇಶ ಮೂರ್ತಿ, ಮೈಸೂರು.

### ಶ್ರೀರಂಗಪಟ್ಟಣ ರೈಲು ಪ್ರಯಾಣಿಕರ ಪರದಾಟ

ಮಾನ್ಯರೆ,

ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ಆದರೂ ಕನಿಷ್ಠ ಮೂಲಭೂತ ಸೌಕರ್ಯಕ್ಕಾಗಿ ಇಲ್ಲಿನ ನಾಗರಿಕರು ಪರದಾಡುವ ಪರಿಸ್ಥಿತಿ ಬಂದಿದೆ. ಶ್ರೀರಂಗಪಟ್ಟಣದಲ್ಲಿ ಚಾಮುಂಡಿ ಎಕ್ಸ್‌ಪ್ರೆಸ್, ವಿಶ್ವಮಾನವ ಎಕ್ಸ್‌ಪ್ರೆಸ್, ರಾಜ್ಯರಾಣಿ, ತಿರುಪತಿ, ತಾಳಗುಪ್ಪ ಎಕ್ಸ್‌ಪ್ರೆಸ್ ರೈಲುಗಳು ಕೊರೊನಾ ಪೂರ್ವದಲ್ಲಿ ನಿಲುಗಡೆಯಾಗುತ್ತಿತ್ತು. ಆದರೆ ಕೊರೊನಾ ನಂತರ ರೈಲ್ವೆ ಅಧಿಕಾರಿಗಳು ಈ ಎಲ್ಲಾ ರೈಲುಗಳ ನಿಲುಗಡೆ ರದ್ದು ಮಾಡಿದ್ದಾರೆ. ಈ ಅನ್ಯಾಯದ ವಿರುದ್ಧ ಹೋರಾಟ ಮಾಡಿ ನ್ಯಾಯ ಕೊಡಿಸಬೇಕಾದ ಜನಪ್ರತಿನಿಧಿಗಳು ಮೌನಕ್ಕೆ ಶರಣಾಗಿದ್ದಾರೆ. ರೈಲನ್ನೇ ನಂಬಿ ಜೀವನ ಸಾಗಿಸುತ್ತಿದ್ದ ಆಟೋ ಚಾಲಕರು, ಬಡ ಕೂಲಿ ಕಾರ್ಮಿಕರು ಅಕ್ಷರಶಃ ನಲುಗಿ ಹೋಗಿದ್ದಾರೆ. ಬೆಳಗಿನ ಸಮಯ ಮೈಸೂರಿಗೆ ಹೋಗಲು ಒಂದೂ ರೈಲು ಇಲ್ಲ. ಇದೇ ರೀತಿ ಬೆಂಗಳೂರಿಗೆ ಹೋಗಲು ಸಹ ರೈಲು ಸೌಲಭ್ಯವಿಲ್ಲ. ನಿಜಕ್ಕೂ ಶ್ರೀರಂಗಪಟ್ಟಣ ರೈಲು ಪ್ರಯಾಣಿಕರ ಪಾಡು ಹೇಳತೀರದಾಗಿದೆ. ಯಾರಾದರೂ ಜನಸೇವಕರು ಕೂಡಲೇ ದಸರಾ ಆರಂಭಕ್ಕೂ ಮುನ್ನ ಶ್ರೀರಂಗಪಟ್ಟಣದಲ್ಲಿ ಕನಿಷ್ಠ 10 ಎಕ್ಸ್‌ಪ್ರೆಸ್ ರೈಲು ನಿಲುಗಡೆಗೆ ಸಹಾಯ ಮಾಡಿ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಈ ಮೂಲಕ ಮನವಿ.

– ನೊಂದ ಪ್ರಯಾಣಿಕರು, ಶ್ರೀರಂಗಪಟ್ಟಣ.



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

## ಸಂಸ್ಕೃತಿ ಚಿಂತನಾ

# ವೇದಾಂತ ದೇಶಿಕರ ಗೋದಾಸ್ತುತಿ

ಭಾರತ ದೇಶದ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಕರ್ಮಯೋಗ, ಜ್ಞಾನ ಯೋಗ ಮತ್ತು ಭಕ್ತಿಯೋಗ ಎಂಬ ಮೂರು ಮಾರ್ಗಗಳು ಪ್ರಮುಖವಾಗಿವೆ. ಕರ್ಮಯೋಗದಿಂದ ಚಿತ್ತ ಶುದ್ಧಿಯನ್ನು ಪಡೆದು, ಜ್ಞಾನ ಯೋಗದಿಂದ ಪರಮಾತ್ಮನ ಮಹಿಮೆಯನ್ನರಿತುಕೊಂಡು, ಭಕ್ತಿಯೋಗದಿಂದ ಸಾಕ್ಷಾತ್ಕಾರವನ್ನು ಹೊಂದುವುದು ಮಾನವನ ಗುರಿ. ಭಕ್ತಿಮಾರ್ಗ ಸರ್ವರಿಗೂ ಸಾಧ್ಯವಾಗುವ ಮಾರ್ಗ. ಅದರಿಂದಲೇ ಮುಕ್ತಿಪ್ರಾಪ್ತಿ ಎಂದು ಶ್ರೀಕೃಷ್ಣನೇ ಭಗವದ್ಗೀತೆಯಲ್ಲಿ ಹೇಳಿದ್ದಾನೆ–

**ನಾಹಂ ವೇದೈರ್ನ ತಪಸಾ ನ ದಾನೇನ ನ ಚೇಜ್ಯಯಾ ।**
**ಶಕ್ಯ ಏವಂವಿಧೋ ದ್ರಷ್ಟುಂ ದೃಷ್ಟವಾನಸಿ ಮಾಂ ಯಥಾ॥**
**ಭಕ್ತ್ಯಾ ತ್ವನನ್ಯಯಾ ಶಕ್ಯಃ ಅಹಮೇವಂ ವಿಧೋಽರ್ಜುನ॥**
**ಜ್ಞಾತುಂ ದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ॥**

(11.53–54)

(ವೇದಗಳಿಂದ, ತಪಸ್ಸಿನಿಂದ, ದಾನದಿಂದ ಅಥವಾ ಯಜ್ಞದಿಂದ ಈ ಪ್ರಕಾರದಲ್ಲಿ ನನ್ನನ್ನು ಕಾಣಲಾಗದು. ಅರ್ಜುನ, ನೀನು ನನ್ನನ್ನು ನೋಡಿರುವಂತೆ ನೋಡಲು, ಅರಿಯಲು, ನನ್ನಲ್ಲಿ ಪ್ರವೇಶಿಸಲು ಅನನ್ಯವಾದ ಭಕ್ತಿಯಿಂದ ಮಾತ್ರ ಸಾಧ್ಯ).

ಈ ಭಕ್ತಿ ಮಾರ್ಗವನ್ನು ಪೂರ್ಣವಾಗಿ ಆಶ್ರಯಿಸಿ ಜಗತ್ತಿನಲ್ಲಿ ಭಕ್ತಿಯನ್ನು ಹರಡಿದ ವಿಷ್ಣು ಭಕ್ತೋತ್ತಮರು ಆಳ್ವಾರರು. ಆಳ್ವಾರ್ ಎಂಬ ಪದಕ್ಕೆ ಭಗವಂತನ ಚಿಂತನೆಯಲ್ಲಿ ಆಳವಾಗಿ ಮುಳುಗಿರುವ ಭಕ್ತರು ಎಂದು ಅರ್ಥ. ಶ್ರೀ ವೈಷ್ಣವ ಸಂಪ್ರದಾಯವು ಹನ್ನೆರಡು ಆಳ್ವಾರರನ್ನು ಅಂಗೀಕರಿಸಿದೆ. ತಮಿಳುನಾಡಿನಲ್ಲಿ ಸುಮಾರು ಏಳನೆಯ ಶತಮಾನದಿಂದ ಒಂಭತ್ತನೆಯ ಶತಮಾನದವರೆಗೆ ಪಲ್ಲವ ಸಾಮ್ರಾಜ್ಯದ ವೇಳೆಯಲ್ಲಿ ಈ ಆಳ್ವಾರರು ಭಗವದಾರಾಧನೆಯಲ್ಲಿ ತೊಡಗಿದ್ದರು. ಇವರು ಭಕ್ತಿಯಿಂದ ಹಾಡಿದ ಪವಿತ್ರ ಗ್ರಂಥಗಳು ತಮಿಳು ಭಾಷೆಯಲ್ಲಿವೆ. ಕುಲಶೇಖರ ಆಳ್ವಾರರು ಸಂಸ್ಕೃತದಲ್ಲೂ ಪಂಡಿತರಾಗಿದ್ದು, ಅವರು ರಚಿಸಿದ ಮುಕುಂದಮಾಲೆ ಸಂಸ್ಕೃತದಲ್ಲಿದೆ. ಅವರ ಪೆರುಮಾಳ್ ತಿರುಮೊಳಿ ತಮಿಳಿನಲ್ಲಿದೆ.

**ಪೆರಿಯಾಳ್ವಾರ್**

ಸಂಸ್ಕೃತದಲ್ಲಿ ಪೆರಿಯಾಳ್ವಾರ್ ಅವರನ್ನು ವಿಷ್ಣುಚಿತ್ತ ಎಂದು ಕರೆಯುತ್ತಾರೆ. ಇವರು ಆರನೆಯ ಆಳ್ವಾರರು.

ಶ್ರೀ ಮಿಳ್ಳಿ ಪುತ್ತೂರ್ ಎಂಬ ಊರಿನಲ್ಲಿ ವಿರಾಜಮಾನನಾಗಿರುವ ವಟಪತ್ರ ಶಾಯಿ ಎಂಬ ಹೆಸರಿನಿಂದ ಖ್ಯಾತನಾಗಿರುವ ಶಿಶುಕೃಷ್ಣ ಇವರ ಆರಾಧ್ಯದೈವ. ನಾನಾ ಪುಷ್ಪಗಳನ್ನು ಸಂಗ್ರಹಿಸಿ ಭಗವಂತನಿಗೆ ಮಾಲಾಕೈಂಕರ್ಯವನ್ನು ಮಾಡುತ್ತಿದ್ದ ಮಹಾನುಭಾವರು ಪೆರಿಯಾಳ್ವಾರ್. ಇವರ ಭಕ್ತಿಯ ಮುಖ್ಯಭಾವ ವಾತ್ಸಲ್ಯ. ಅವರು ರಚಿಸಿದ ತಿರುಪಲ್ಲಾಂಡು ಎಂಬ ಗ್ರಂಥವು ಪರಮಾತ್ಮನ ಉತ್ಸವವನ್ನು ಹೃದ್ಯವಾಗಿ ವರ್ಣಿಸುತ್ತದೆ.

**ಗೋದಾ ಅಥವಾ ಆಂಡಾಳ್**

ಭಕ್ತ ಶಿರೋಮಣಿಯಾಗಿದ್ದ ಆಂಡಾಳ್ ಸಂಸ್ಕೃತದಲ್ಲಿ ಗೋದಾ ಎಂಬ ಹೆಸರಿನಿಂದ ಪ್ರಸಿದ್ಧಳಾಗಿದ್ದಾಳೆ. ಆಳ್ವಾರ್ ಎಂದು ಪರಿಗಣಿತವಾದ ಏಕಮಾತ್ರ ಮಹಿಳೆ ಆಂಡಾಳ್. ಆಳ್ವಾರರಲ್ಲಿ ಈಕೆ ಏಳನೆಯವಳು. ಈಕೆಯನ್ನು ಭೂದೇವಿಯ ಅವತಾರವೆಂದು ಹೇಳುತ್ತಾರೆ. ಯಾವ ಮನುಷ್ಯನನ್ನೂ ಗಂಡನೆಂದು ಒಪ್ಪದೆ ಭಗವಂತನನ್ನೇ ತನ್ನ ಪತಿ ಎಂದು ತ್ರಿಕರಣಪೂರ್ವಕವಾಗಿ ಸೇವಿಸಿದ ಪರಮಪವಿತ್ರಜೀವಿ ಆಂಡಾಳ್. ಈಕೆ ಪೆರಿಯಾಳ್ವಾರರ ಸಾಕು ಮಗಳು. ಭಕ್ತಿಯ ಉನ್ಮೇಷದಲ್ಲಿ ಈಕೆ ರಚಿಸಿರುವ ತಿರುಪ್ಪಾವೈ ತಮಿಳು ಸಾಹಿತ್ಯದ ಅನರ್ಘ್ಯ ರತ್ನ. ಮೂವತ್ತು ಪಾಶುರಗಳಿರುವ ಈ ಕೃತಿ ಈಗಲೂ ಧನುರ್ಮಾಸದಲ್ಲಿ ಪಾರಾಯಣ ಗ್ರಂಥವಾಗಿದೆ. ಈಕೆಯ ಇನ್ನೊಂದು ಭಕ್ತಿಪೂರ್ಣ ಕೃತಿ ನಾಚ್ಚಿಯಾರ್ ತಿರುಮೊಳಿ. ತನ್ನ ಜೀವಿತಾಂತದಲ್ಲಿ ಆಂಡಾಳ್ ಶ್ರೀರಂಗದ ರಂಗನಾಥನಲ್ಲಿ ಐಕ್ಯ ಹೊಂದಿದಳು ಎಂಬ ಐತಿಹ್ಯವಿದೆ.

ಗೋದಾ ಎಂದು ಸಂಸ್ಕೃತದ ಹೆಸರನ್ನು ಹೊಂದಿದ ಈ ಭಕ್ತೆಯನ್ನು ಆಮುಕ್ತಮಾಲ್ಯದಾ ಎಂದೂ ಕರೆಯುತ್ತಾರೆ. ತಾನು ಮುಡಿದ ಮಾಲೆಯನ್ನು ಭಗವಂತನಿಗೆ ಅರ್ಪಿಸಿದವಳು ಎಂದು ಆಮುಕ್ತಮಾಲ್ಯದಾ ಎಂಬ ಪದದ ಅರ್ಥ. ಈ ಹೆಸರನ್ನೇ ಇಟ್ಟು ಹದಿನಾರನೆಯ ಶತಮಾನದಲ್ಲಿ ವಿಜಯನಗರದ ಚಕ್ರವರ್ತಿಯಾಗಿದ್ದ ಶ್ರೀಕೃಷ್ಣದೇವರಾಯನು ತೆಲುಗಿನಲ್ಲಿ ನಾಟಕವೊಂದನ್ನು ರಚಿಸಿದ್ದಾನೆ.

**ಗೋದಾಸ್ತುತಿ**

ಆಂಡಾಳ್ ಅಥವಾ ಗೋದಾದೇವಿಯನ್ನು ಸಂಸ್ಕೃತದಲ್ಲಿ ವರ್ಣಿಸುವ ಗೋದಾಸ್ತುತಿ ಎಂಬ ಸ್ತೋತ್ರವನ್ನು ರಚಿಸಿದವರು ಕವಿತಾರ್ಕಿಕ ಸಿಂಹ, ಘಂಟಾವತಾರ ಎಂದು ಪ್ರಖ್ಯಾತರಾಗಿದ್ದ ವೇದಾಂತ ದೇಶಿಕರು. ಸಂಸ್ಕೃತ ಸಾಹಿತ್ಯ ಪ್ರಪಂಚದಲ್ಲಿ ಮೇರುಪರ್ವತದಂತೆ ಶೋಭಿಸುವ ಈ ವಿದ್ವತ್ತಲ್ಲಜರು ಕಾವ್ಯ, ನಾಟಕ, ತರ್ಕ, ಮೀಮಾಂಸಾ, ವೇದಾಂತಗಳಲ್ಲಿ ಪರಿಣತರಾಗಿ ಸರ್ವತಂತ್ರ ಸ್ವತಂತ್ರರಾಗಿದ್ದರು. ಹದಿಮೂರನೆಯ ಮತ್ತು ಹದಿನಾಲ್ಕನೆಯ ಶತಮಾನಗಳಲ್ಲಿ (ಕ್ರಿ.ಶ. 1268–1368) ಜೀವಿಸಿದ್ದ ಶ್ರೀವೇದಾಂತ ದೇಶಿಕರ ಮೂಲನಾಮಧೇಯ ವೇಂಕಟನಾಥ. ಇವರು ಸಂಸ್ಕೃತ, ಪ್ರಾಕೃತ, ತಮಿಳು ಮತ್ತು ಮಣಿಪ್ರವಾಳಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಪಾಂಡಿತ್ಯ–ಲಾಲಿತ್ಯಗಳು ಇವರ ಕೃತಿಗಳಲ್ಲಿ ಮೇಳೈಸಿವೆ. ಇವರು ರಚಿಸಿದ ಶ್ರೇಷ್ಠ ಸ್ತೋತ್ರ ಗೋದಾಸ್ತುತಿ. ಇದರಲ್ಲಿ ಇಪ್ಪತ್ತೊಂಬತ್ತು ಪದ್ಯಗಳಿವೆ. ಇಪ್ಪತ್ತೇಳು ಪದ್ಯಗಳು ವಸಂತತಿಲಕ ವೃತ್ತದಲ್ಲೂ ಕೊನೆಯ ಎರಡು ಪದ್ಯಗಳು ಮಾಲಿನೀ ವೃತ್ತದಲ್ಲೂ ನಿಬದ್ಧವಾಗಿವೆ.

**ಎಂ.ಎನ್. ಅನಂತನಾರಾಯಣ ಅಯ್ಯಂಗಾರ್ಯರು**

ವೇದಾಂತ ದೇಶಿಕರು ಸಂಸ್ಕೃತದಲ್ಲಿ ರಚಿಸಿದ ಗೋದಾಸ್ತುತಿಯನ್ನು ಕನ್ನಡ ಪದ್ಯರೂಪದಲ್ಲಿ ಅನುವಾದಿಸಿದವರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಪ್ರಾತಃಸ್ಮರಣೀಯ ಶ್ರೀ ಎಂ.ಎನ್. ಅನಂತನಾರಾಯಣ ಅಯ್ಯಂಗಾರ್ಯರು. ಸಂಸ್ಕೃತ–ಕನ್ನಡ–ತಮಿಳು ಭಾಷೆಗಳಲ್ಲಿ ನಿಷ್ಣಾತರಾಗಿದ್ದ ಅವರು ಮೂಲಕೃತಿಯ ಬೆಡಗೂ ಸೊಬಗೂ ಕನ್ನಡದಲ್ಲಿ ಇಳಿದು ಬರುವಂತೆ ಅನುವಾದವನ್ನು ಮಾಡಿ ಕನ್ನಡ ಸಾಹಿತ್ಯಕ್ಕೆ ವಿಶೇಷ ಕೊಡುಗೆಯನ್ನು ನೀಡಿದ್ದಾರೆ. ಕನ್ನಡ ಭಾಷೆಯ ಜಾಯಮಾನಕ್ಕೆ ಕಿಂಚಿತ್ತೂ ಕುಂದು ಬರದಂತೆ ಅನುವಾದಿಸಿರುವುದಲ್ಲದೆ ಅಂತ್ಯಪ್ರಾಸವನ್ನೂ ಇಟ್ಟು ವಿಶೇಷ ಅಂದ ಚಂದಗಳನ್ನು ಅವರು ಸಾಧಿಸಿದ್ದಾರೆ.

ಒಂದೆರಡು ಉದಾಹರಣೆಗಳನ್ನು ನೋಡೋಣ :

**ಸಂಸ್ಕೃತ ಮೂಲ :**
**ಶ್ರೀ ವಿಷ್ಣುಚಿತ್ತ ಕುಲನಂದನಕಲ್ಪವಲ್ಲೀಂ**
**ಶ್ರೀರಂಗರಾಜ ಹರಿದಂಚನಯೋಗದೃಶ್ಯಾಮ್ ।**
**ಸಾಕ್ಷಾತ್‌ಕ್ಷಮಾಂ ಕರುಣಯಾ ಕಮಲಾಮಿವಾನ್ಯಾಂ**
**ಗೋದಾಮನನ್ಯ ಶರಣಃ ಶರಣಂ ಪ್ರಪದ್ಯೇ॥**

**ಕನ್ನಡಾನುವಾದ**
**ಶ್ರೀ ವಿಷ್ಣುಚಿತ್ತ ಕುಲನಂದನದ ಕಲ್ಪಲತೆ**
**ಶ್ರೀರಂಗರಾಜ ಹರಿಚಂದನದ ಯೋಗರತೆ**
**ನೀನೆ ಕ್ಷಮೆ ಕರುಣೆಯಲಿ ಅನ್ಯಲಕುಮಿಯೆ ಆದೆ**
**ಗತಿಯನ್ಯವಿರದೆ ನಗೆ ನೀ ಶರಣು ಶ್ರೀಗೋದೆ॥**

**ಸಂಸ್ಕೃತ ಮೂಲ**
**ಶೋಣಾಧರೇಽಪಿ ಕುಚಯೋರಪಿ ತುಂಗಭದ್ರಾ**
**ವಾಚಾಂ ಪ್ರವಾಹನಿವಹೇಽಪಿ ಸರಸ್ವತೀ ತ್ವಮ್ ।**
**ಅಪ್ರಾಕೃತೈರಪಿ ರಸೈರ್ವಿರಜಾ ಸ್ವಭಾವಾತ್**
**ಗೋದಾಪಿ ದೇವಿ ಕಮಿತುರ್ನನು ನರ್ಮದಾಽಸಿ॥**

**ಕನ್ನಡಾನುವಾದ**
**ಸ್ತನ ತುಂಗಭದ್ರೆಯಲಿ ಅಧರದಲಿ ಶೋಣನದಿ**
**ನುಡಿಗರೆವ ಪೂರದಲಿ ಸರಸತಿಯು ಪಾವನದಿ ।**
**ರಜವಿರದ ವಿರಜನದಿ ಶ್ರೀ ಸೂಕ್ತಿಕರ ಗೋದೆ**
**ಪರಿಹಾಸ ನುಡಿಗಳಲಿ ನರ್ಮದೆಯೆ ನೀನಾದೆ ।**

ಇಷ್ಟು ಸೊಗಸಾದ ಕನ್ನಡದಲ್ಲಿ ಈ ಸ್ತೋತ್ರವು ಲಭ್ಯವಾಗಿರುವುದು ಕನ್ನಡಿಗರ ಸೌಭಾಗ್ಯ. ಗೋದಾದೇವಿಯನ್ನು ಹೊಗಳುವಾಗ ತುಂಗಭದ್ರೆ, ಶೋಣ, ಸರಸ್ವತಿ, ವಿರಜಾ, ನರ್ಮದಾ ಎಂಬ ನದಿಗಳ ಹೆಸರನ್ನು ಶ್ಲೇಷದಿಂದ ತಂದಿರುವ ವೇದಾಂತ ದೇಶಿಕರ ಪಾಂಡಿತ್ಯ–ಪ್ರತಿಭೆಗಳ ಸಂಗಮವನ್ನು ಎಷ್ಟು ಹೊಗಳಿದರೂ ಸಾಲದು. ಇಂಥ ಪದ್ಯಗಳ ಅನುವಾದವೂ ಸವಾಲನ್ನು ಒಡ್ಡುತ್ತದೆ. ಅದನ್ನು ಸಮರ್ಥವಾಗಿ ನಿಭಾಯಿಸಿರುವ ಶ್ರೀ ಅನಂತನಾರಾಯಣ ಅಯ್ಯಂಗಾರ್ಯರೂ ಇಲ್ಲಿ ಅಭಿನಂದನಾರ್ಹರು.

ಅನುವಾದಕರು ಜೀವಿಸಿದ್ದಾಗ ಅನುವಾದ ಬೆಳಕನ್ನು ಕಂಡಿರಲಿಲ್ಲವಂತೆ. ಅವರ ಸುಪುತ್ರಿ ಡಾ. ಪದ್ಮಾವತಿ ನರಸಿಂಹನ್ ಅವರು ಹಸ್ತಪ್ರತಿಯನ್ನು ಜತನದಿಂದ ಕಾಪಾಡಿಕೊಂಡು, ಸಂಪಾದಿಸಿ ಈಗ ಹೊರಗೆ ತಂದಿದ್ದಾರೆ. ಇದನ್ನು ಡಿ.ವಿ.ಕೆ. ಮೂರ್ತಿ ಪ್ರಕಾಶನದವರು ಪ್ರಕಟಿಸಿ ಜಿಜ್ಞಾಸುಗಳಿಗೆ ಉಪಕಾರ ಮಾಡಿದ್ದಾರೆ. ಅನುವಾದಕರಾಗಿತ್ತ ಅನಂತನಾರಾಯಣ ಅಯ್ಯಂಗಾರ್ಯರು ಕೇವಲ ವಿದ್ವಾಂಸರಾಗಿರಲಿಲ್ಲ. ಶ್ರೇಷ್ಠ ಗಮಕಿಗಳೂ ಆಗಿದ್ದರು. ವಾಚನ ಮತ್ತು ವ್ಯಾಖ್ಯಾನಗಳು ಅವರನ್ನು ಜನಪ್ರಿಯರನ್ನಾಗಿ ಮಾಡಿದ್ದವು. ಈಗ ಅವರು ರಚಿಸಿದ್ದ ಅನುವಾದವನ್ನು ಹಾಡುವ ಅವಕಾಶ ಗಮಕಿಗಳಿಗೆ ಲಭ್ಯವಾಗಿದೆ. ಶ್ರವಣ ಮಾಡಿ ಗಮಕ ಕಲಾರಸಿಕರೂ ಆನಂದಿಸಬಹುದು.

ಗೋದಾಸ್ತುತಿಯ ಫಲಶ್ರುತಿ ಇಂತಿದೆ–

**ಇತಿ ವಿಕಸಿತಭಕ್ತೇರುತ್ಥಿತಾಂ ವೆಂಕಟೇಶಾದ್**
**ಬಹುಗುಣರಮಣೀಯಾಂ ವಕ್ತಿ ಗೋದಾಸ್ತುತಿಂ ಯಃ ।**
**ಸ ಭವತಿ ಬಹುಮಾನ್ಯಃ ಶ್ರೀಮತೋ ರಂಗಭರ್ತುಃ**
**ಚರಣಕಮಲಸೇವಾಂ ಶಾಶ್ವತೀಮಭ್ಯುಪೈಷ್ಯನ್ ॥**
**ಭಕುತಿಯೊಳಗೊಗೆದ ಸ್ತುತಿ ವೆಂಕ್ಟೇಶ ಕವಿಯಿಂದ**
**ರಮಣೀಯ ಗುಣಸ್ತುತಿಯನಿದನೋದಲೊಲವಿಂದ**
**ಶ್ರೀರಂಗಪದಕಮಲಸೇವೆ ಶಾಶ್ವತ ಪಡೆವ**
**ಸಕಲಮಂಗಳ ಪಾತ್ರ ಬಹುಮಾನವವ ಪಡೆವ.**

# ಎಲ್ಲರೂ ಪ್ರೀತಿಸುವ ಎಲ್ಲರನ್ನು ಪ್ರೀತಿಸುವ ನಮ್ಮ ದೇವರು ಕೃಷ್ಣ

ಶ್ರೀಕೃಷ್ಣ ಕೇವಲ ಅವತಾರವಲ್ಲ, ನಮ್ಮ ಭಾರತೀಯ ಪರಂಪರೆಯ ಪ್ರತೀಕ, ಎಲ್ಲಾ ಮೌಲ್ಯಗಳ ಸಾರರೂಪ, ನಮ್ಮೆಲ್ಲರ ಮನಸ್ಸಿನ ದ್ವಂದ್ವಗಳಿಗೆ, ಹತಾಶೆಗೆ ಸದಾ ಸಕಾರಾತ್ಮಕ, ಕ್ರಿಯಾಶೀಲ, ಎದೆಗುಂದದ ಧೈರ್ಯಶಾಲಿ ಜೀವನದ ಪಾಠ ಕಲಿಸುವ ಧೀಮಂತ ಗುರು. ಧರ್ಮ ಅಧರ್ಮದ ತಕ್ಕಡಿಯಲ್ಲಿ ಭೇದ ಭಾವವಿಲ್ಲದೇ ಬಾಹುಬಲ, ಬುದ್ಧಿಬಲ, ಆತ್ಮಬಲದಿಂದ ನ್ಯಾಯ ನೀಡಿದ ಆದರ್ಶ ಪುರುಷ.

ಶ್ರೀಕೃಷ್ಣ, ಭಾರತೀಯ ಸಂಸ್ಕೃತಿಯನ್ನು, ಕಲೆಯನ್ನು, ದಾರ್ಶನಿಕತೆಯನ್ನು ಶ್ರೀಮಂತಗೊಳಿಸಿದ ದೇವರು.



ನಮ್ಮ ದಾಸ ಸಾಹಿತ್ಯದಲ್ಲಿ ಕೃಷ್ಣ ನೀ ಬೇಗನೇ ಬಾರೋ, ಜಗದ್ದೋದ್ಧಾರಕ ಎಂಬ ಹೃದ್ಯವಾದ ವ್ಯಾಸರಾಜರ ಬಾಲ ಲೀಲೆಗಳ ವರ್ಣನೆಯ ಹಾಡುಗಳು, ಪುರಂದರ ದಾಸರು ತಮ್ಮ ಹಾಡುಗಳಲ್ಲಿ ಕೃಷ್ಣನ ತುಂಟಾಟಗಳನ್ನು ವರ್ಣಿಸುವ ಪರಿಯೇ ಬೇರೆ ! ಕನಕದಾಸರ ಹಾಡುಗಳಲ್ಲಿ ಆಧ್ಯಾತ್ಮಿಕ ದೃಷ್ಟಿಯಲ್ಲಿ ಕೃಷ್ಣನ ವರ್ಣನೆಯಾದರೆ, ವಾದಿರಾಜರ "ರಂಗಾ ಉತ್ತುಂಗಾ ನರಸಿಂಗ ಬೇಗ ಬಾರೋ... ಮುಂತಾದ ಹೃದ್ಯವಾದ ಲಯ, ಭಾಷೆಯ ಸೊಬಗು ಹಾಡುಗಳನ್ನು ಕೇಳಿ ದವರಿಗೇ ಗೊತ್ತು ! ರಂಗ, ವಿಠಲ, ಕೃಷ್ಣ ಹೀಗೆ ಹಲವಾರು ರೂಪಗಳಲ್ಲಿ ನಮ್ಮ ಹಲವಾರು ದಾಸ ಪ್ರಮುಖರಾದ ಶ್ರೀಪಾದ ರಾಜರು, ವಿಜಯದಾಸರು, ಗೋಪಾಲ ದಾಸರು, ಮಹಿಪತಿ ದಾಸರು, ಪ್ರಸನ್ನ ತೀರ್ಥರೂ ಹೀಗೇ ಎಲ್ಲರೂ ಶ್ರೀಕೃಷ್ಣನ ಲೀಲಾವಿನೋದವನ್ನು ತಮ್ಮದೇ ಸ್ಫೂರ್ತಿಯ ಸೆಲೆಯಲ್ಲಿ ಹಾಡಿ ಹೊಗಳಿದ್ದಾರೆ.

ಕೃಷ್ಣ ನಮ್ಮೆಲ್ಲರ ಭಾವದ, ವ್ಯಕ್ತಿತ್ವದ ಪ್ರತೀಕ, ತುಂಟಬಾಲಕ, ಸರಸ ವಿಲಾಸಿ ಯುವಕ, ಪ್ರೇಮನಾಯಕ, ಉತ್ತಮ ಪತಿ, ಸಮ್ಮೋಹಕ ಕೊಳಲು ವಾದಕ, ನೃತ್ಯಪಟು, ಅಪ್ರತಿಮ ಯೋಧ, ಮಹಾ ಮುತ್ಸದ್ದಿ ರಾಜಕಾರಣಿ, ಈಗಿನವರಿಗೆ ಮ್ಯಾನೇಜ್‌ಮೆಂಟ್ ಗುರು, ಒಳ್ಳೆಯ ಗೆಳೆಯ, ತನ್ನ ಪ್ರೀತಿ, ಉಲ್ಲಸಿತ ಮನಸ್ಸು, ಹೃದಯ ಆತ್ಮದಿಂದಲೇ ಕೃಷ್ಣ ಎಂದೆಂದಿಗೂ ಜೀವಂತಿಕೆಯ ಪ್ರತೀಕ. ಧರ್ಮ ಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಪಾಂಡವ ಪಕ್ಷಪಾತಿಯಾಗಿ ನಿಂತು "ಪವಿತ್ರಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ" ಸಾಧು ಸಂತರ ರಕ್ಷಣೆ, ದುಷ್ಟರ ವಿನಾಶದ ಗುರಿಯೊಂದಿಗೆ ನಡೆದ ಆ ಮಹಾಯುದ್ಧದಲ್ಲಿ ಅರ್ಜುನನಿಗೆ ತನ್ನ ಸ್ಫೂರ್ತಿಯ ಮಾತುಗಳಿಂದ ಬಡಿದೆಬ್ಬಿಸಿದ್ದೇ ಭಗವದ್ಗೀತೆಯಾಯಿತು. ಸೈನ್ಯ ಬಲಕ್ಕಿಂತ ಬುದ್ಧಬಲ ಮಿಗಿಲು, ಶಕ್ತಿಯ ಸದ್ಬಳಕೆಯೇ ಮುಖ್ಯ ಎಂಬ ಕೃಷ್ಣನ ಸಂದೇಶ ಇಂದಿನ ಮ್ಯಾನೇಜ್ ಮೆಂಟ್ ಗುರುಗಳ ಮೂಲಮಂತ್ರ ವಾಗಿದೆ. ಕೃಷ್ಣನ ಶಕ್ತಿ ಸಾಮರ್ಥ್ಯಗಳೆಲ್ಲ ವನ್ನೂ ಹೇಳುವ ಎಷ್ಟೇ ಕಥೆಗಳಿದ್ದರೂ, ಅವನು ನಮ್ಮಂತೆಯೇ ಸಾಮಾನ್ಯನಂತೆ ಬದುಕಿದ್ದನೇನೋ ಎನಿಸುತ್ತದೆ. ಎಲ್ಲರನ್ನೂ ಪ್ರೀತಿಸುವ, ಎಲ್ಲರೂ ಪ್ರೀತಿಸುವ ದೇವರು ಎನಿಸುತ್ತಾನೆ.

ಕೃಷ್ಣ ಬರೀ ಹಿಂದುಗಳಿಗಷ್ಟೇ ದೇವರಲ್ಲ, ತುಂಟ ಬಾಲಕ, ಕೊಳಲು ವಾದಕ, ಯುವಕ, ರಾಜತಂತ್ರ ನಿಪುಣ, ಧರ್ಮ ರಕ್ಷಕ ಶ್ರೀಕೃಷ್ಣನ ಜನ್ಮಾಷ್ಟಮಿಯನ್ನು ಅವರವರ ಭಾವಕ್ಕೆ, ಭಕುತಿಗೆ ತಕ್ಕಂತೆ ತರತರದ ಸಿಹಿ ಉಂಡೆಗಳೂ, ಚಕ್ಕುಲಿ, ಕೋಡುಬಳೆ, ಕರ್ಜಿಕಾಯಿ, ನಿಪ್ಪಟ್ಟು ಮುಂತಾದ ಭಕ್ಷ್ಯಗಳೊಂದಿಗೆ ಆಚರಿಸೋಣವಲ್ಲವೇ.



ಡಾ.ಸುಧಾ. ಎಂ.ಎನ್.
ಮೈಸೂರು
ಮೊ: 9448071933

## ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ಪ್ರಕಟ

# ಮೈಸೂರಿನ ಗುರುರಾಜ್, ಕೊಡಗಿನ ಕೆ.ಸಿ.ದೇವಕಿ, ಮಂಡ್ಯದ ಚನ್ನಮ್ಮ, ಚಾಮರಾಜನಗರದ ಶಿವರುದ್ರಸ್ವಾಮಿ, ಹಾಸನದ ರಂಗಶೆಟ್ಟಿಗೆ ಪ್ರಶಸ್ತಿ

ಬೆಂಗಳೂರು, ಆ. 18 (ಕೆಎಂಶಿ)– ಕರ್ನಾಟಕ ಜಾನಪದ ಅಕಾಡೆಮಿಯು 2022ನೇ ಸಾಲಿನ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಿದೆ.



ಗುರುರಾಜ್



ಕೆ.ಸಿ.ದೇವಕಿ



ಚನ್ನಮ್ಮ



ಶಿವರುದ್ರಸ್ವಾಮಿ



ರಂಗಶೆಟ್ಟಿ

ಪ್ರತಿ ಜಿಲ್ಲೆಗೆ ಒಬ್ಬರಂತೆ 30 ಹಿರಿಯ ಕಲಾವಿದರು ಹಾಗೂ ಇಬ್ಬರು ಜಾನಪದ ತಜ್ಞರಿಗೆ ವಾರ್ಷಿಕ ಗೌರವ ಪ್ರಶಸ್ತಿಗಳನ್ನು ನೀಡಲಾಗುವುದು ಎಂದು ಅಕಾಡೆಮಿಯ ಅಧ್ಯಕ್ಷರಾದ ಬಿ ಮಂಜಮ್ಮ ಜೋಗತಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಲಾವಿದರಿಗೆ ನೀಡುವ ಗೌರವ ಪ್ರಶಸ್ತಿಯು 25,000 ರೂ. ನಗದು ಹಾಗೂ ತಜ್ಞರಿಗೆ ನೀಡುವ ಗೌರವ ಪ್ರಶಸ್ತಿಯು 50,000 ರೂ. ನಗದು ಸ್ಮರಣಿಕೆ, ಶಾಲು, ಹಾರ, ಫಲ ತಾಂಬೂಲವನ್ನು ಒಳಗೊಂಡಿರುತ್ತದೆ ಎಂದರು.

ಬೆಂಗಳೂರಿನ ಜಾನಪದ ಕಥೆಗಾರರಾದ ಚಿನ್ನಮ್ಮಯ್ಯ, ಜಾನಪದ ವೈದ್ಯ ಹುಚ್ಚ ಹನುಮಯ್ಯ, ರಾಮನಗರದ ತತ್ವಪದಕಾರರಾದ ಜಿ.ಗುರುಮೂರ್ತಿ, ತುಮಕೂರಿನ ಸೋಬಾನೆ ಪದ ಹಾಡುಗಾರರಾದ ಹನುಮಕ್ಕ, ಕೋಲಾರದ ಜಾನಪದ ಗಾಯಕರಾದ ಡಿ.ಆರ್. ರಾಜಪ್ಪ, ಶಿವಮೊಗ್ಗದ ಡೊಳ್ಳು ಕುಣಿತ ಕಲಾವಿದರಾದ ದೇವೇಂದ್ರಪ್ಪ, ಚಿತ್ರದುರ್ಗದ ಜಾನಪದ ಗಾಯಕರಾದ ಡಾ.ಕಾ. ರಾಮೇಶ್ವರಪ್ಪ, ದಾವಣಗೆರೆಯ ಭಜನೆ ಗಾಯಕರಾದ ಡಿ.ಜಿ.ನಾಗರಾಜಪ್ಪ, ಚಿಕ್ಕಬಳ್ಳಾಪುರದ ಪಂಡರಿ ಭಜನೆಯ ನಾರಾಯಣಸ್ವಾಮಿ, ಮಂಡ್ಯದ ತತ್ವಪದಕಾರರಾದ ಚನ್ನಮ್ಮ, ಮೈಸೂರಿನ ತಂಬೂರಿ ಪದ ಗಾರರಾದ ಗುರುರಾಜ್, ಹಾಸನದ ರಂಗದ ಕುಣಿತ ಕಲಾವಿದರಾದ ರಂಗಶೆಟ್ಟಿ, ದಕ್ಷಿಣ ಕನ್ನಡ ಜಿಲ್ಲೆಯ ಭೂತಾರಾಧನೆ ಕಲಾವಿದರಾದ ಅಣ್ಣುಶೆಟ್ಟಿ, ಚಾಮರಾಜನಗರ ಜಿಲ್ಲೆಯ ವೀರಭದ್ರನ ನೃತ್ಯ ಕಲಾವಿದರಾದ ಶಿವರುದ್ರಸ್ವಾಮಿ, ಚಿಕ್ಕಮಗಳೂರಿನ ವೀರಗಾಸೆ ಕಲಾವಿದರಾದ ರೇವಣಸಿದ್ದಪ್ಪ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಹೇಳಿದರು.

ಕೊಡಗು ಜಿಲ್ಲೆಯ ಜಾನಪದ ಹಾಡುಗಾರರಾದ ಕೆ.ಸಿ. ದೇವಕಿ, ಉಡುಪಿಯ ಜನಪದ ಕರಕುಶಲ ಕಲೆಗಾರರಾದ ರಾಧಮ್ಮ, ಧಾರವಾಡದ ಹಾಡುಗಾರರಾದ ಸಾಂಬಯ್ಯ ಹಿರೇಮಠ, ಗದಗದ ಸೋಬಾನೆ ಪದಗಾರರಾದ ನಾಗಮ್ಮ ಹೊನ್ನಪ್ಪ ಜೋಗಿ, ವಿಜಯಪುರದ ಏಕತಾರಿ ಪದಗಳಾದ ವೀರಭದ್ರಪ್ಪ ಯಲ್ಲಪ್ಪ ದಳವಾಯಿ, ಬಾಗಲಕೋಟೆಯ ಹಂತಿ ಪದಗಾರರಾದ ಶಿವನವ್ವ ಮಲ್ಲಪ್ಪ ಭಾವಿಕಟ್ಟಿ, ಹಾವೇರಿಯ ಶಹನಾಯಿ ವಾದಕರಾದ ಚಂದ್ರಪ್ಪ ಯಲ್ಲಪ್ಪ ಭಜಂತ್ರಿ, ಬೆಳಗಾವಿಯ ಹಲಗೆ ವಾದನ ಕಲಾವಿದರಾದ ಪುಂಡಲೀಕ ಮಾದರ, ಉತ್ತರ ಕನ್ನಡ ಜಿಲ್ಲೆ ಸಂಪ್ರದಾಯ ಪದಗಾರರಾದ ಶಾರದಾ ಮಹಾದೇವ ಮೊಗೇರ, ಬಳ್ಳಾರಿಯ ಜೋಗತಿ ನೃತ್ಯಗಾರರಾದ ಮಾತಾ ಅಂಜಿನಮ್ಮ ಜೋಗತಿ, ರಾಯಚೂರಿನ ಗೀಗಿಪದಗಾರರಾದ ಪ್ರಕಾಶಯ್ಯ ನಂದಿ, ಕೊಪ್ಪಳದ ಶಹನಾಯಿ ವಾದಕರಾದ ದೊಡ್ಡ ಯಮನೂರಪ್ಪ ಭೀಮಪ್ಪ ಬಜಂತ್ರಿ, ಕಲಬುರಗಿಯ ತತ್ವಪದಕಾರರ ಕರಬಸಯ್ಯ ಶಂಕರಯ್ಯ ಮಠಪತಿ, ಯಾದಗಿರಿಯ ಸಂಪ್ರದಾಯ ಪದಗಾರರಾದ ರಾಧಾಬಾಯಿ ಕೃಷ್ಣರಾವ ಮಾಲಿ ಪಾಟೀಲ ಹಾಗೂ ಬೀದರ್‌ನ ಲಂಬಾಣಿ ನೃತ್ಯಗಾರರಾದ ಭಾರತೀಬಾಯಿಯವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಹೇಳಿದರು.

ಡಾ.ಜೀ. ಶಂ.ಪ. ತಜ್ಞ ಪ್ರಶಸ್ತಿಯನ್ನು ಮೈಸೂರಿನ ವ.ನಂ. ಶಿವರಾಮು ಹಾಗೂ ಡಾ.ಬಿ. ಎಸ್. ಗದ್ದಗಿಮಠ ಪ್ರಶಸ್ತಿಯನ್ನು ಬಾಗಲಕೋಟೆಯ ಡಾ ಶಂಭು ಬಳಿಗಾರ ಇಳಕಲ್ಲ ಅವರಿಗೆ ನೀಡಲಾಗುವುದು.

ಸದ್ಯಕ್ಕೆ ದಿನಾಂಕ ನಿಗದಿಯಾಗಿಲ್ಲ. ಪ್ರಶಸ್ತಿ ಪುರಸ್ಕೃತರ ಆಯ್ಕೆಯಲ್ಲಿ ಸಾಮಾಜಿಕ ನ್ಯಾಯಕ್ಕೆ ಒತ್ತುಕೊಡಲಾಗಿದೆ. ತಮ್ಮ ಅಧಿಕಾರದ ಅವಧಿ ಅಕ್ಟೋಬರ್‌ಗೆ ನಮ್ಮನ್ನು ಮುಂದುವರೆಸಿದರೂ ಸಂತೋಷ ಇಲ್ಲದಿದ್ದರೂ ಸಂತೋಷ ಎಂದರು.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com*




## ಹ್ಯೂಮನ್ ಟ್ರಾಫಿಕ್ ಸುತ್ತ ಶೇರ್

ಸತ್ಯಮೂರ್ತಿ ತೋಳಹುಣಸೆ

ಕನ್ನಡತಿ ಖ್ಯಾತಿಯ ಕಿರಣ್ ರಾಜ್ ಅಭಿನಯದ ಮತ್ತೊಂದು ಚಿತ್ರ ಶೇರ್. ಮಾನವ ಕಳ್ಳ ಸಾಗಾಣಿಕೆಯ ಸುತ್ತ ನಡೆಯುವ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ಪಕ್ಕಾ ಆಕ್ಷನ್ ಹೀರೋ ಆಗಿ ಕಿರಣ್ ರಾಜ್ ಕಾಣಿಸಿಕೊಳ್ಳಲಿದ್ದಾರೆ.

ರತ್ನಮಂಜರಿ, ಭರ್ಜರಿ ಗಂಡು ನಂತರ ಪ್ರಸಿದ್ಧ್ ನಿರ್ದೇಶಿಸುತ್ತಿರುವ ಮೂರನೇ ಚಿತ್ರ ಇದಾಗಿದ್ದು, ಈ ಚಿತ್ರದ ಮುಹೂರ್ತ ಸಮಾರಂಭ ಇತ್ತೀಚೆಗೆ ಕಂಠೀರವ ಸ್ಟುಡಿಯೋದಲ್ಲಿ ನೆರವೇರಿತು. ನಿರ್ಮಾಪಕ ಡಾ॥ ಸುದರ್ಶನ್ ಸುಂದರರಾಜ್ (ಬೀದರ್) ಆರಂಭ ಫಲಕ ತೋರಿದರು.

ನಂತರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ನಿರ್ದೇಶಕ ಪ್ರಸಿದ್ಧ್ ಶೇರ್ ಪಕ್ಕಾ ಆಕ್ಷನ್, ಥ್ರಿಲ್ಲರ್ ಚಿತ್ರ. ಅನಾಥಾಶ್ರಮ ಹಾಗೂ ಎಪಿಎಂಸಿ ಮಾರ್ಕೆಟ್ ಏರಿಯಾದಲ್ಲಿ ಹೆಚ್ಚಿನ ಕಥೆ ನಡೆಯುತ್ತದೆ. ಕಿರಣ್ ಒಬ್ಬ ಅನಾಥ ಯುವಕನಾಗಿ ಕಾಣಿಸಿಕೊಳ್ಳುತ್ತಿದ್ದಾರೆ. "ಕಿರಣ್ ರಾಜ್ ಚಾಕೊಲೇಟ್ ಹೀರೋ ಆಗಿ ಗುರುತಿಸಿಕೊಂಡವರು. ಅವರಿಗೆ ರಗಡ್ ಲುಕ್ ಹೇಗೆ ಸರಿ ಹೊಂದುತ್ತೆ ಎಂಬ ಪ್ರಶ್ನೆಗೆ ಉತ್ತರಿಸಿದ ನಿರ್ದೇಶಕರು, ಮಾಸ್ ಪಾತ್ರಕ್ಕೆ ಬೇಕಾದ




ಕಿಕ್ ಬಾಕ್ಸಿಂಗ್, ಮಾರ್ಷಲ್ ಆರ್ಟ್ಸ್ ಎಲ್ಲವನ್ನೂ ಕಿರಣ್ ಅಭ್ಯಾಸ ಮಾಡಿದ್ದಾರೆ. ನಮ್ಮ ಕಾಂಬಿನೇಶನ್ ನ ಭರ್ಜರಿ ಗಂಡು ಸಹ ಮಾಸ್ ಚಿತ್ರವಾಗಿದೆ. ಆ ಚಿತ್ರದ ಬಹುತೇಕ ತಂತ್ರಜ್ಞರು ಇಲ್ಲೂ ಮುಂದುವರೆಯಲಿದ್ದಾರೆ. 22ರಿಂದ ಚಿತ್ರೀಕರಣ ಆರಂಭವಾಗಲಿದೆ ಎಂದು "ಶೇರ್" ಬಗ್ಗೆ ಮಾಹಿತಿ ನೀಡಿದರು.

ನಾಯಕ ಕಿರಣ್ ರಾಜ್ ಮಾತನಾಡಿ, ಆಕ್ಷನ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ಅನಾಥ ಹುಡುಗರ ಸುತ್ತ ನಡೆವ ಕಥೆಯಿದೆ. ಬಡ್ಡೀಸ್, ಭರ್ಜರಿ ಗಂಡು ನಂತರ ಮತ್ತೊಂದು ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ ಎಂದು ತಿಳಿಸಿದರು. ನಾನು ಮೂಲತಃ ಬೀದರ್‌ನವನು. ವಕೀಲ ನಾಗಿದ್ದರೂ ರಾಜಕೀಯದಲ್ಲೂ ತೊಡಗಿಕೊಂಡಿದ್ದೇನೆ. ನಿರ್ದೇಶಕರು ಹೇಳಿದ ಕಥೆ ಇಷ್ಟವಾಗಿ ನಿರ್ಮಾಣಕ್ಕೆ ಮುಂದಾದೆ ಎಂದು ನಿರ್ಮಾಪಕ ಸುದರ್ಶನ್ ಸುಂದರರಾಜ್ ಹೇಳಿದರು. ಚಿತ್ರದ ನಾಯಕಿ ಸುರೇಖಾ ಹಾಗೂ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಳ್ಳುತ್ತಿರುವ ತನೀಶಾ ತಮ್ಮ ಪಾತ್ರಗಳ ಬಗ್ಗೆ ಮಾತನಾಡಿದರು. ಕಿಟ್ಟಿ ಕೌಶಿಕ್ ಛಾಯಾಗ್ರಹಣದ ಬಗ್ಗೆ ಹಾಗೂ ಸಂಗೀತ ನಿರ್ದೇಶಕ ಗುಮ್ಮಿನೇನಿ ವಿಜಯ್ ಹಾಡುಗಳ ಕುರಿತು ಮಾಹಿತಿ ನೀಡಿದರು.



## ಡೊಳ್ಳು ಮಾಯಾನಗರಿ ಹಾಡಿಗೆ ಡಾಲಿ ಧನಂಜಯ ಸಾಥ್

ಗೂಗ್ಲಿ ಖ್ಯಾತಿಯ ನಿರ್ದೇಶಕ ಪವನ್ ಒಡೆಯರ್ ಡೊಳ್ಳು ಸಿನಿಮಾದ ಮೂಲಕ ಮೊದಲ ಬಾರಿಗೆ ನಿರ್ಮಾಪಕರಾಗಿ ಹೆಜ್ಜೆ ಇಟ್ಟಿದ್ದಾರೆ. ಆರಂಭದಿಂದಲೂ ತನ್ನ ಕಂಟೆಂಟ್ ಮೂಲಕ ಭಾರೀ ಸದ್ದು ಮಾಡ್ತಿದ್ದ ಈ ಚಿತ್ರ ನ್ಯಾಷನಲ್ ಅವಾರ್ಡ್ ಜೊತೆಗೆ ಹಲವು ಅಂತರಾಷ್ಟ್ರೀಯ ಪ್ರಶಸ್ತಿಗಳನ್ನು ತನ್ನ ಒಡಲಿಗೆ ಹಾಕಿಕೊಂಡಿದೆ. ಅಲ್ಲದೆ ಹಲವು ಅಂತರಾಷ್ಟ್ರೀಯ ಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡು ಮೆಚ್ಚುಗೆ ಪಡೆದಿರುವ ಡೊಳ್ಳು ಸಿನಿಮಾದ ಮೊದಲ ಹಾಡನ್ನು ಡಾಲಿ ಧನಂಜಯ್ ಬಿಡುಗಡೆ ಮಾಡಿ, ತಾವು ಆರಂಭದಲ್ಲಿ ಬೆಂಗಳೂರಿಗೆ ಬಂದ ದಿನಗಳನ್ನು ಮೆಲುಕು ಹಾಕಿದರು. ಹಳ್ಳಿಯಿಂದ ಕೆಲಸ ಅರಸಿ ಬೆಂಗಳೂರಿಗೆ ಬರುವ ನಾಯಕನ ಕಣ್ಣಲ್ಲಿ ಮಾಯಾನಗರಿ ಸೊಬಗನ್ನು ತೆರೆದಿಡುವ ಈ ಹಾಡಿಗೆ ಪ್ರದ್ಯುಮ್ನ ನರಹಳ್ಳಿ ಅವರು ಪದಪುಂಜಗಳನ್ನು ಪೋಣಿಸಿ ಸಾಹಿತ್ಯ ಬರೆದಿದ್ದು, ಅನಂತ್ ಕಾಮನ್ ಸಂಗೀತದ ಇಂಪು ತುಂಬಿರುವ ಹಾಡಿಗೆ ಚಿತ್ರದ ನಿರ್ದೇಶಕ ಸಾಗರ್ ಪುರಾಣಿಕ್ ಅವರೇ ಧ್ವನಿಯಾಗಿದ್ದಾರೆ.

ಒಡೆಯರ್ ಮೂವೀಸ್ ಬ್ಯಾನರ್ ನಡಿ ನಿರ್ಮಾಣವಾಗಿರುವ ಈ ಚಿತ್ರದಲ್ಲಿ ಕಾರ್ತಿಕ್ ಮಹೇಶ್, ನಿಧಿ ಹೆಗ್ಡೆ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಉಳಿದಂತೆ ಬಾಬು ಹಿರಣ್ಣಯ್ಯ, ಚಂದ್ರ ಮಯೂರ್, ಶರತ್ ಮುಂತಾದ ಕಲಾವಿದರು ನಟಿಸಿದ್ದಾರೆ. ಶ್ರೀನಿಧಿ ಚಿತ್ರಕಥೆ, ಸಂಭಾಷಣೆ ಬರೆದಿದ್ದು, ಅಭಿಲಾಷ್ ಕಲಾಥಿ ಕ್ಯಾಮೆರಾ ಈ ಚಿತ್ರಕ್ಕಿದೆ. ಜನಪದ ಕಲೆ ಮಹತ್ವ ಎತ್ತಿ ತೋರಿಸುವ ಈ ಚಿತ್ರ ಇದೇ 26ರಂದು ಬಿಗ್ ಸ್ಕ್ರೀನ್‌ನಲ್ಲಿ ಪಯಣ ಶುರು ಮಾಡಲಿದೆ.



## ಕಂಬ್ಳಿಹುಳ ಎಮೋಷನಲ್ ಲವ್ ಸ್ಟೋರಿ




ಕಂಬ್ಳಿಹುಳ ಕನ್ನಡದಲ್ಲಿ ಹೀಗೊಂದು ವಿಭಿನ್ನ ಶೀರ್ಷಿಕೆಯ ಚಿತ್ರವೊಂದು ನಿರ್ಮಾಣವಾಗಿದೆ. ಕಿರಿಕ್ ಪಾರ್ಟಿ, ಡಿಯರ್ ವಿಕ್ರಂ ಚಿತ್ರಗಳಲ್ಲಿ ನಟಿಸಿರುವ ಅಂಜನ್ ನಾಗೇಂದ್ರ ಹಾಗೂ ಅಶಿತಾ ಹೆಗ್ಡೆ ನಾಯಕ, ನಾಯಕಿಯಾಗಿ ಅಭಿನಯಿಸಿರುವ ಈ ಚಿತ್ರದ ಜಾರಿ ಬಿದ್ದರೆ ಯಾಕೀ ನಗು ಎಂಬ ಪ್ರೇಮಗೀತೆಯ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ಗ್ರೇ ಸ್ಕ್ವೇರ್ ಸ್ಟುಡಿಯೋಸ್ ನಿರ್ಮಾಣದ ಈ ಚಿತ್ರಕ್ಕೆ ಹಿಂದೆ ನವನ್ ಶ್ರೀನಿವಾಸ್ ಅವರು ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಶಿವಪ್ರಸಾದ್ ಅವರ ಸಂಗೀತ ಸಂಯೋಜನೆಯಲ್ಲಿ ಮೂಡಿಬಂದಿರುವ ಈ ಗೀತೆಗೆ ಸಂಗೀತಾ ರವೀಂದ್ರನಾಥ್ ಹಾಗೂ ವಿಜಯಪ್ರಕಾಶ್ ದನಿಯಾಗಿದ್ದಾರೆ.

ಕಾರ್ಯಕ್ರಮದಲ್ಲಿ ಚಿತ್ರದ ಕುರಿತಂತೆ ಮಾತನಾಡಿದ ನಿರ್ದೇಶಕ ನವನ್ ಈ ಹಿಂದೆ ಹಲವಾರು ಕಿರುಚಿತ್ರಗಳನ್ನು ನಿರ್ದೇಶಿಸಿದ್ದು, ಸಹಾಯಕ ನಿರ್ದೇಶಕನಾಗೂ ಕೆಲಸ ಮಾಡಿದ್ದೇನೆ. ನನ್ನ ಕಿರುಚಿತ್ರವನ್ನು ನೋಡಿ ಇಷ್ಟಪಟ್ಟು ನಿರ್ಮಾಪಕರೊಬ್ಬರು ಸಿನಿಮಾ ಮಾಡಿಕೊಡಲು ಹೇಳಿದರು. ಅದೇ ಈ ಸಿನಿಮಾ. ಕಳೆದ ಲಾಕ್‌ಡೌನ್‌ನಲ್ಲೇ ಚಿತ್ರ ಬಹುತೇಕ ಮುಗಿದಿತ್ತು, ಮಲೆನಾಡು, ಹಾಸನ ಸುತ್ತಮುತ್ತ 85 ದಿನಗಳ ಕಾಲ ಚಿತ್ರೀಕರಣ ಮಾಡಿದ್ದೇವೆ. ಮಲೆನಾಡ ಹಿನ್ನೆಲೆಯಲ್ಲಿ ನಡೆಯುವ ಎಮೋಷನಲ್ ಪ್ರೇಮಕಥೆ ಇದಾಗಿದ್ದು, ಕಂಬ್ಳಿಹುಳು ಬದಲಾವಣೆಯ ಸಂಕೇತ, ಬದಲಾವಣೆ ಚಿತ್ರದ ಪಾತ್ರಗಳಲ್ಲೂ ಇದೆ, ಶೃಂಗೇರಿ, ತೀರ್ಥಹಳ್ಳಿ, ಸಕಲೇಶಪುರದ ಸುತ್ತಮುತ್ತ ಚಿತ್ರೀಕರಿಸಿದ್ದೇವೆ ಎಂದು ಹೇಳಿದರು. ಈ ಚಿತ್ರಕ್ಕೆ ಸಿವಿಲ್ ಇಂಜಿನಿಯರ್‌ಗಳಾದ ಸವೀನ್, ವಿಜಯ್, ಪುನೀತ್ ಮತ್ತು ಗುರು ಸೇರಿ ಬಂಡವಾಳ ಹೂಡಿದ್ದಾರೆ. ಛಾಯಾಗ್ರಾಹಕ ಸತೀಶ್ ರಾಜೇಂದ್ರನ್ ಅವರು ತಮ್ಮ ಕ್ಯಾಮೆರಾ ಕಣ್ಣಲ್ಲಿ ಮಲೆನಾಡಿನ ಸುಂದರ ದೃಶ್ಯಗಳನ್ನು ಸೆರೆಹಿಡಿದಿದ್ದಾರೆ.



## ಸಿನಿಪದಬಂಧ–021

ಅಜ್ಹಾದ್ ಜಿ. ಆಚಾರ್ಯ 6361429085



ಹೆಸರು ____________

ವಿಳಾಸ ____________

ದೂರವಾಣಿ ಸಂಖ್ಯೆ ____________

**ಎಡದಿಂದ ಬಲಕ್ಕೆ**

1. ಕಾಶಿನಾಥ್ ಅಭಿನಯ ಜೋಡಿಯ 1984ರ ಚಿತ್ರ (4)
3. ಶ್ರೀನಾಥ್ ಆರತಿ ಪಂಡರಿ ಬಾಯಿ ಅಭಿನಯದ 1971ರ ಚಿತ್ರ (4)
6. ಅಂಬರೀಶ್ ಸುಮಲತಾ ಜೋಡಿ 1985 ರ ಚಿತ್ರ ಹಿಂತಿರುಗಿದೆ (3)
7. ತಾರ ದತ್ತಣ್ಣ ಶಶಿಕುಮಾರ್ ನಟಿಸಿದ ಪೀಠಿಕೆ ಎಂಬರ್ಥದ ಚಿತ್ರ (3)
8. ಕಲ್ಪನಾ ರಾಜೇಶ್ ಅಭಿನಯದ 1975ರ ಚಿತ್ರ (9)
9. ರಂಗನಾಯಕಿಯ ಗಂಡನ ಪಾತ್ರ ವಹಿಸಿದ ನಟ (3)
10. ರಮೇಶ್ ಭಟ್ ನಾಯಕನಾಗಿ ನಟಿಸಿದ 1978ರ ಚಿತ್ರ (3)
14. ಹಿಂದಿನ ಪ್ರಸಿದ್ಧ ಕಳನಾಯಕರ ಮಕ್ಕಳೇ ನಟಿಸಿದ ಚಿತ್ರ (4)
15. ಗೀತಾ ಬ್ಯಾಂಗಲ್ ಸ್ಟೋರ್ ಚಿತ್ರದ ನಿರ್ದೇಶಕ (4)

**ಮೇಲಿನಿಂದ ಕೆಳಕ್ಕೆ**

1. ದೇವರಾಜ್ ರಾಕ್ ಲೈನ್ ವೆಂಕಟೇಶ್ ನಟಿಸಿದ 1994ರ ಚಿತ್ರ (4)
2. ವಿನೋದ್ ಪ್ರಭಾಕರ್ ನಾಯಕನಾಗಿರುವ ಇತ್ತೀಚಿನ ಚಿತ್ರ (3)
3. ಸತೀಶ್ ನೀನಾಸಂ ರಚಿತಾ ರಾಮ್ ಜೋಡಿಯ 2018 ರ ಚಿತ್ರ (3)
4. ವಿಷ್ಣುವರ್ಧನ್ ಸೋನಾಕ್ಷಿ ಅಭಿನಯದ 1996 ಚಿತ್ರ (4)
5. ಎಸ್ ನಾರಾಯಣ್ ನಿರ್ದೇಶನದ ರಾಘವೇಂದ್ರ ರಾಜಕುಮಾರ್ ಚಿತ್ರ (9)
9. ಗಾಯತ್ರಿ ಪಿಎನ್ ಶ್ರೀನಿವಾಸ್ ನಟಿಸಿದ 1989ರ ಚಿತ್ರ (4)
11. ಮುನಿರತ್ನ ----- ಇತ್ತೀಚಿನ ಪೌರಾಣಿಕ ಚಿತ್ರ (4)
12. --- ಎಂದು ಜಯಂತಿ ಎಡಕಲ್ಲು ಗುಡ್ಡದ ಮೇಲೆ ಹಾಡಿದರು (3)
13. ಸಂಪತ್ತಿಗೆ ಸವಾಲ್ ಚಿತ್ರದ ನಾಯಕಿ ತಲೆಕೆಳಗಾಗಿದ್ದಾಳೆ. (3)



### ಸಿನಿ ಪದಬಂಧ 020ರ ಸರಿ ಉತ್ತರ

| | | | | | | | | | | |
|---|---|---|---|---|---|---|---|---|---|---|
| ಅ | ವ | ಳ | ಹೆ | ಜ್ಜೆ | | ಗಂ | ಧ | ರ್ವ | ಗಿ | ರಿ |
| | ಪ್ರ | | | | ಧ್ರು | | | | ರಿ | |
| | ಕಾ | | | ಭಾ | ವ | ನಾ | | | ಬಾ | |
| | ಯ | ಜೇ | ಅ | | | | ಅ | ಬ | ಲೆ | |
| ಭ | | | ಗ್ನಿ | | ಚ | | ಪ | | | ಐ |
| ವಾ | ಲಿ | | ಪ | ರೋ | ಪ | ಕಾ | ರಿ | | ವಿ | ಶ್ವ |
| ನಿ | | | ರೀ | | ಲ | | ಚಿ | | | ರ್ಯ |
| | ನಿ | ರೀ | ಕ್ಷೆ | | | | ತ | ವ | ರು | |
| | ನ | | | ಪು | ನೀ | ತ್ | | | ಗು | |
| | ಗಾ | | | | ನು | | | | ವ್ | |
| ರಂ | ಗಿ | ತ | ರಂ | ಗ | | ವ | ಸಂ | ತ | ಲ | ಕ್ಷ್ಮಿ |

ವಿಜೇತರು: ಎಸ್.ಎ.ಪ್ರಣವ್
S/O ಸತೀಶ್, (ಗ್ರಾಮ ಪಂಚಾಯತ್ ಸದಸ್ಯರು, ನಾಗಮಂಗಲ), ಹುಣಸೂರು ತಾಲೂಕು, ಮೈಸೂರು–571105

## 'ಪಂಪ'ನ ಹಾಡುಗಳಿಗೆ ಸಾಥ್ ನೀಡಿದ ಕನ್ನಡ ಕಟ್ಟಾಳುಗಳು..

ಆದಿಕವಿ ಪಂಪನ ಹೆಸರಿನಲ್ಲಿ ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಒಳಗೊಂಡ ಚಿತ್ರವೊಂದು ನಿರ್ಮಾಣವಾಗಿದೆ. ಎಸ್.ಮಹೇಂದರ್ ಅವರ ನಿರ್ದೇಶನದಲ್ಲಿ ಮೂಡಿ ಬಂದಿರುವ ಈ ಚಿತ್ರದ ಆಡಿಯೋ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು.

'ಪಂಪ' ಚಿತ್ರವನ್ನು ಟೋಟಲ್ ಕನ್ನಡದ ವಿ.ಲಕ್ಷ್ಮೀಕಾಂತ್ ಅವರು ನಿರ್ಮಿಸಿದ್ದಾರೆ. ನಾದಬ್ರಹ್ಮ ಹಂಸಲೇಖಾ ಅವರ ಸಂಗೀತ ಮತ್ತು ಸಾಹಿತ್ಯ ಈ ಚಿತ್ರಕ್ಕಿದೆ. ಚಿತ್ರದ ನಾಯಕನಾಗಿ ಹರಹರ ಮಹಾದೇವ ಖ್ಯಾತಿಯ ಕೀರ್ತಿಭಾನು, ನಾಯಕಿಯಾಗಿ ಸಂಗೀತಾ ಶೃಂಗೇರಿ ನಟಿಸಿದ್ದಾರೆ.

ಕನ್ನಡಾಭಿಮಾನಿ ಪ್ರೊಫೆಸರ್ ಪಂಪ ಅವರ ಹತ್ಯೆಯಾದ ಮೇಲೆ ನಡೆಯೋ ಕುತೂಹಲಕಾರಿ ಘಟನೆಗಳೇ ಈ ಚಿತ್ರದ ಕಥಾವಸ್ತು ಯಾರ ಮನಸ್ಸನ್ನೂ ನೋಯಿಸದ, ಪಂಪರನ್ನು ಕೊಲೆ ಮಾಡುವ ದ್ವೇಷ ಯಾರಿಗಿತ್ತು, ಇವರ ಹತ್ಯೆಯ ಹಿಂದೆ ಯಾವ ಹಿತಾಸಕ್ತಿಗಳು ಕಾರ್ಯನಿರ್ವಹಿಸಿದ್ದವು



ಎಂಬುದನ್ನು ಚಿತ್ರದಲ್ಲಿ ಎಳೆಎಳೆಯಾಗಿ ಬಿಚ್ಚಿಡುವ ಪ್ರಯತ್ನವನ್ನು ನಿರ್ದೇಶಕ ಎಸ್. ಮಹೇಂದರ್ ಅವರು ಮಾಡಿದ್ದಾರೆ. ಹದಿಹರೆಯದ ಪ್ರೀತಿ–ಪ್ರೇಮ, ಭಾಷೆಯ ಮೇಲಿನ ಅಭಿಮಾನ ಮತ್ತು ದುರಭಿಮಾನ, ಹೋರಾಟ ಇದೆಲ್ಲವನ್ನೂ ಪಂಪನ ಮೂಲಕ ಹೇಳಿದ್ದಾರೆ.


ಕನ್ನಡ ಅಭಿವೃದ್ಧಿ ಪ್ರಾಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ, ಗಾಯಕ ರವೀಂದ್ರ ಸೊರಗಾವಿ, ಅಲ್ಲದೆ ರಕ್ಷಣಾ ವೇದಿಕೆಯ ಪ್ರಮುಖರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಚಿತ್ರದ ಕುರಿತು ಮಾತನಾಡಿದ ನಿರ್ದೇಶಕ ಮಹೇಂದರ್, ಪಂಪ ಒಂದು ಪೊಯಿಟಿಕ್ ಆಗಿರುವಂಥ ಮರ್ಡರ್ ಮಿಸ್ಟರಿ. ಜೊತೆಗೆ ಅದ್ಭುತವಾದ ಲವ್‌ಸ್ಟೋರಿ ಕೂಡ ಚಿತ್ರದಲ್ಲಿದೆ. ಪಾತ್ರಗಳು ನೈಜವಾಗಿರಬೇಕೆಂದು ಎಲ್ಲ ಪಾತ್ರಗಳಿಗೆ ಹೊಸ ಕಲಾವಿದರನ್ನೇ ಬಳಸಿಕೊಂಡಿದ್ದೇವೆ. ಒಂದಷ್ಟು ವಿಷಯಗಳು ನೇರವಾಗಿವೆ. ಹಳದಿ ಕಣ್ಣಿಂದ ಸಿನಿಮಾ ನೋಡಬಾರದು ಅಷ್ಟೇ ಎಂದು ಮಾರ್ಮಿಕವಾಗಿ ಹೇಳಿದರು.

## ಮೇಡ್ ಇನ್ ಬೆಂಗಳೂರು ಹಾಡಿನಲ್ಲಿ 11 ಭಾಷೆ

ದೇಶದ ಮೂಲೆಗಳಿಂದ ಬಂದ ನಾನಾ ಭಾಷಿಗರು ಹಲವು ದಶಕಗಳಿಂದಲೂ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಅವರ ಮೇಲೆ ಕಥೆ ಮಾಡಿರುವ ಪ್ರದೀಪ್‌ಶಾಸ್ತ್ರಿ ಅವರು 'ಮೇಡ್ ಇನ್ ಬೆಂಗಳೂರು' ಎಂಬ ಚಿತ್ರವನ್ನು ನಿರ್ದೇಶಿಸಿದ್ದಾರೆ. ವಿಶೇಷವಾಗಿ ಈ ಚಿತ್ರದಲ್ಲಿ 12 ಹಾಡುಗಳಿದ್ದು, ಅದರಲ್ಲಿ ಬನ್ನಿರೇ ಬೆಂಗಳೂರಿಗೆ ಎಂಬ ಹಾಡಿನ ಬಿಡುಗಡೆ ಇತ್ತೀಚೆಗೆ ನಡೆಯಿತು. ಹಿರಿಯ ನಿರ್ದೇಶಕ ಭಗವಾನ್ ಅವರು ಈ ಹಾಡನ್ನು ಬಿಡುಗಡೆ ಮಾಡಿದರೆ, ಚಿತ್ರದ ಪೋಸ್ಟರನ್ನು ಪಿಆರ್‌ಓ ಸುಧೀಂದ್ರ ವೆಂಕಟೇಶ್ ಅವರು ಅನಾವರಣಗೊಳಿಸಿದರು.

ಅಶ್ವಿನ್ ಕುಮಾರ್ ಅವರ ಸಂಗೀತ ಸಂಯೋಜನೆಯಲ್ಲಿ ವಿಶೇಷವಾಗಿ ಹನ್ನೊಂದು ಭಾಷೆಗಳನ್ನು ಬಳಸಿ ರಚಿಸಲಾಗಿರುವ ಈ ಹಾಡನ್ನು ಹನ್ನೊಂದು ಗಾಯಕರು ಸೇರಿ ಹಾಡಿದ್ದಾರೆ. ಚಿತ್ರದ ನಿರ್ದೇಶಕ ಪ್ರದೀಪ್‌ಶಾಸ್ತ್ರಿ ಮಾತನಾಡಿ ಮಧ್ಯಮ ವರ್ಗದ ಯುವಕನೊಬ್ಬ ಐಟಿ ಕಂಪನಿಯ ಕೆಲಸ ಬಿಟ್ಟು, ಹೊಸ ಕಂಪನಿಯೊಂದನ್ನು ಆರಂಭಿಸಲು ನಿರ್ಧರಿಸಿ, ಅದಕ್ಕಾಗಿ ಹೂಡಿಕೆದಾರರನ್ನು ಹುಡುಕುತ್ತಾನೆ. ಯಾರೂ ಸಿಗದಿದ್ದಾಗ ಕೊನೆಗೆ ಗ್ಯಾಂಗ್‌ಸ್ಟರ್ ಬಳಿ ಸಾಲ ಪಡೆದು ಕಂಪನಿ ಆರಂಭಿಸುತ್ತಾನೆ. ನಂತರ ಏನಾಗುತ್ತದೆ ಎನ್ನುವುದೇ ಚಿತ್ರದ ಕಥಾಹಂದರ. ಹಿರಿಯ ಕಲಾವಿದರಾದ ಅನಂತನಾಗ್





ಸಿಂಧಿ ಮೂಲದ ಹೂಡಿಕೆದಾರನಾಗಿಯೂ, ಸಾಯಿಕುಮಾರ್ ಒಬ್ಬ ಗ್ಯಾಂಗ್‌ಸ್ಟರ್ ಆಗಿಯೂ ಕಾಣಿಸಿಕೊಂಡಿದ್ದಾರೆ, ಈ ಚಿತ್ರಕ್ಕೆ ಬೆಂಗಳೂರು, ಚಿಕ್ಕಮಗಳೂರು, ತಲಕಾಡು, ಮಂತ್ರಾಲಯ, ಮೇಲುಕೋಟೆಯಂಥ ಸ್ಥಳಗಳಲ್ಲಿ 65 ದಿನಗಳವರೆಗೆ ಚಿತ್ರೀಕರಿಸಿದ್ದೇವೆ ಎಂದು ವಿವರಿಸಿದರು.

ನಂತರ ಮಾತನಾಡಿದ ನಿರ್ಮಾಪಕ ಬಾಲಕೃಷ್ಣ, ನಾನು ರಾಘವೇಂದ್ರ ಸ್ವಾಮಿಗಳ ಭಕ್ತ. ಹಾಗಾಗಿ ರಾಯರ ಭಕ್ತರಿಂದಲೇ ಹಾಡನ್ನು ಬಿಡುಗಡೆ ಮಾಡಿಸಬೇಕೆಂಬ ಆಸೆಯಿತ್ತು ಹಾಗಾಗಿ ಮಂತ್ರಾಲಯ ಮಹಾತ್ಮೆಯಂತಹ ಚಿತ್ರವನ್ನು ಮಾಡಿದ್ದ ಭಗವಾನ್ ಅವರ ಕೈಲಿ ಈ ಹಾಡನ್ನು ಬಿಡುಗಡೆ ಮಾಡಿಸಿದ್ದೇನೆ. ಅಲ್ಲದೆ 48 ವರ್ಷಗಳ ಹಿಂದೆ ಶ್ರೀ ರಾಘವೇಂದ್ರ ಚಿತ್ರವಾಣಿ ಸಂಸ್ಥೆಯನ್ನು ಸುಧೀಂದ್ರ ಅವರು ಆರಂಭಿಸಿದ್ದರು. ಈಗ ಅದನ್ನು ಮುನ್ನಡೆಸುತ್ತಿರುವ ಸುಧೀಂದ್ರ ವೆಂಕಟೇಶ್ ಅವರಿಂದ ಚಿತ್ರದ ಪೋಸ್ಟರನ್ನು ಬಿಡುಗಡೆಗೊಳಿಸಿದ್ದೇನೆ. ಇದೇ ಸೆಪ್ಟೆಂಬರ್‌ನಲ್ಲಿ ಚಿತ್ರವನ್ನು ತೆರೆಗೆ ತರುವ ಯೋಜನೆಯಿದೆ ಎಂದು ಹೇಳಿದರು.

ಹಿರಿಯ ನಿರ್ದೇಶಕ ಭಗವಾನ್ ಮಾತನಾಡಿ ಹಿಂದೆ ನಾವು ಸಿನಿಮಾ ಮಾಡುವಾಗ ಯಾವುದೇ ಕೆಲಸ ಇಷ್ಟು ಸುಲಭವಿರಲಿಲ್ಲ. ಈಗ ತಂತ್ರಜ್ಞಾನ ತುಂಬಾ ಮುಂದುವರೆದಿದೆ ಎಂದು ಹೇಳಿದರು. ಇನ್ನು ಚಿತ್ರದ ನಾಯಕನಾಗಿ ಮಧುಸೂದನ್ ಗೋವಿಂದ್, ನಾಯಕಿಯಾಗಿ ಹಿಮಾಂಶಿ ವರ್ಮ ನಟಿಸಿದ್ದು, ಉಳಿದಂತೆ ಸುಧಾ ಬೆಳವಾಡಿ, ಮಂಜುನಾಥ ಹೆಗಡೆ, ಪ್ರಕಾಶ್ ಬೆಳವಾಡಿ ಮುಂತಾದವರು ನಟಿಸಿದ್ದಾರೆ.

# ರಂಗನತಿಟ್ಟು ಪಕ್ಷಿಧಾಮದಲ್ಲಿ ದೋಣಿ ವಿಹಾರ ಪುನರಾರಂಭ



ಶ್ರೀರಂಗಪಟ್ಟಣ, ಆ.18– ತಾಲೂಕಿನ ಪ್ರಸಿದ್ಧ ಪ್ರವಾಸಿ ತಾಣವಾದ ರಂಗನತಿಟ್ಟು ಪಕ್ಷಿಧಾಮದಲ್ಲಿ ಗುರುವಾರದಿಂದ ದೋಣಿ ವಿಹಾರ ಪುನರಾರಂಭಗೊಂಡಿದೆ.

ಕಾವೇರಿ ನದಿ ಜಲಾನಯನ ಪ್ರದೇಶದಲ್ಲಿ ಕಳೆದ ತಿಂಗಳು ಸುರಿದ ಧಾರಾಕಾರ ಮಳೆಯಿಂದ ಕೆಆರ್‌ಎಸ್ ಜಲಾಶಯಕ್ಕೆ ನಿರೀಕ್ಷೆಗಿಂತ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದು ಬಂದ ಹಿನ್ನೆಲೆಯಲ್ಲಿ ಜಲಾಶಯ ಭರ್ತಿಯಾಗಿ, ಜಲಾಶಯದಿಂದ ಹೆಚ್ಚಿನ ಪ್ರಮಾಣ ನೀರು ಹೊರಬಿಡಲಾಗುತ್ತಿತ್ತು. ಇದರ ಪರಿಣಾಮ ಜಲಾಶಯದ ಕೆಳಭಾಗದಲ್ಲಿರುವ ತಾಲೂಕಿನ ರಂಗನತಿಟ್ಟು ಪಕ್ಷಿ ಧಾಮದ ನಡುಗಡ್ಡೆಗಳು ಮುಳುಗಡೆಯಾಗಿ ಕಾವೇರಿ ನದಿಯೂ ಅಪಾಯ ಮಟ್ಟ ಮೀರಿ ಹರಿಯುತ್ತಿತ್ತು. ಹೀಗಾಗಿ, ರಂಗನತಿಟ್ಟು ಪಕ್ಷಿ ಧಾಮದಲ್ಲಿ ಕಳೆದ 37 ದಿನಗಳಿಂದ ದೋಣಿ ವಿಹಾರವನ್ನು ಸ್ಥಗಿತಗೊಳಿಸಲಾಗಿತ್ತು. ಜೊತೆಗೆ 25 ದಿನ ರಂಗನತಿಟ್ಟಿಗೆ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಲಾಗಿತ್ತು.

**ತಗ್ಗಿದ ಪ್ರವಾಹ:** ಕಳೆದೊಂದು ವಾರದಿಂದ ಮಳೆ ಕಡಿಮೆಯಾಗಿದ್ದು, ಜಲಾಶಯದಿಂದ ನೀರನ್ನು ಕಡಿಮೆ ಪ್ರಮಾಣದಲ್ಲಿ ಬಿಡಲಾಗುತ್ತಿದ್ದು, ಪ್ರವಾಹದ ಭೀತಿ ತಗ್ಗಿದೆ. ಇದರಿಂದ ರಂಗನತಿಟ್ಟಿನಲ್ಲಿ ಗುರುವಾರದಿಂದ ಮತ್ತೆ ದೋಣಿ ವಿಹಾರ ಆರಂಭಿಸಲಾಗಿದ್ದು, ಒಂದು ಮರ ದೋಣಿ ಹಾಗೂ 16 ಫೈಬರ್ ದೋಣಿಗಳು ನದಿಗೆ ಇಳಿದಿವೆ. ಈ ಬಾರಿ ಕೃಷ್ಣರಾಜಸಾಗರ ಅಣೆಕಟ್ಟೆಯಿಂದ ಲಕ್ಷದಷ್ಟು ಕ್ಯೂಸೆಸ್ ನೀರನ್ನು ನದಿಗೆ ಬಿಡಲಾಗಿತ್ತು,

**ನಡುಗಡ್ಡೆಗಳಿಗೆ ಹಾನಿ:** ಜಲಾಶಯ ಕೇವಲ 10 ತಿಂಗಳಲ್ಲೇ ತುಂಬಿದ ಪರಿಣಾಮ ಒಂದು ತಿಂಗಳಿಗೂ ಹೆಚ್ಚು ಕಾಲ ಕಾವೇರಿ ನದಿಗೆ ಲಕ್ಷಕ್ಕೂ ಅಧಿಕ ನೀರು ಬಿಡಲಾಗುತ್ತಿತ್ತು. ಇದರ ಪರಿಣಾಮ ಪಕ್ಷಿಧಾಮದ 25 ನಡುಗಡ್ಡೆಗಳಲ್ಲಿ 5 ನಡುಗಡ್ಡೆಗಳಿಗೆ ಭಾಗಶಃ ಹಾನಿಯಾಗಿವೆ. ಕಳೆದ 2019ರಲ್ಲಿಯೂ ಕೂಡ ಧಾರಾಕಾರ ಮಳೆಯಾಗಿದ್ದು, ಲಕ್ಷದಷ್ಟು ಕ್ಯೂಸೆಸ್ ನೀರನ್ನು ನದಿಗೆ ಬಿಟ್ಟಿದ್ದಾಗ ಹಲವು ನಡುಗಡ್ಡೆಗಳು ಭಾಗಶಃ ಹಾನಿಗೊಳಗಾಗಿದ್ದವು. ಅವುಗಳ ಮರು ನಿರ್ಮಾಣ ನಡೆಯುತ್ತಿರುವಾಗಲೇ ಈ ಬಾರಿಯೂ ಪ್ರವಾಹದಿಂದ ನಡುಗಡ್ಡೆಗಳು ಮತ್ತಷ್ಟು ಹಾನಿಯಾಗಿವೆ. ಪ್ರತಿ ವರ್ಷ ಪ್ರವಾಹ ಉಂಟಾಗುತ್ತಿರುವುದರಿಂದ ವರ್ಷದಿಂದ ವರ್ಷಕ್ಕೆ ಪಕ್ಷಿಧಾಮಕ್ಕೆ ವಲಸೆ ಬರುತ್ತಿದ್ದ ಪಕ್ಷಿಗಳ ಸಂಖ್ಯೆ ಇಳಿಮುಖವಾಗುತ್ತಿದೆ ಎಂದು ಪಕ್ಷಿಪ್ರೇಮಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

> **ಕಳೆದೊಂದು ತಿಂಗಳಿನಿಂದ ಸುರಿದ ಧಾರಾಕಾರ ಮಳೆ ಹಾಗೂ ನಿರಂತರ ಪ್ರವಾಹದಿಂದ ರಂಗನತಿಟ್ಟು ಪಕ್ಷಿಧಾಮ ಸಂಪೂರ್ಣವಾಗಿ ಜಲಾವೃತಗೊಂಡಿದ್ದ ಪರಿಣಾಮ ಧಾಮದ ಅನೇಕ ನಡುಗಡ್ಡೆಗಳಿಗೆ ಹಾನಿಯಾಗಿದೆ. ಅವುಗಳನ್ನು ಮುಂದಿನ ದಿನಗಳಲ್ಲಿ ಸರಿಪಡಿಸಲು ಕ್ರಮಕೈಗೊಳ್ಳಲಾಗುವುದು. ಅಲ್ಲದೇ ತಿಂಗಳಿನಿಂದ ಧಾಮಕ್ಕೆ ಸಾರ್ವಜನಿಕರು ಹಾಗೂ ಪ್ರವಾಸಿಗರ ನಿರ್ಬಂಧದಿಂದ ಸುಮಾರು 50ರಿಂದ 60 ಲಕ್ಷ ರೂ.ಗಳಷ್ಟು ನಷ್ಟ ಉಂಟಾಗಿದೆ.**
> **–ಸಂತೋಷ್ ಹೂಗರ್, ಆರ್‌ಎಫ್‌ಓ**

# ಶೀಘ್ರವೇ ಮಂಡ್ಯದಲ್ಲಿ ಕಂದಾಯ ಭವನ ನಿರ್ಮಾಣ



ಮಂಡ್ಯ, ಆ.18– ಎಲ್ಲಾ ಇಲಾಖೆಗಳಿಗೂ ತಾಯಿಯಂತಿರುವ ಕಂದಾಯ ಇಲಾಖಾ ನೌಕರರಿಗೂ ಕಂದಾಯ ಭವನ ಅಗತ್ಯವಿದ್ದು, ಶೀಘ್ರದಲ್ಲೇ ಕಂದಾಯ ಭವನ ನಿರ್ಮಾಣವಾಗಲಿದೆ ಎಂದು ಶಾಸಕ ಎಂ.ಶ್ರೀನಿವಾಸ್ ತಿಳಿಸಿದರು.

ನಗರದಲ್ಲಿ ಗುರುವಾರ ರಾಜ್ಯ ಸರ್ಕಾರಿ ಕಂದಾಯ ಇಲಾಖಾ ನೌಕರರ ಸಂಘದಿಂದ ಜಿಲ್ಲಾ ಕಂದಾಯ ಇಲಾಖಾ ನೌಕರರ ಸಂಘದ ಭವನ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಸರ್ಕಾರಿ ನೌಕರರ ಸಂಘದ ಭವನ ಸಹ ನಿರ್ಮಾಣದ ಪ್ರಗತಿಯಲ್ಲಿದೆ. ಅದೇ ರೀತಿ ಕಂದಾಯ ಇಲಾಖಾ ನೌಕರರ ಸಂಘದ ಭವನವೂ ಶೀಘ್ರ ನಿರ್ಮಾಣವಾಗಲಿ ಎಂದರು.

90 ಲಕ್ಷ ರೂ. ವೆಚ್ಚದಲ್ಲಿ ಭವನ ನಿರ್ಮಿಸಲು ಉದ್ದೇಶಿಸಲಾಗಿದ್ದು, ನಿಗದಿತ ಕಾಲಾವಧಿಯಲ್ಲಿ ನಿರ್ಮಿಸಿದರೆ ಹೆಚ್ಚಿನ ಅನುದಾನದ ಅಗತ್ಯವಿರುವುದಿಲ್ಲ. ಇಲ್ಲದಿದ್ದರೆ ಬೆಲೆ ಏರಿಕೆಯ ಜೊತೆಗೆ ನಿರ್ಮಾಣ ವೆಚ್ಚವೂ ಅಧಿಕವಾಗಲಿದೆ ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು ಮಾತನಾಡಿ, ಜಿಲ್ಲಾಧಿಕಾರಿಗಳು ಸಹ ಭವನ ನಿರ್ಮಾಣಕ್ಕೆ ತಮ್ಮ ಸಂಪೂರ್ಣ ಸಹಕಾರ ನೀಡುವುದಾಗಿ ಘೋಷಿಸಿದ್ದಾರೆ. ಅವರು ರಾಜ್ಯಪಾಲರ ಕಾರ್ಯಕ್ರಮವಿರುವುದರಿಂದ ಅಲ್ಲಿಗೆ ತೆರಳಿದ್ದಾರೆ. ಹಾಗಾಗಿ, ಅವರ ಪ್ರತಿನಿಧಿಯಾಗಿ ನಾನು ಈ ಕಾರ್ಯಕ್ರಮಕ್ಕೆ ಆಗಮಿಸಿದ್ದೇನೆ. ಎಲ್ಲರ ಸಹಕಾರವನ್ನೂ ಇಲಾಖೆಯಿಂದ ನೀಡಲಾಗುವುದು ಎಂದು ಭರವಸೆ ನೀಡಿದರು.

ಕಂದಾಯ ಇಲಾಖೆ ನೌಕರರ ಸಂಘದ ಜಿಲ್ಲಾಧ್ಯಕ್ಷ ಡಿ.ತಮ್ಮಣ್ಣಗೌಡ ಮಾತನಾಡಿ, 90 ಲಕ್ಷ ರೂ. ವೆಚ್ಚದ ಭವನ ನಿರ್ಮಾಣಕ್ಕೆ ಇಂದು ಭೂಮಿ ಪೂಜೆ ಮಾಡಿದ್ದೇವೆ ಜನಪ್ರತಿ ನಿಧಿಗಳ ಅನುದಾನ ಪಡೆದು ಶೀಘ್ರ ಕಟ್ಟಡ ಕಾಮಗಾರಿ ಪೂರ್ಣಗೊಳಿಸಲಾಗುವುದು. ರಾಜ್ಯದ 28 ಜಿಲ್ಲೆಗಳಲ್ಲೂ ಕಂದಾಯ ಭವನ ನಿರ್ಮಾಣವಾಗಿದೆ. ಮಂಡ್ಯ ಜಿಲ್ಲೆಯಲ್ಲಿ ಇಲ್ಲ ಎನ್ನುವ ಕೊರಗು ಇತ್ತು. ಇದೀಗ ನಿರ್ಮಾಣಕ್ಕೆ ನಾಂದಿ ಹಾಡಿದ್ದೇವೆ ಎಂದರು.

ಸಮಾರಂಭದಲ್ಲಿ ರಾಜ್ಯ ಪರಿಷತ್ ಸದಸ್ಯ ಹೆಚ್.ಮಂಜುನಾಥ್, ಖಜಾಂಚಿ ಎಸ್.ಮಹೇಶ್, ಪ್ರಧಾನ ಕಾರ್ಯದರ್ಶಿ ಎ.ಎಸ್.ಭಾಸ್ಕರ್, ಉಪಾಧ್ಯಕ್ಷೆ ಗಾಯಿತ್ರಿ, ಲಕ್ಷ್ಮೀಕಾಂತ್, ಪ್ರಕಾಶ್, ಜಗದೀಶ್, ಉಮಾದೇವಿ, ಗೌರಮ್ಮ, ಲಕ್ಷ್ಮೀ, ವಿ.ವೆಂಕಟೇಶ್, ರೂಪಾ, ಎಂ.ಸಿ.ವೆಂಕಟೇಶ್, ನೌಕರರ ಸಂಘದ ಅಧ್ಯಕ್ಷ ಶಂಭೂಗೌಡ, ನಾಗೇಶ್ ಇತರರಿದ್ದರು.

# ‘ಜಿಲ್ಲಾಧಿಕಾರಿ ನಡೆ, ಹಳ್ಳಿಗಳ ಕಡೆ’ ಕಾರ್ಯಕ್ರಮ ಸದ್ಬಳಕೆಗೆ ಸಿಎಸ್‌ಪಿ ಸಲಹೆ



> **ಕಂದಾಯ ಇಲಾಖೆ ಹಾಗೂ ಇತರೆ ಇಲಾಖೆಗಳಿಗೆ ಸಂಬಂಧಿಸಿದಂತೆ ವಿವಿಧ ಯೋಜನೆಗಳ 3 ಸಾವಿರ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿದ್ದು, ಅವರಿಗೆ ಸವಲತ್ತು ವಿತರಿಸಲಾಗುವುದು. ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಹಾಜರಿದ್ದು, ಕುಂದು ಕೊರತೆ ಅರ್ಜಿ ಸ್ವೀಕರಿಸಲು ವಿವಿಧ ಕೌಂಟರ್ ತೆರೆಯಲಾಗಿದೆ. ಸಾರ್ವಜನಿಕರು ಕಾರ್ಯಕ್ರಮದ ಸದುಪಯೋಗ ಪಡಿಸಿಕೊಳ್ಳಬೇಕು.**
> **–ಎಸ್.ಅಶ್ವತಿ, ಜಿಲ್ಲಾಧಿಕಾರಿ**

ಪಾಂಡವಪುರ, ಆ.18– ಜನಪ್ರತಿನಿಧಿಗಳು ಯೋಜನೆಗಳನ್ನು ರೂಪಿಸಬಹುದು, ಅನುದಾನವನ್ನು ಸರ್ಕಾರದಿಂದ ಬಿಡುಗಡೆ ಮಾಡಿಸಬಹುದು. ಆದರೆ, ಯೋಜನೆಯನ್ನು ಉತ್ತಮವಾಗಿ ಅನುಷ್ಠಾನಗೊಳಿಸಿ ಜನರಿಗೆ ಸೌಲಭ್ಯ ಒದಗಿಸುವವರು ಅಧಿಕಾರಿಗಳು. ಹಾಗಾಗಿ, ‘ಜಿಲ್ಲಾಧಿಕಾರಿಗಳ ನಡೆ, ಹಳ್ಳಿಗಳ ಕಡೆ’ ಕಾರ್ಯಕ್ರಮದಡಿ ಗ್ರಾಮಕ್ಕೆ ಅಧಿಕಾರಿಗಳು ಆಗಮಿಸಿ ಸವಲತ್ತು ಒದಗಿಸುತ್ತಿದ್ದಾರೆ. ಗ್ರಾಮಸ್ಥರು ಇದರ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಶಾಸಕ ಸಿ.ಎಸ್.ಪುಟ್ಟರಾಜು ಸಲಹೆ ನೀಡಿದರು.

ತಾಲೂಕಿನ ಇಂಗಲಗುಪ್ಪೆ ಗ್ರಾಮದಲ್ಲಿ ಗುರುವಾರ ನಡೆದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇಂಗಲಗುಪ್ಪೆ ಹಾಗೂ ಟಿ.ಎಸ್.ಛತ್ರ ಅವಳಿ ಗ್ರಾಮಗಳ ರೀತಿ ಇದ್ದು, ಇಲ್ಲಿಯ ಸಮಸ್ಯೆಗಳ ಬಗ್ಗೆ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿದ್ದೇನೆ ಹಾಗೂ ಸ್ವೀಕೃತವಾಗಿರುವ ಕುಂದುಕೊರತೆ ಅರ್ಜಿಗಳನ್ನು ವಿಲೇವಾರಿ ಮಾಡುವಂತೆ ತಿಳಿಸಿದ್ದೇನೆ ಎಂದರು.

ಕೋವಿಡ್ ಹಿನ್ನಲೆಯಲ್ಲಿ ಟಿ.ಎಸ್.ಛತ್ರ ಹಾಗೂ ಇದರ ಸುತ್ತಲಿನ ಕೆಲವು ರಸ್ತೆ ಕಾಮಗಾರಿಗಳು ಸ್ಥಗಿತಗೊಂಡಿತ್ತು ಈ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲಾಗಿದ್ದು, ಶೀಘ್ರದಲ್ಲೇ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು ಎಂದರು.

ಜಿಲ್ಲಾಧಿಕಾರಿ ಎಸ್.ಅಶ್ವತಿ ಮಾತನಾಡಿ, ಗ್ರಾಮಸ್ಥರು ರಸ್ತೆ ಚರಂಡಿ ನಿರ್ಮಾಣ, ಬಸ್ ಸಮಸ್ಯೆ ಸೇರಿದಂತೆ ಹಲವು ವಿಷಯಗಳ ಬಗ್ಗೆ ಚರ್ಚಿಸಿದ್ದಾರೆ. ಜಿಲ್ಲಾ ಹಂತದಲ್ಲಿ ಪರಿಹಾರವಾಗುವ ಕುಂದು– ಕೊರತೆಗಳನ್ನು ತುರ್ತಾಗಿ ಪರಿಹರಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಕೆಲವು ದೂರುಗಳನ್ನು ರಾಜ್ಯ ಮಟ್ಟಕ್ಕೆ ಕಳುಹಿಸ ಬೇಕಿದ್ದು, ಅದಕ್ಕೂ ಕ್ರಮ ವಹಿಸಲಾಗುವುದು ಎಂದರು.

ಇದೇ ಸಂದರ್ಭದಲ್ಲಿ ಕೃಷಿ ಇಲಾಖೆಯಿಂದ ಜಿಲ್ಲಾ ಮಟ್ಟದ ಕೃಷಿ ಕ್ಷೇತ್ರ ಪ್ರಶಸ್ತಿ, ಶಿಕ್ಷಣ ಇಲಾಖೆಯಿಂದ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಬಹುಮಾನ, ಫಲಾನುಭವಿಗಳಿಗೆ ನಿವೇಶನ ಹಕ್ಕುಪತ್ರ ಗರ್ಭಿಣಿಯರಿಗೆ ಸೀಮಂತ, ಆರೋಗ್ಯ ಇಲಾಖೆಯಿಂದ ಆಯುಷ್ಮಾನ್ ಆರೋಗ್ಯ ಕಾರ್ಡ್ ಸೇರಿದಂತೆ ವಿವಿಧ ಯೋಜನೆಗಳಡಿ ಫಲಾನುಭವಿಗಳಿಗೆ ಸವಲತ್ತುಗಳನ್ನು ನೀಡಲಾಯಿತು.

ಕಾರ್ಯಕ್ರಮದಲ್ಲಿ ಎಸಿ ಬಿ.ಸಿ.ಶಿವನಂದ ಮೂರ್ತಿ, ತಹಸೀಲ್ದಾರ್ ನಯನಾ, ಗ್ರಾಪಂ ಅಧ್ಯಕ್ಷೆ ಪೂಜಾ ಹಾಗೂ ಜಿಲ್ಲಾ ಮತ್ತು ತಾಲೂಕು ಅಧಿಕಾರಿಗಳು ಉಪಸ್ಥಿತರಿದ್ದರು.

## ಸ್ವಾತಂತ್ರ್ಯ ಹೋರಾಟಗಾರ ಸಿದ್ದಲಿಂಗೇಗೌಡ ನಿಧನ



ಕೆ.ಆರ್.ಪೇಟೆ, ಆ.18– ತಾಲೂಕಿನ ಅಘಾಲಯ ಗ್ರಾಮದ ನಿವಾಸಿ ಹಾಗೂ ಸ್ವಾತಂತ್ರ್ಯ ಹೋರಾಟಗಾರ ಸಿದ್ದಲಿಂಗೇಗೌಡ(95) ಗುರುವಾರ ನಿಧನರಾದರು.

ಸಿದ್ದಲಿಂಗೇಗೌಡ ಅವರು ಮೈಸೂರಿನಲ್ಲಿ ಬಿಎ ಪದವಿ ವ್ಯಾಸಂಗ ಮಾಡುತ್ತಿದ್ದಾಗ ಗಾಂಧೀಜಿ ಕರೆಗೆ ಓಗೊಟ್ಟು 1940ರಲ್ಲಿ ಮೈಸೂರಿನಲ್ಲಿ ನಡೆದ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿ 15 ದಿನ ಶ್ರೀರಂಗಪಟ್ಟಣ ಜೈಲಿನಲ್ಲಿ ಕಾರಾಗೃಹ ವಾಸ ಅನುಭವಿಸಿದರು. ನಂತರ ಮಂಗಳೂರಿನಲ್ಲಿ ಆರ್‌ಟಿಓ ಅಧಿಕಾರಿಯಾಗಿ ಸೇವೆ ಸಲ್ಲಿಸಿದರು. ಆದರೆ, ಸ್ವಾತಂತ್ರ್ಯ ಚಳವಳಿಯ ತೀವ್ರತೆ ಹೆಚ್ಚಾದ ಕಾರಣ ಸರ್ಕಾರಿ ಕೆಲಸಕ್ಕೆ ರಾಜೀನಾಮೆ ನೀಡಿ, ಯುವಕರನ್ನು ಹೋರಾಟಕ್ಕೆ ಸಂಘಟಿಸಲು ಮುಂದಾದರು. ಸ್ವಾತಂತ್ರ್ಯ ಬಂದ ನಂತರ ಪಾಂಡವಪುರ ಸಕ್ಕರೆ ಕಾರ್ಖಾನೆಯ ನೌಕರರಾಗಿ ಕೆಲಸಕ್ಕೆ ಸೇರಿ, ನಿವೃತ್ತಿಯ ನಂತರ ಅಘಾಲಯ ಗ್ರಾಮದಲ್ಲಿ ಕೃಷಿ ಚಟುವಟಿಕೆ ಜೊತೆಗೆ ಗ್ರಾಮದ ಸಾಮಾಜಿಕ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು.

ಶುಕ್ರವಾರ ಬೆಳಗ್ಗೆ 11 ಗಂಟೆಗೆ ಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

ತಹಸೀಲ್ದಾರ್ ರೂಪಾ ಮಾತನಾಡಿ, ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಆ.13ರಂದು ತಾಲೂಕು ಆಡಳಿತದ ಪರವಾಗಿ ಸಿದ್ದಲಿಂಗೇಗೌಡ ಅವರನ್ನು ಗೌರವಿಸಲಾಗಿತು. ಸ್ವಾತಂತ್ರ್ಯ ಅಮೃತ ಮಹೋತ್ಸವ ನಡೆದ ಮೂರೇ ದಿನಕ್ಕೆ ಅವರು ಇಹಲೋಕ ತ್ಯಜಿಸಿದ್ದು ನೋವಿನ ಸಂಗತಿಯಾಗಿದೆ ಎಂದು ಸಂತಾಪ ಸೂಚಿಸಿದರು.

**ಸಂತಾಪ:** ಸಚಿವರಾದ ಡಾ.ಕೆ.ಸಿ.ನಾರಾಯಣಗೌಡ, ಕೆ.ಗೋಪಾಲಯ್ಯ, ಶಾಸಕ ಸಿ.ಎನ್.ಬಾಲಕೃಷ್ಣ ಸೇರಿದಂತೆ ವಿವಿಧ ಗಣ್ಯರು ಸಂತಾಪ ಸೂಚಿಸಿದ್ದಾರೆ.

## ಬೈಕ್‌ಗಳ ನಡುವೆ ಡಿಕ್ಕಿ: ಸವಾರನಿಗೆ ಗಾಯ

ಕೆ.ಆರ್.ಪೇಟೆ, ಆ.18– ಬೈಕ್‌ಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದ ಪರಿಣಾಮ ಸವಾರ ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಐಕನಹಳ್ಳಿ ಗ್ರಾಮದಲ್ಲಿ ಗುರುವಾರ ನಡೆದಿದೆ.

ಗ್ರಾಮದ ಕೆ.ರವಿ ಗಾಯಗೊಂಡ ಸವಾರ. ಇವರನ್ನು ಚನ್ನರಾಯಪಟ್ಟಣದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಮತ್ತೊಂದು ಬೈಕ್‌ನ ಸವಾರ ಐಕನಹಳ್ಳಿ ಕೊಪ್ಪಲು ಗ್ರಾಮದ ನಾಗಣ್ಣ ಪರಾರಿಯಾಗಿದ್ದಾನೆ. ಅಪಘಾತದಿಂದ ಗಾಯಗೊಂಡಿದ್ದ ರವಿಯವರನ್ನು ಸುಮಂತ್ ಎಂಬವರು ಆಸ್ಪತ್ರೆಗೆ ದಾಖಲಿಸಿದ್ದಾರೆ. ಈ ಸಂಬಂಧ ಗಾಯಾಳು ರವಿ ಅವರ ಮಗ ಸಚಿನ್ ಕಿಕ್ಕೇರಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

## ಕಬ್ಬಿನ ಗದ್ದೆಯಲ್ಲಿ ಚಿರತೆ ಮರಿಗಳು ಪತ್ತೆ



ಮಂಡ್ಯ, ಆ.18– ತಾಲೂಕಿನ ಮೊಡ ಚಾಕನಹಳ್ಳಿ ಗ್ರಾಮದ ಕಬ್ಬು ಗದ್ದೆಯಲ್ಲಿ ಮೂರು ಚಿರತೆ ಮರಿಗಳು ಪತ್ತೆಯಾಗಿವೆ.

ಗ್ರಾಮದ ಚೇತನ್ ಅವರಿಗೆ ಸೇರಿದ ಗದ್ದೆಯಲ್ಲಿ ಕಾರ್ಮಿಕರು ಕಬ್ಬು ಕಟಾವು ಮಾಡುವಾಗ ಚಿರತೆ ಮರಿಗಳು ಪತ್ತೆಯಾಗಿದೆ. ಕೂಡಲೇ ಮಾಲೀಕ ಚೇತನ್ ಅರಣ್ಯಾಧಿಕಾರಿಗಳಿಗೆ ತಿಳಿಸಿದ್ದಾರೆ.

ವಿಷಯ ತಿಳಿದು ಸ್ಥಳಕ್ಕೆ ಬಂದ ಅರಣ್ಯ ಇಲಾಖೆ ಸಿಬ್ಬಂದಿ ಚಿರತೆ ಮರಿಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಗ್ರಾಮಸ್ಥರು ತಾಯಿ ಚಿರತೆ ಬಗ್ಗೆ ಆತಂಕಗೊಂಡಿದ್ದು, ಮರಿಗಳನ್ನು ಹುಡುಕಿಕೊಂಡು ಚಿರತೆ ಬರುವ ಸಾಧ್ಯತೆಯಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು ಚಿರತೆಯನ್ನು ಪತ್ತೆ ಹಚ್ಚಿ, ಸೆರೆ ಹಿಡಿಯಬೇಕು ಎಂದು

### ಅರುಣ್‌ಸಿಂಗ್ ನೇತೃತ್ವದಲ್ಲಿ ಬಿಜೆಪಿ ಪದಾಧಿಕಾರಿಗಳ ಸಭೆ

# ದುರ್ಬಲ ಕ್ಷೇತ್ರಗಳಲ್ಲಿ ಪಕ್ಷ ಸಂಘಟನೆ ಹೊಣೆ ಸಿಎಂ, ಕಟೀಲ್‌ಗೆ

## ರಾಜ್ಯದ 7 ಸ್ಥಳಗಳಲ್ಲಿ ಜನೋತ್ಸವ ಕಾರ್ಯಕ್ರಮ

ಬೆಂಗಳೂರು, ಆ. 18 (ಕೆಎಂಶಿ)–ಬಿಜೆಪಿ ದುರ್ಬಲವಾಗಿರುವ ನೂರು ಕ್ಷೇತ್ರಗಳಲ್ಲಿ ಪಕ್ಷವನ್ನು ಸಂಘಟಿಸಿ, ಮತದಾರರನ್ನು ಸೆಳೆಯುವ ಹೊಣೆಗಾರಿಕೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲ್ ಅವರ ಹೆಗಲಿಗೆ ಪಕ್ಷ ಹಾಕಿದೆ.

ಮುಂಬರುವ ವಿಧಾನಸಭಾ ಚುನಾವಣಾ ತಯಾರಿಕೆ ಸಂಬಂಧಿಸಿದಂತೆ ಇಂದು ನಡೆದ ಪಕ್ಷದ ಪದಾಧಿಕಾರಿಗಳ ಸಭೆಯಲ್ಲಿ ರಾಜ್ಯ ಉಸ್ತುವಾರಿ ನೋಡಿಕೊಳ್ಳುವ ಬಿಜೆಪಿಯ ಪ್ರಧಾನ ಕಾರ್ಯದರ್ಶಿ ಅರುಣ್‌ಸಿಂಗ್ ಈ ಹೊಣೆಗಾರಿಕೆ ವಹಿಸಿದ್ದಾರೆ.

ಉಭಯ ನಾಯಕರು ತಲಾ 50 ಕ್ಷೇತ್ರಗಳಲ್ಲಿ ಸಂಚರಿಸಿ, ಪಕ್ಷವನ್ನು ಸಂಘಟಿಸುವಂತೆ ಸೂಚಿಸಿದೆ. ಈ ಕಾರ್ಯ ಸೆಪ್ಟೆಂಬರ್, ಅಕ್ಟೋಬರ್ ತಿಂಗಳಲ್ಲೇ ಪೂರ್ಣಗೊಳಿಸಬೇಕು ಎಂದು ಆದೇಶ ಮಾಡಿದ್ದಾರೆ. ಬಿಜೆಪಿ ಆಡಳಿತ ಹಾಗೂ ಬಸವರಾಜ ಬೊಮ್ಮಾಯಿ ಸರ್ಕಾರಕ್ಕೆ ಒಂದು ವರ್ಷ ತುಂಬಿದ ಹಿನ್ನೆಲೆಯಲ್ಲಿ ಚಿಕ್ಕಬಳ್ಳಾಪುರದಲ್ಲಿ ನಡೆಸಲಿರುವ ಜನೋತ್ಸವ ಕಾರ್ಯಕ್ರಮವನ್ನು ರಾಜ್ಯದ ಪ್ರಮುಖ 7 ಸ್ಥಳಗಳಲ್ಲಿ ನಡೆಸಲು ತೀರ್ಮಾನಿಸಿದೆ.

ಜನೋತ್ಸವ ಕಾರ್ಯಕ್ರಮದ ಮೂಲಕವೇ ರಾಜ್ಯ ವಿಧಾನಸಭಾ ಚುನಾವಣಾ ಪ್ರಚಾರವೂ ಅಲ್ಲಿಂದಲೇ ಪ್ರಾರಂಭವಾಗಲಿ. ಈ ಕಾರ್ಯಕ್ರಮಗಳನ್ನು ಬಹಳ ಯಶಸ್ವಿಗೊಳಿಸಬೇಕು, ಪ್ರತಿಯೊಂದು ಕಾರ್ಯಕ್ರಮಕ್ಕೂ 3 ರಿಂದ 5 ಲಕ್ಷ ಕಾರ್ಯಕರ್ತರನ್ನು ಸೇರಿಸಿ, ರಾಜ್ಯ ಮತ್ತು ಕೇಂದ್ರ ಅನುಷ್ಠಾನಗೊಳಿಸಿರುವ ಕಾರ್ಯಕ್ರಮಗಳನ್ನು ಜನರ ಮುಂದಿಡಬೇಕೆಂದು ಹೇಳಿದೆ.

ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅರುಣ್‌ಸಿಂಗ್, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕನಿಷ್ಟ ನೂರಾ ನಲವತ್ತೈದು ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದು ಅಧಿಕಾರ ಹಿಡಿಯುವುದಾಗಿ ವಿಶ್ವಾಸ ವ್ಯಕ್ತಪಡಿಸಿದರು. ಪ್ರಧಾನಿ ನರೇಂದ್ರಮೋದಿ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಾಧನೆಯನ್ನು ಮುಂದಿಟ್ಟುಕೊಂಡು ಜನರ ಬಳಿ ಹೋಗುತ್ತೇವೆ.ನೂರಾ ನಲವತ್ತೈದು ಸೀಟುಗಳನ್ನು ಗಳಿಸಿ ಅಧಿಕಾರಕ್ಕೆ ಬರುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪಕ್ಷದ ಸಂಘಟನೆಯನ್ನು ಬಲಗೊಳಿಸುವ ಕುರಿತು ಗಮನ ಕೇಂದ್ರೀಕರಿಸಲಾಗಿದ್ದು ರಾಜ್ಯದ ಪ್ರತಿ ಬೂತ್‌ನಲ್ಲಿ ಕನಿಷ್ಟ ಐವತ್ತು ಮತಗಳನ್ನು ಗಳಿಸಬೇಕು ಎಂದು ಟಾರ್ಗೆಟ್ ನೀಡಲಾಗಿದೆ ಎಂದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಪಕ್ಷಾಧ್ಯಕ್ಷ ನಳೀನ್ ಕುಮಾರ್ ಕಟೀಲ್ ಅವರು ಸೆಪ್ಟೆಂಬರ್ ಮೊದಲ ವಾರದಿಂದ ಅಕ್ಟೋಬರ್ ಮಧ್ಯಭಾಗದವರೆಗೆ ರಾಜ್ಯ ಪ್ರವಾಸ ಮಾಡಲಿದ್ದು ಸರ್ಕಾರದ ಸಾಧನೆಗಳನ್ನು ಜನರಿಗೆ ವಿವರಿಸಲಿದ್ದಾರೆ ಎಂದು ಸ್ಪಷ್ಟಪಡಿಸಿದರು.

ಪಕ್ಷದಲ್ಲಿ ಇನ್ನು ಮುಂದೆ ಅಶಿಸ್ತನ್ನು ಯಾವ ಕಾರಣಕ್ಕೂ ಸಹಿಸುವುದಿಲ್ಲ ಎಂದ ಅವರು,ಪಕ್ಷ ಮತ್ತು ಸರ್ಕಾರಕ್ಕೆ ಘಾಸಿಯುಂಟು ಮಾಡುವಂತೆ ಯಾರಾದರೂ ಹೇಳಿಕೆ ನೀಡಿದರೆ ಅಂತವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವುದಾಗಿ ಇದೇ ಸಂದರ್ಭದಲ್ಲಿ ಅವರು ಹೇಳಿದರು.

ಪದಾಧಿಕಾರಿಗಳು ತಮಗೆ ಸೂಚಿಸಿದ ಪ್ರದೇಶಗಳಲ್ಲಿ ಪ್ರವಾಸ ಮಾಡಬೇಕು.ಸಂಘಟನೆಯನ್ನು ಬಲಪಡಿಸಲು ದುಡಿಯಬೇಕು ಎಂದು ಸೂಚಿಸಲಾಗಿದೆ ಎಂದರು.

ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಬಿಜೆಪಿ ಸಂಸದೀಯ ಮಂಡಳಿಗೆ ನೇಮಕಗೊಂಡಿರುವುದಕ್ಕೆ ಹರ್ಷ ವ್ಯಕ್ತಪಡಿಸಿದ ಅವರು,ಯಡಿಯೂರಪ್ಪ ಅವರು ಪಕ್ಷದ ಪರಮೋಚ್ಚ ಸಮಿತಿಗೆ ನೇಮಕಗೊಂಡಿರುವುದರಿಂದ ದಕ್ಷಿಣ ಭಾರತದಲ್ಲಿ ನಮಗೆ ಆನೆ ಬಲ ಬಂದಂತಾಗಿದೆ ಎಂದು ಹೇಳಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲಿ ಬಿಜೆಪಿ ಸರ್ಕಾರ ಅತ್ಯುತ್ತಮವಾಗಿ ಕೆಲಸ ಮಾಡುತ್ತಿದೆ.ಇದು ಜನರಿಗೂ ಗೊತ್ತಿದೆ.ಹೀಗಾಗಿ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಅವರು ನಮಗೇ ಆಶೀರ್ವಾದ ಮಾಡಲಿದ್ದಾರೆ ಎಂದು ನುಡಿದರು.

## ಸಿದ್ದರಾಮಯ್ಯ ಯಾಕೆ ಹೋಗಬೇಕಿತ್ತು?: ಎಸ್‌ಟಿಎಸ್

ಮೈಸೂರು, ಆ.18(ಆರ್‌ಕೆ)–ಪರಿಹಾರ ಕೊಟ್ಟ ಮೇಲೆ ಈಗ ಏಕೆ ನೆರೆ ಹಾವಳಿ ಸ್ಥಳಕ್ಕೆ ಹೋಗಬೇಕಿತ್ತು? ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಪ್ರಶ್ನಿಸಿದ್ದಾರೆ. ಮೈಸೂರಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಸಚಿವರು, ಸಿದ್ದರಾಮಯ್ಯ ಈಗ ಪುರುಸೊತ್ತಾಗಿದ್ದಾರೆ. ಕಳೆದ 15 ದಿನಗಳಿಂದ ನೆರೆ ಹಾವಳಿ ವೀಕ್ಷಣೆಗೆ ಹೋಗಿರಲಿಲ್ಲ. ಸರ್ಕಾರಿ ಕಾರು ಸೇರಿದಂತೆ ಇತರ ಎಲ್ಲಾ ಸೌಲಭ್ಯಗಳಿದ್ದವು. ನೆರೆ ಹಾವಳಿ ಸ್ಥಳಗಳಿಗೆ ಮೊದಲು ಭೇಟಿ ನೀಡಿ ಪರಿಶೀಲಿಸಿ ಸರ್ಕಾರದ ಗಮನ ಸೆಳೆಯಬಹುದಿತ್ತು. ಈಗ ನಾವು ಎಲ್ಲಾ ರೀತಿಯ ಪರಿಹಾರೋಪಾಯ ಕ್ರಮ ಕೈಗೊಂಡ ಮೇಲೆ ಸಿದ್ದರಾಮಯ್ಯ ಈಗ ಯಾಕೆ ಕೊಡಗು ಜಿಲ್ಲೆಗೆ ಹೋಗಿದ್ದಾರೋ ಗೊತ್ತಿಲ್ಲ ಎಂದು ಲೇವಡಿ ಮಾಡಿದರು. ಮುಸ್ಲಿಂ ಏರಿಯಾ ಕುರಿತಂತೆ ಸಿದ್ದರಾಮಯ್ಯ ವಿವಾದಾತ್ಮಕ ಹೇಳಿಕೆ ನೀಡುತ್ತಿದ್ದಾರೆ. ಮುಖ್ಯಮಂತ್ರಿಯಾಗಿದ್ದಾಗ ಅವರ ಮಾತಿಗೆ ತೂಕ ಇತ್ತು. ಈಗ ಅವರು ಏನ್ ಮಾತಾಡ್ತಾರೋ ಅವರಿಗೇ ಗೊತ್ತಾಗುತ್ತಿಲ್ಲ. ವಿವಾದಾತ್ಮಕ ಹೇಳಿಕೆ ನೀಡಿ ಗೊಂದಲ ಸೃಷ್ಟಿ ಮಾಡದಿರಲಿ ಎಂದು ನಾನು ತಾಯಿ ಚಾಮುಂಡೇಶ್ವರಿಯಲ್ಲಿ ಪ್ರಾರ್ಥಿಸುತ್ತೇನೆ ಎಂದು ಸೋಮಶೇಖರ್ ತಿಳಿಸಿದರು.



ಬಿಜೆಪಿ ಕೇಂದ್ರಿಯ ಸಂಸದೀಯ ಮಂಡಳಿ ಹಾಗೂ ಚುನಾವಣಾ ಸಮಿತಿ ಸದಸ್ಯರಾಗಿ ನೇಮಕಗೊಂಡ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಕರ್ನಾಟಕ ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಕರ್ನಾಟಕ ವಿದ್ಯುಚ್ಛಕ್ತಿ ನಿಗಮದ ಮಾಜಿ ಅಧ್ಯಕ್ಷ ತಮ್ಮೇಶ್‌ಗೌಡ ಅಭಿನಂದಿಸಿದರು

ಒಂದನೇ ಪುಟದಿಂದ

## ಅದ್ದೂರಿ ದಸರಾ ಯಶಸ್ವಿಗೆ ಶ್ರಮಿಸಿ

ಸಾಂಸ್ಕೃತಿಕ ರಸದೌತಣ ನೀಡಬೇಕು. ಆ ಮೂಲಕ ಪ್ರವಾಸೋದ್ಯಮದ ಅಭಿವೃದ್ಧಿಯಾಗುವುದರಿಂದ ಸರ್ವ ರೀತಿಯಲ್ಲಿ ಸಿದ್ಧತೆ ಮಾಡಿಕೊಂಡು ಶಿಷ್ಟಾಚಾರ ಉಲ್ಲಂಘನೆಯಾಗದಂತೆ ಎಚ್ಚರ ವಹಿಸಿ ದಸರಾ ಮಹೋತ್ಸವ ಯಶಸ್ವಿಯಾಗಲು ಹಗಲಿರುಳು ಶ್ರಮಿಸುವಂತೆಯೂ ಜಿಲ್ಲಾ ಉಸ್ತುವಾರಿ ಸಚಿವರು ಇದೇ ಸಂದರ್ಭ ಅಧಿಕಾರಿಗಳಿಗೆ ತಾಕೀತು ಮಾಡಿದರು. ದಸರಾ ಉದ್ಘಾಟನೆಗೆ ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಸುವ್ಯವಸ್ಥಿತವಾಗಿ ಕಾರ್ಯಕ್ರಮ ಆಯೋಜಿಸಿ, ವಿಜಯ ದಶಮಿ ಮೆರವಣಿಗೆ, ಪಂಜಿನ ಕವಾಯತು ಪ್ರದರ್ಶನ ಸ್ಥಳದಲ್ಲಿ ಅಗತ್ಯ ಸೌಲಭ್ಯ ಕಲ್ಪಿಸುವ ಜೊತೆಗೆ ಲಕ್ಷಾಂತರ ಮಂದಿ ಸೇರುವುದರಿಂದ ಭಾರೀ ಪೊಲೀಸ್ ಭದ್ರತೆಗೆ ಯೋಜನೆ ರೂಪಿಸಿ ಯಾವುದೇ ಅಹಿತಕರ ಘಟನೆಗೆ ಅವಕಾಶ ನೀಡದಂತೆ ಎಚ್ಚರ ವಹಿಸುವಂತೆ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದರು. ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್, ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಬಿ.ಎಸ್.ಮಂಜುನಾಥಸ್ವಾಮಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ, ಮೈಸೂರು ನಗರ ಪೊಲೀಸ್ ಕಮೀಷನರ್ ಡಾ.ಚಂದ್ರಗುಪ್ತ, ಎಸ್ಪಿ ಆರ್.ಚೇತನ್, ಮುಡಾ ಕಮಿಷ್ನರ್ ಜಿ.ಟಿ.ದಿನೇಶ್ ಕುಮಾರ್, ಪಾಲಿಕೆ ಕಮಿಷ್ನರ್ ಜಿ.ಲಕ್ಷ್ಮೀಕಾಂತ ರೆಡ್ಡಿ, ಮುಡಾ ಕಾರ್ಯದರ್ಶಿ ವೆಂಕಟರಾಜು, ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಬಸವರಾಜು ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

## ರಾಜ್ಯದಲ್ಲಿ ತಿಂಗಳಾಂತ್ಯಕ್ಕೆ ಮಳೆ ಅಬ್ಬರ

ಎದುರಾಗಬಹುದೆಂದು ಸರ್ಕಾರಕ್ಕೆ ಸೂಚನೆ ನೀಡಿದೆ. ಉಳಿದಡೆ 100 ರಿಂದ 150 ಮಿಲಿಮೀಟರ್ ಮಳೆ ಬೀಳಲಿದೆ. ಕರಾವಳಿ ಭಾಗದ ಜಿಲ್ಲೆಗಳಲ್ಲಿ 150 ಮಿಲಿಮೀಟರ್ ಮತ್ತು ಶಿವಮೊಗ್ಗ,ಚಿಕ್ಕಮಗಳೂರು ಭಾಗದಲ್ಲಿ 100 ಮಿಲಿಮೀಟರ್,ಗುಲ್ಬರ್ಗ ಸೇರಿದಂತೆ ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ 100 ಮಿಲಿಮೀಟರ್ ಗಿಂತ ಹೆಚ್ಚಿನ ಮಳೆಯಾಗಲಿದೆ. ಮೇ ಮತ್ತು ಜುಲೈ ತಿಂಗಳಲ್ಲಿ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಸುರಿದ ವ್ಯಾಪಕ ಮಳೆಯಿಂದ ಸದ್ಯಕ್ಕೆ ಬಿಡುವು ಸಿಕ್ಕಿದ್ದು ಬಹುತೇಕ ಜಿಲ್ಲೆಗಳಲ್ಲಿ ಕೊಂಚ ಮೋಡ ಮತ್ತು ಬಿಸಿಲಿನ ವಾತಾವರಣ ಇದೆ. ಆದರೆ ಆಗಸ್ಟ್ 21 ರ ವೇಳೆಗೆ ಮೋಡ ಕವಿದ ವಾತಾವರಣ ಶುರುವಾಗಲಿದ್ದು ಸಾಧಾರಣ ಮಳೆ ಶುರುವಾಗಲಿದೆ. ಇದು ಆಗಸ್ಟ್ 26 ರ ವೇಳೆಗೆ ಗಂಭೀರ ಸ್ವರೂಪ ಪಡೆಯಲಿದ್ದು 29 ರವರೆಗೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಭಾರೀ ಮಳೆಯಾಗಲಿದೆ. ಮಳೆಯ ಮಾರುತಗಳು ಸಧ್ಯಕ್ಕೆ ಆಂಧ್ರ,ಒರಿಸ್ಸಾ ಭಾಗದಲ್ಲಿದ್ದು ಶ್ರೀಲಂಕಾದ ಮೇಲೆ ದಟ್ಟವಾಗಿ ಕವಿದಿವೆ. ಹವಾಮಾನ ಕುಸಿತದಿಂದ ಅಲ್ಲೆಲ್ಲ ವ್ಯಾಪಕ ಮಳೆಯಾಗುತ್ತಿದ್ದು ಆಗಸ್ಟ್ ಕೊನೆಯ ವಾರ ಕರ್ನಾಟಕದಲ್ಲಿ ಮಳೆಯ ರುದ್ರನರ್ತನ ನಡೆಯಲಿದೆ. ಈಗಾಗಲೇ ರಾಜ್ಯದಲ್ಲಿ ಸುರಿದ ಮಳೆಯಿಂದ ಅಪಾರ ಪ್ರಮಾಣದ ಆಸ್ತಿ–ಪಾಸ್ತಿ,ಬೆಳೆ ಮತ್ತು ಪ್ರಾಣ ಹಾನಿಯಾಗಿದ್ದು ಸುಮಾರು 5000 ಕೋಟಿ ರೂಗಳಷ್ಟು ನಷ್ಟವಾಗಿದೆ ಎಂಬ ಮಾಹಿತಿ ಸರ್ಕಾರಕ್ಕೆ ಲಭ್ಯವಾಗಿದೆ.

### ‘ಮಹಾರಾಜ ಟ್ರೋಫಿ’ ಕೆಎಸ್‌ಸಿಎ ಟಿ20 ಪಂದ್ಯಾವಳಿ

# ಮೈಸೂರು ವಾರಿಯರ್ಸ್‌ಗೆ 2 ರನ್‌ಗಳ ರೋಚಕ ಜಯ

ಬೆಂಗಳೂರು, ಆ.18– ಪವನ್ ದೇಶಪಾಂಡೆ ಜವಾಬ್ದಾರಿಯುವ ಬ್ಯಾಟಿಂಗ್ ಹಾಗೂ ವಿದ್ಯಾಧರ ಪಾಟೀಲ ಅವರ ಮಾರಕ ಬೌಲಿಂಗ್ ನೆರವಿನಿಂದ ಮೈಸೂರು ವಾರಿಯರ್ಸ್, ಹುಬ್ಬಳ್ಳಿ ಟೈಗರ್ಸ್ ವಿರುದ್ಧ 2 ರನ್‌ಗಳ ರೋಚಕ ಜಯ ಗಳಿಸಿದೆ.

ಇಲ್ಲಿನ ಎಂ.ಚಿನ್ನಸ್ವಾಮಿ ಮೈದಾನದಲ್ಲಿ ಸಂಜೆ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮೈಸೂರು ವಾರಿಯರ್ಸ್‌ಗೆ ಆರಂಭದಲ್ಲಿಯೇ ಹುಬ್ಬಳ್ಳಿ ಟೈಗರ್ಸ್ ತಂಡದ ವಿ.ಕೌಶಿಕ್ ಆಘಾತ ನೀಡಿದರು. ಕರಾರುವಾಕ್ಕಾದ ಬೌಲಿಂಗ್ ಮೂಲಕ ಅನುಭವಿ ಕರುಣ್‌ನಾಯರ್(0), ನಿಹಾಲ್ ಉಳ್ಳಾಲ್(2), ಎನ್ ಭಿಲ್ಲೆ(0) ಅವರ ವಿಕೆಟ್ ಕಬಳಿಸಿ ವಾರಿಯರ್ಸ್ ಪಾಳಯದಲ್ಲಿ ಆತಂಕ ಸೃಷ್ಟಿಸಿದರು.



ಆದರೆ, ನಂತರ ಶುಭಾಂಗ್ ಹೆಗ್ಡೆ(22) ಜೊತೆ ಸೇರಿ ಜವಾಬ್ದಾರಿಯುತ ಬ್ಯಾಟಿಂಗ್ ಪ್ರದರ್ಶನ ನೀಡಿದ ಪವನ್ ದೇಶಪಾಂಡೆ 51 ಎಸೆತಗಳಲ್ಲಿ 8 ಬೌಂಡರಿ ಸಹಿತ 57 ರನ್‌ಗಳ ಅಮೂಲ್ಯ ಕಾಣಿಕೆ ನೀಡಿದರು. ಅಂತಿಮವಾಗಿ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 145 ರನ್‌ಗಳ ಸವಾಲಿನ ಗುರಿ ನೀಡಲು ಸಾಧ್ಯವಾಯಿತು.

146 ರನ್‌ಗಳ ಗುರಿ ಪಡೆದ ಹುಬ್ಬಳ್ಳಿ ಟೈಗರ್ಸ್‌ಗೆ ಮೈಸೂರು ವಾರಿಯರ್ಸ್ ತಂಡದ ವಿದ್ಯಾಧರ ಪಾಟೀಲ್ ಅಕ್ಷರಶಃ ಕಾಡಿದರು. ಮೊಹಮ್ಮದ್ ತಾಹಾ(5), ಎಂಜಿ ನವೀನ್(2), ಸ್ವಪ್ನಿಲ್ ಯೆಲವೆ(0) ಅವರ ವಿಕೆಟ್ ಪಡೆಯುವ ಮೂಲಕ ಕಾಡಿದರು. ವಿದ್ಯಾಧರ ಪಾಟೀಲ್ 4 ಓವರ್‌ಗಳಲ್ಲಿ 24 ರನ್ ನೀಡಿ ಪ್ರಮುಖ 4 ವಿಕೆಟ್ ಪಡೆದರೆ, ಆದಿತ್ಯ ಗೊಯಲ್ ಹಾಗೂ ಶ್ರೇಯಸ್ ಗೋಪಾಲ್ ತಲಾ 2 ವಿಕೆಟ್ ಪಡೆದರು. ಹುಬ್ಬಳ್ಳಿ ಟೈಗರ್ಸ್ ಪರ ಶರಣ್ ಗೌಡ 31, ಅಭಿಮನ್ಯು ಮಿಥುನ್ 27, ಲವ್ನಿತ್ ಸಿಸೋಡಿಯಾ 22, ಶ್ರೀನಿವಾಸ್ ಶರತ್ 21 ರನ್ ಗಳಿಸಿದರು. ಕಡೆಯ ಓವರ್‌ನಲ್ಲಿ ಶರಣ್‌ಗೌಡ ಹಾಗೂ ಆನಂದ ದೊಡ್ಡಮನಿ ಹೋರಾಟ ನಡೆಸಿದರಾದೂ ತಂಡವನ್ನು ಗೆಲ್ಲಿಸಲು ಸಾಧ್ಯವಾಗಲಿಲ್ಲ ಅಂತಿಮವಾಗಿ ಹುಬ್ಬಳ್ಳಿ ಟೈಗರ್ಸ್ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 143 ರನ್ ಗಳಿಸಷ್ಟೇ ಸಾಧ್ಯವಾಯಿತು. ಮಾರಕ ಬೌಲಿಂಗ್ ದಾಳಿ ನಡೆಸಿದ ವಿದ್ಯಾಧರ ಪಾಟೀಲ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

> **ಇಂದಿನ ಪಂದ್ಯಗಳು**
> **ಸಮಯ ಮಧ್ಯಾಹ್ನ 3ಕ್ಕೆ**
> ಶಿವಮೊಗ್ಗ ಸ್ಟ್ರೈಕರ್ಸ್ / ಹುಬ್ಬಳ್ಳಿ ಟೈಗರ್ಸ್
> **ಸಮಯ ಸಂಜೆ 7ಕ್ಕೆ**
> ಮಂಗಳೂರು ಯುನೈಟೆಡ್ / ಗುಲ್ಬರ್ಗ ಮೈಸ್ಟಿಕ್ಸ್

### ಗುಲ್ಬರ್ಗ ಮೈಸ್ಟಿಕ್ಸ್‌ಗೆ ಗೆಲುವು...

ದೇವದತ್ತ ಪಡಿಕ್ಕಲ್ ಅವರ ಅಜೇಯ ಆಕರ್ಷಕ ಅರ್ಧ ಶತಕ ಹಾಗೂ ವಿದ್ವತ್ ಕಾವೇರಪ್ಪ ಮತ್ತು ಮನೋಜ್ ಅವರ ಆಕರ್ಷಕ ಬೌಲಿಂಗ್ ನೆರವಿನಿಂದ ಗುಲ್ಬರ್ಗ ಮೈಸ್ಟಿಕ್ಸ್ ತಂಡ ಬೆಂಗಳೂರು ಬ್ಲಾಸ್ಟರ್ಸ್ ವಿರುದ್ಧ 6 ವಿಕೆಟ್ ಜಯ ಗಳಿಸಿದೆ.



145 ರನ್‌ಗಳ ಗುರಿ ಬೆನ್ನತ್ತಿದ ಗುಲ್ಬರ್ಗ ಮೈಸ್ಟಿಕ್ಸ್ ತಂಡ ದೇವದತ್ತ ಪಡಿಕ್ಕಲ್ ಅವರ ಅಜೇಯ 78 ರನ್ (61 ಎಸೆತ, 7 ಬೌಂಡರಿ 4 ಸಿಕ್ಸರ್) ನೆರವಿನಿಂದ ಇನ್ನೂ 15 ಎಸೆತ ಬಾಕಿ ಇರುವಾಗಲೇ ಗುರಿ ತಲುಪಿತು. ಬೆಂಗಳೂರು ಪರ ಜಗದೀಶ ಸುಚಿತ್ ಹಾಗೂ ರೋನಿತ್ ಮೋರೆ ತಲಾ 1 ವಿಕೆಟ್ ಗಳಿಸಿದರು.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಬೆಂಗಳೂರು ಬ್ಲಾಸ್ಟರ್ಸ್ ತಂಡ ಗುಲ್ಬರ್ಗ ಮೈಸ್ಟಿಕ್ಸ್‌ನ ವಿದ್ವತ್ ಕಾವೇರಪ್ಪ (31ಕ್ಕೆ 3) ಹಾಗೂ ಮನೋಜ್ ಭಾಂಡಗೆ (23ಕ್ಕೆ3) ಅವರ ಬೌಲಿಂಗ್ ದಾಳಿಗೆ ತತ್ತರಿಸಿತು. ನಾಯಕ ಮಯಾಂಕ್ ಆಗರ್ವಾಲ್(28), ಕೆ.ವಿ.ಅನೀಶ್(20), ಶಿವಕುಮಾರ್ ರಕ್ಷಿತ್(16), ಕ್ರಾಂತಿ ಕುಮಾರ್(17), ಜಗದೀಶ ಸುಚಿತ್(17) ಸೇರಿದಂತೆ ಬೆಂಗಳೂರಿನ ಬ್ಲಾಸ್ಟರ್ಸ್‌ನ ಬ್ಯಾಟ್ಸ್‌ಮನ್‌ಗಳು ಅಲ್ಪ ಮೊತ್ತಕ್ಕೆ ಪೆವಿಲಿಯನ್ ಹಾದಿ ಹಿಡಿದರು. ಅಂತಿಮವಾಗಿ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 144 ರನ್ ಗಳಿಸಷ್ಟೇ ಸಾಧ್ಯವಾಯಿತು. ಅಜೇಯ ಅರ್ಧ ಶತಕ ದಾಖಲಿಸಿದ ದೇವದತ್ತ ಪಡಿಕ್ಕಲ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಮೈಸೂರು ಮಿತ್ರ ಶುಕ್ರವಾರ 19 ಆಗಸ್ಟ್ 2022

# ಕೊಡಗಿನ ಮಳೆ ಹಾನಿ ಪ್ರದೇಶಗಳಿಗೆ ಮಾಜಿ ಸಿಎಂ ಸಿದ್ದರಾಮಯ್ಯ ಭೇಟಿ

## ಸ್ಥಳೀಯರಿಂದ ಮಾಹಿತಿ ಸಂಗ್ರಹ, ಸರ್ಕಾರದ ವಿರುದ್ಧ ಅಸಮಾಧಾನ

ಮಡಿಕೇರಿ,ಆ.18– ಮಾಜಿ ಮುಖ್ಯಮಂತ್ರಿ, ವಿಪಕ್ಷ ನಾಯಕ ಸಿದ್ದರಾಮಯ್ಯ ಅವರು ಕೊಡಗು ಜಿಲ್ಲೆಗೆ ಭೇಟಿ ನೀಡಿ ಮಳೆಹಾನಿ ಪ್ರದೇಶಗಳನ್ನು ವೀಕ್ಷಿಸಿದರು. ಮಡಿಕೇರಿ ತಾಲೂಕಿನ 2ನೇ ಮೊಣ್ಣಂಗೇರಿಯ ರಾಮ ಕೊಲ್ಲಿ, ದೇವರಕೊಲ್ಲಿ ಹೆದ್ದಾರಿ ಹಾನಿ, ಕೊಯ ನಾಡು ಕಿಂಡಿ ಅಣೆಕಟ್ಟು, ಕರ್ತೋಜೆ ಭೂ ಕುಸಿತ ಪ್ರದೇಶಗಳನ್ನು ವೀಕ್ಷಿಸಿ ಸ್ಥಳೀಯ ರಿಂದ ಮಾಹಿತಿ ಪಡೆದರು.



ಜಿಲ್ಲಾಡಳಿತ ಭವನ ತಡೆಗೋಡೆ ಕಾಮ ಗಾರಿಯನ್ನು ಇದೇ ಸಂದರ್ಭದಲ್ಲಿ ವೀಕ್ಷಿಸಿ ಕಾಮಗಾರಿಯ ಗುಣಮಟ್ಟ ಹಾಗೂ ಮಳೆ ಹಾನಿ ಸಂತ್ರಸ್ತರಿಗೆ ಸೂಕ್ತ ಪರಿಹಾರ ನೀಡದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಮಡಿಕೇರಿ ಸುದರ್ಶನ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿಪಕ್ಷ ನಾಯಕ ಸಿದ್ದರಾಮಯ್ಯ, ಸೋಲಿನ ಹತಾಶೆ ಯಿಂದ ಬಿಜೆಪಿ ರಾಜ್ಯದಲ್ಲಿ ಕೋಮುವಾದಿ ರಾಜಕೀಯ ಮಾಡುತ್ತಿದೆ. ಈ ಯತ್ನಗಳೆಲ್ಲಾ ವಿಫಲವಾಗಿ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ರಾಜ್ಯದಲ್ಲಿ ಅಧಿಕಾರಕ್ಕೇರಲಿದೆ ಎಂದರು.

ಕರ್ನಾಟಕದಲ್ಲಿ ಉತ್ತಮ ಆಡಳಿತ ನೀಡುವಲ್ಲಿ ಬಿಜೆಪಿ ಸರ್ಕಾರ ಸಂಪೂರ್ಣ ವಿಫಲವಾ ಗಿದೆ ಆಡಳಿತ ಸಂಪೂರ್ಣ ನಿಷ್ಕ್ರಿಯವಾಗಿದೆ. ಚುನಾವಣೆ ಸಂಬಂಧಿತ ಎಲ್ಲಾ ಪೂರ್ವ ಸಮೀಕ್ಷೆಗಳೂ ಕಾಂಗ್ರೆಸ್ ಪರವಾಗಿದೆ. ಹೀಗಾಗಿ ಹತಾಶೆಗೊಳಗಾಗಿರುವ ಬಿಜೆಪಿ ಇದೀಗ ರಾಜ್ಯವ್ಯಾಪಿ ಕೋಮುಭಾವನೆ ಕೆರಳಿಸಿ ಜನರ ಗಮನ ಬೇರೆಡೆ ಸೆಳೆಯಲು ಮುಂದಾಗಿದೆ ಎಂದು ಟೀಕಿಸಿದರು.

ಕೊಡಗು ಜಿಲ್ಲೆಯಲ್ಲಿ 2018 ಮತ್ತು 2019 ರಲ್ಲಿ ಸಂಭವಿಸಿದ ಭೂಕುಸಿತದ ಸಂತ್ರಸ್ಥರಿಗೆ ಇನ್ನೂ ಸೂಕ್ತ ಪರಿಹಾರ ನೀಡಲಾಗಿಲ್ಲ. ಈ ವರ್ಷ ಸಂಭವಿಸಿದ ಮಳೆ ಹಾನಿಯ ಪರಿಹಾರ ವನ್ನೂ ಶೀಘ್ರವಾಗಿ ವಿತರಿಸಲಾಗಿಲ್ಲ ಎಂದು ಆರೋಪಿಸಿದರಲ್ಲದೇ, ಕೊಡಗಿನಲ್ಲಿ ಪದೇ ಪದೇ ಸಂಭವಿಸುತ್ತಿರುವ ಪ್ರಾಕೃತಿಕ ವಿಕೋಪಕ್ಕೆ ನಿಖರವಾದ ಕಾರಣ ತಿಳಿದುಕೊಂಡು ಮುಂಜಾ ಗ್ರತಾ ಕ್ರಮ ಕೈಗೊಳ್ಳಲೂ ಸರ್ಕಾರಕ್ಕೆ ಆಸಕ್ತಿಯಿಲ್ಲ ಎಂದು ಅವರು ಟೀಕಿಸಿದರು. ಪ್ರಾಕೃತಿಕ ವಿಕೋಪ ಸಂಬಂಧಿತ ಕೊಡಗನ್ನು ನಿರ್ಲಕ್ಷಿಸಿರುವ ಬಗ್ಗೆ ತಾನು ಮುಂಬರುವ ವಿಧಾನಸಭಾ ಅಧಿವೇಶನದಲ್ಲಿ ಪ್ರಸ್ತಾಪಿಸು ವುದಾಗಿಯೂ ಸಿದ್ದರಾಮಯ್ಯ ಹೇಳಿದರು.

ಮುಂದಿನ ಚುನಾವಣೆಯಲ್ಲಿ ತಾನು ಸ್ಪರ್ಧಿ ಸುವುದು ಶತಸಿದ್ಧ. ಮುಂದಿನ ಮುಖ್ಯಮಂತ್ರಿ ಯಾರಾಗಬೇಕೆಂಬುದು ಕಾಂಗ್ರೆಸ್ ಹೈಕಮಾಂ ಡ್‌ಗೆ ಬಿಟ್ಟ ವಿಚಾರ ಎಂದು ಸಿದ್ದರಾಮಯ್ಯ ಈ ಸಂದರ್ಭದಲ್ಲಿ ಪ್ರತಿಕ್ರಿಯಿಸಿದರು.

ಯಡಿಯೂರಪ್ಪ ಅವರನ್ನು ಬಿಜೆಪಿ ಸಂಸ ದೀಯ ಮಂಡಳಿ ಸದಸ್ಯರನ್ನಾಗಿ ನೇಮಕ ಮಾಡಿರುವ ಕುರಿತು ಪ್ರತಿಕ್ರಿಯಿಸಿದ ಸಿದ್ದರಾ ಮಯ್ಯ, ಮುಖ್ಯಮಂತ್ರಿ ಸ್ಥಾನದಿಂದ ತೆಗೆದು ಹಾಕಿದ್ದಕ್ಕಾಗಿ ಗೋಳೋ ಎಂದು ಕಣ್ಣೀರು ಸುರಿಸುತ್ತಿದ್ದ ಯಡಿಯೂರಪ್ಪ ಅವರಿಗೆ ಸ್ಥಾನ ನೀಡುವ ಮೂಲಕ ಅವರ ಮಗ ವಿಜಯೇಂದ್ರನನ್ನು ನಾಯಕನ್ನಾಗಿಸಲು ಬಿಜೆಪಿ ಹೈಕಮಾಂಡ್ ಮುಂದಾಗಿದೆ. ಯಡಿಯೂರಪ್ಪ ಅವರನ್ನು ಮತ್ತೆ ಮುಖ್ಯಮಂತ್ರಿ ಮಾಡುವುದು ಬಿಜೆಪಿ ಹೈಕಮಾಂಡ್‌ಗೆ ಬೇಕಾಗಿಲ್ಲ ಎಂದೂ ಲೇವಡಿ ಮಾಡಿದರು.

ಗಣೇಶೋತ್ಸವದಲ್ಲಿ ಸಾವರ್ಕರ್ ಚಿತ್ರಹಾಕುವ ಹಿಂದೂ ಸಂಘಟನೆಗಳ ಕರೆ ಬಗ್ಗೆ ಪ್ರತಿಕ್ರಿಯಿ ಸಿದ ಸಿದ್ದರಾಮಯ್ಯ, ಕಾಂಗ್ರೆಸ್ ಸದಾ ಜಾತ್ಯತೀತ ನಿಲುವನ್ನು ಪ್ರತಿಪಾದಿಸಿದರೆ ಬಿಜೆಪಿ, ಹಿಂದೂ ಸಂಘಟನೆಗಳು ಕೋಮುವಾದಿತನ ಪ್ರದರ್ಶಿಸುತ್ತಾ ಬಂದಿದೆ. ಗೋಡ್ಸೆ ಪೂಜೆ ಮಾಡುವವರಿಂದ ಎಂತಹ ನಿಲುವು ಬಯಸಲು ಸಾಧ್ಯ ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಮುಖಂಡರಾದ ಎಂ.ಸಿ.ನಾಣಯ್ಯ, ವೀಣಾ ಅಚ್ಚಯ್ಯ, ಬಿ.ಎ.ಜೀವಿಜಯ, ಚಂದ್ರ ಮೌಳಿ, ಎ.ಎಸ್.ಪೊನ್ನಣ್ಣ, ಡಾ.ಮಂಥರ್ ಗೌಡ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜ ಉತ್ತಪ್ಪ, ಮಾಜಿ ಅಧ್ಯಕ್ಷ ಕೆ.ಕೆ.ಮಂಜುನಾಥ್ ಕುಮಾರ್ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

# ಪ್ರತಿಭಟನೆ ನಡುವೆ ಸಿದ್ದರಾಮಯ್ಯನವರಿಗೆ ಕಾಂಗ್ರೆಸ್ ಕಾರ್ಯಕರ್ತರ ಅದ್ದೂರಿ ಸ್ವಾಗತ



ಸೋಮವಾರಪೇಟೆ, ಆ.18–ಕೊಡಗಿಗೆ ಆಗಮಿಸಿದ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರಿಗೆ ಬಿಜೆಪಿ ಕಾರ್ಯಕರ್ತರು ಮಡಿಕೇರಿ, ತಿತಿಮತಿ ಮತ್ತು ಗುಡ್ಡೆಹೊಸೂರಲ್ಲಿ ಘೇರಾವ್ ಹಾಕಿ, ಕಪ್ಪು ಬಾವುಟ ಪ್ರದರ್ಶಿಸಿ, ಕಾರಿಗೆ ಮೊಟ್ಟೆ ಎಸೆದರೆ, ಸೋಮವಾರಪೇಟೆಯಲ್ಲಿ ಹೂಮಳೆ ಸುರಿದು ಕಾಂಗ್ರೆಸ್ ಕಾರ್ಯ ಕರ್ತರು ಸಿದ್ದರಾಮಯ್ಯ ಅವರಿಗೆ ಅದ್ದೂರಿ ಸ್ವಾಗತ ನೀಡಿದರು.

ಸೋಮವಾರಪೇಟೆ ಕಾಂಗ್ರೆಸ್ ಕಚೇರಿ ಬಳಿ ಸಿದ್ದರಾಮಯ್ಯ ಅವರ ಕಾರು ಆಗಮಿಸುತ್ತಿ ದ್ದಂತೆಯೇ ನೆರೆದಿದ್ದ ಕಾರ್ಯಕರ್ತರು ಹೂಮಳೆ ಸುರಿದರು. ಕಾರಿನಲ್ಲೇ ನಿಂತು ಸ್ವಲ್ಪ ಕಾಲ ಸಿದ್ದರಾಮಯ್ಯ ಕಾರ್ಯಕರ್ತರತ್ತ ಕೈಬೀಸಿ ಹರ್ಷ ವ್ಯಕ್ತಪಡಿಸಿದರು. ಸಿದ್ದರಾಮಯ್ಯ ಪರ ಜೈಕಾರ ಮುಗಿಲು ಮುಟ್ಟಿತು.

ನಂತರ ಕಾಂಗ್ರೆಸ್ ಕಚೇರಿಯಲ್ಲಿ ಕಾರ್ಯಕರ್ತ ರನ್ನುದ್ದೇಶಿಸಿ ಮಾತನಾಡಿದ ಅವರು, ಬಿಜೆಪಿ ಕಾರ್ಯಕರ್ತರ ವರ್ತನೆ ಬಗ್ಗೆ ತೀವ್ರ ಅಸಮಾ ಧಾನ ವ್ಯಕ್ತಪಡಿಸಿದರು. ಪೊಲೀಸ್ ಇಲಾಖೆ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಆರೋಪಿಸಿದ ಅವರು, ತಪ್ಪಿತಸ್ಥರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಇಲ್ಲ ವಾದಲ್ಲಿ ಆ.26ರಂದು ಮಡಿಕೇರಿಯಲ್ಲಿರುವ ಜಿಲ್ಲಾ ಎಸ್ಪಿ ಕಚೇರಿಗೆ ಮುತ್ತಿಗೆ ಹಾಕುವಂತೆ ಕಾರ್ಯಕರ್ತರಿಗೆ ಕರೆ ನೀಡಿದ್ದಲ್ಲದೇ, ಸಾಧ್ಯ ವಾದರೆ ತಾವೂ ಕೂಡ ಮುತ್ತಿಗೆ ಕಾರ್ಯ ಕ್ರಮದಲ್ಲಿ ಭಾಗವಹಿಸುವುದಾಗಿ ತಿಳಿಸಿದರು.

# ಕಸ್ತೂರಿರಂಗನ್ ವರದಿ ವಿರೋಧಿಸಿ ಇಂದು ಸಿಪಿಐ(ಎಂ) ಪ್ರತಿಭಟನೆ




ವಿರಾಜಪೇಟೆ, ಆ.18– ಕಸ್ತೂರಿರಂಗನ್ ವರದಿಯನ್ನು ಸಂಪೂರ್ಣವಾಗಿ ತಿರಸ್ಕರಿಸುವಂತೆ ಒತ್ತಾಯಿಸುತ್ತಿದ್ದ ಬಿಜೆಪಿ ಈಗ ತಿದ್ದುಪಡಿಗಳೊಂದಿಗೆ ಅನುಷ್ಠಾನಕ್ಕೆ ತರಲು ಮುಂದಾಗಿ ರುವುದನ್ನು ವಿರೋಧಿಸಿ ನಾಳೆ (ಆ.19) ಜಿಲ್ಲಾಧಿಕಾರಿ ಕಛೇರಿ ಎದುರು ಪ್ರತಿಭಟನೆ ಹಮ್ಮಿ ಕೊಳ್ಳಲಾಗಿದೆ ಎಂದು ಸಿಪಿಐ(ಎಂ) ಪ್ರಮುಖರಾದ ಡಾ.ದುರ್ಗಾಪ್ರಸಾದ್ ತಿಳಿಸಿದ್ದಾರೆ.

ಕಸ್ತೂರಿರಂಗನ್ ವರದಿ ಸಂಬಂಧ ವಿರಾಜಪೇಟೆ ಸಿಪಿಐ(ಎಂ) ಕಛೇರಿ ಸಭಾಂಗಣದಲ್ಲಿ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, ಕಸ್ತೂರಿ ರಂಗನ್ ಸಮಿತಿ ಸೂಕ್ತ ಸಮೀಕ್ಷೆ ನಡೆಸದೆ ವರದಿ ಸಿದ್ದಪಡಿಸಿದೆ. ಈ ವರದಿ ಜಾರಿಯಿಂದ ಈ ಭಾಗದ ಜನರಿಗೆ ಅನ್ಯಾಯ ವಾಗಲಿದೆ. ಈ ವರದಿ ಜಾರಿಯಾದರೆ 1,553 ಗ್ರಾಮಗಳ ಜನರ ಮೇಲೆ ಪರಿಣಾಮ ಬೀರಲಿದೆ. ಕಸ್ತೂರಿರಂಗನ್ ವರದಿ ಅವೈಜ್ಞಾನಿಕವಾಗಿದೆ. ಪ್ರದೇಶದ ಭೂ ಸಮೀಕ್ಷೆ ನಡೆಸದೆ. ಹಸಿರು ಪ್ರದೇಶವನ್ನೆಲ್ಲ ಪರಿಸರ ಸೂಕ್ಷ್ಮ ಪ್ರದೇಶವೆಂದು ಘೋಷಿಸಿದೆ. ಇಂಹತ ವರದಿಯನ್ನು ಜಾರಿಗೆ ಸರಲು ಬಿಜೆಪಿ ಮುಂದಾಗಿದೆ. ಇದನ್ನು ತಡೆಯಲು ಹೋರಾಟ ಅನಿವಾರ್ಯ ಎಂದರು.

ಸಿಪಿಐ ಎಂ ಜಿಲ್ಲಾ ಕಾರ್ಯದರ್ಶಿ ಹೆಚ್.ಪಿ.ರಮೇಶ್ ಮಾತನಾಡಿ, ಕಸ್ತೂರಿರಂಗನ್ ಸಮಿತಿಯ ವರದಿಗೆ ಸಂಬಂಧಿಸಿದಂತೆ ಕೇಂದ್ರ ಹಾಗೂ ರಾಜ್ಯದಲ್ಲಿ ಭಾರತೀಯ ಜನತಾಪಕ್ಷ ಜನರಿಗೆ ವಂಚಿಸುತ್ತಾ ಬಂದಿದ್ದು ವಂಚನೆಯನ್ನು ಮರೆಮಾಚಲು ಜನರನ್ನು ತಪ್ಪುದಾರಿಗೆ ಎಳೆಯುತ್ತಿದೆ. ಈ ಸಂಬಂಧ ಬಲವಾದ ಚಳವಳಿಯನ್ನು ನಡೆಸಬೇಕಾಗಿದೆ ಎಂದರು. ವೇದಿಕೆಯಲ್ಲಿ ಪಕ್ಷದ ಜಿಲ್ಲಾ ಸಮಿತಿಯ ಎ.ಸಿ.ಸಾಬು, ವಿರಾಜಪೇಟೆ ಘಟಕದ ಶಾಜಿ ರಮೇಶ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ಪ್ರಜಾಪಿತ ಬ್ರಹ್ಮಾಕುಮಾರೀಸ್ ಕುಶಾಲನಗರ ಶಾಖೆ ವತಿಯಿಂದ ಶ್ರೀ ಕೃಷ್ಣ ಜನ್ಮಾಷ್ಟಮಿ



ಗುಡ್ಡೆಹೊಸೂರು, ಆ.18– ಇಲ್ಲಿಗೆ ಸಮೀಪದ ಕುಶಾಲನಗರದ ರಾಧಕೃಷ್ಣ ಬಡಾವಣೆಯಲ್ಲಿರುವ ಪ್ರಜಾಪಿತ ಬ್ರಹ್ಮಾ ಕುಮಾರೀಸ್ ಈಶ್ವರಿಯ ವಿಶ್ವವಿದ್ಯಾಲಯ ಕುಶಾಲನಗರ ಶಾಖೆ ವತಿಯಿಂದ ಶ್ರೀಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ವಿಶೇಷ ಧ್ಯಾನ ಶಿಬಿರ ಏರ್ಪಡಿಸಲಾಗಿತ್ತು.

ಈ ಸಂದರ್ಭದಲ್ಲಿ ಸಂಸ್ಥೆಯ ಪ್ರಮುಖ ರಾದ ಲಲಿತಾ ಮಣಿ, ಕೇಂದ್ರದ ಪ್ರಮುಖರು ಹಾಗೂ ಸ್ಥಳೀಯ ಕೇಂದ್ರದ ಅಭಿಮಾನಿ ಗಳು ಮತ್ತು ಶಿವನ ಭಕ್ತರು ಹಾಜರಿದ್ದರು.

# ಜಿಲ್ಲಾಡಳಿತದಿಂದ ಸದ್ಭಾವನಾ ದಿನಾಚರಣೆ

ಮಡಿಕೇರಿ, ಆ.18– ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಂ ಡಿದ್ದ 'ಸದ್ಭಾವನಾ ದಿನಾಚರಣೆ' ಪ್ರಯುಕ್ತ ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇ ಗೌಡ ಅವರು ಪ್ರತಿಜ್ಞಾವಿಧಿ ಬೋಧಿಸಿದರು.



ಬಳಿಕ ಮಾತನಾಡಿದ ಹೆಚ್ಚುವರಿ ಜಿಲ್ಲಾಧಿ ಕಾರಿಗಳು 'ಎಲ್ಲಾ ಧರ್ಮ, ಭಾಷೆ ಹಾಗೂ ಜನರಲ್ಲಿ ಸೌಹಾರ್ದತೆ ಉತ್ತೇಜಿಸಿ ಎಲ್ಲ ರಲ್ಲೂ ಸದ್ಭಾವನೆ ಮೂಡಿಸಿ ಹಿಂಸಾಚಾರ ತ್ಯಜಿಸುವಂತೆ ಮಾಡುವುದು ಸದ್ಭಾವನಾ ದಿನದ ಉದ್ದೇಶವಾಗಿದೆ' ಎಂದರು.

ಜಾತಿ, ಧರ್ಮ, ಪ್ರದೇಶ, ಮತ ಅಥವಾ ಭಾಷೆಯ ಬೇಧ ಭಾವವಿಲ್ಲದೇ ಭಾರತದ ಎಲ್ಲ ಜನತೆಯ ಭಾವೈಕ್ಯ ಮತ್ತು ಸೌಹಾರ್ದ ಕ್ಕಾಗಿ ಕಾರ್ಯ ನಿರ್ವಹಿಸುತ್ತೇನೆಂದು ನಾನು ಪ್ರತಿಜ್ಞೆ ಮಾಡುತ್ತೇನೆ. ಅಲ್ಲದೇ, ವೈಯಕ್ತಿಕ ವಾಗಿಯಾಗಲೀ ಅಥವಾ ಸಾಮೂಹಿಕವಾಗಿ ಯಾಗಲೀ ನಮ್ಮಲ್ಲಿರುವ ಎಲ್ಲ ಭೇದ–ಭಾವ ಗಳನ್ನು ಹಿಂಸಾಚಾರಕ್ಕೆ ಅವಕಾಶ ನೀಡದೆ ಸಮಾಲೋಚನೆ ಹಾಗೂ ಸಂವಿಧಾನಾತ್ಮಕ ಕ್ರಮಗಳ ಮೂಲಕ ಪರಿಹರಿಸುತ್ತೇನೆಂದು ಸಹ ಪ್ರತಿಜ್ಞೆ ಮಾಡುತ್ತೇನೆ ಎಂದು ಪ್ರತಿಜ್ಞಾವಿಧಿ ಬೋಧಿಸಿದರು.

ಜಿಲ್ಲಾಧಿಕಾರಿಯವರ ಕಾನೂನು ಸಲಹೆ ಗಾರರಾದ ಲೋಕೇಶ್, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಪುಟ್ಟರಾಜು, ಜಿಲ್ಲಾ ನೋಂದಣಾಧಿಕಾರಿ ಸಿದ್ದೇಶ್ ಸರ್ಕಾರಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷರಾದ ಪೊನ್ನಚ್ಚನ ಶ್ರೀನಿವಾಸ್, ಸಿಬ್ಬಂದಿಗಳು ಇತರರು ಇದ್ದರು.

# ನಾಳೆ ವಿವಿಧೆಡೆ ವಿದ್ಯುತ್ ಅದಾಲತ್

ಮಡಿಕೇರಿ, ಆ.18– ವಿದ್ಯುತ್ ಸಮಸ್ಯೆ ಗಳನ್ನು ಪರಿಹರಿಸುವ ದಿಸೆಯಲ್ಲಿ ಮಕ್ಕಂದೂರು, ಪೆರಾಜೆ, ನಿಟ್ಟೂರು ಗ್ರಾಮ ಪಂಚಾಯಿತಿ ಸಭಾಂಗಣದಲ್ಲಿ, ಚಿಕ್ಕರೇಷ್ಮೆ ಹಾಡಿ ಗ್ರಾಪಂ ಸಮುದಾಯ ಭವನ, ಶಿರಂಗಾಲ ಹಾಲಿನ ಡೈರಿ ಸಭಾಂಗಣ, ನಾಕೂರು ಗ್ರಾಪಂ ಸಮು ದಾಯ ಭವನದಲ್ಲಿ ಮತ್ತು ಬಡಬನಹಳ್ಳಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಆ.20 ರಂದು ಬೆಳಗ್ಗೆ 11 ಗಂಟೆಗೆ ವಿದ್ಯುತ್ ಅದಾ ಲತ್ ನಡೆಯಲಿದೆ. ಆದ್ದರಿಂದ ಸಾರ್ವಜ ನಿಕರು/ ವಿದ್ಯುತ್ ಗ್ರಾಹಕರು ಸಭೆಗೆ ಹಾಜ ರಾಗಿ ತಮ್ಮ ಅಹವಾಲುಗಳನ್ನು ಸಲ್ಲಿಸುವಂತೆ ಸೆಸ್ಕ್ ಕಾರ್ಯನಿರ್ವಾಹಕ ಎಂಜಿನಿಯರ್ ಅನಿತಾ ಬಾಯಿ ಅವರು ತಿಳಿಸಿದ್ದಾರೆ.

# ಅರ್ಜಿ ಸಲ್ಲಿಸಲು ಕಾಲಾವಕಾಶ

ಮಡಿಕೇರಿ, ಆ.18– ಕರ್ನಾಟಕ ಮರಾಠ ಸಮುದಾಯ ಅಭಿವೃದ್ಧಿ ನಿಗಮದಿಂದ 2022–23ನೇ ಸಾಲಿನಲ್ಲಿ ಶಹಜೀರಾಜೇ ಸಮೃದ್ಧಿ ಯೋಜನೆ (ಸ್ವಯಂ ಉದ್ಯೋಗ ನೇರ ಸಾಲ ಮತ್ತು ಸಹಾಯ ಧನ ಯೋಜನೆ)ಯಲ್ಲಿ ಈಗಾಗಲೇ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು ಅಂತಿಮ ದಿನಾಂಕವನ್ನು ಸೆ.5 ರವರೆಗೆ ವಿಸ್ತರಿಸಲಾಗಿದೆ ಎಂದು ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕಿ ಮಹಾದೇವಿ ತಿಳಿಸಿದ್ದಾರೆ.

# ಅಧಿಕಾರಿಯ ಕಿರುಕುಳ ತಾಳಲಾರದೆ ರೇಷ್ಮೆ ಇಲಾಖೆ ಡಿ ಗ್ರೂಪ್ ನೌಕರ ಆತ್ಮಹತ್ಯೆಗೆ ಯತ್ನ

## ರೇಷ್ಮೆ ಇಲಾಖೆ ಕಚೇರಿ ಮುಂದೆ ಭಾರತೀಯ ಪರಿವರ್ತನ ಸಂಘ ಪ್ರತಿಭಟನೆ

ಚಾಮರಾಜನಗರ, ಆ.18– ರೇಷ್ಮೆ ಇಲಾಖೆ ಸಹಾಯಕ ನಿರ್ದೇಶಕರ ಕಿರುಕುಳ ತಾಳ ಲಾರದೆ ಕಚೇರಿಯಲ್ಲೇ ವಿಷ ಸೇವಿಸಿ ಆತ್ಮ ಹತ್ಯೆಗೆ ಯತ್ನಿಸಿದ ನೌಕರನ ಪರಿಸ್ಥಿತಿ ಗಂಭೀರ ವಾಗಿದ್ದು, ಸೂಕ್ತ ಕಾನೂನು ಕ್ರಮ ಕೈಗೊಳ್ಳು ವಂತೆ ಒತ್ತಾಯಿಸಿ ಭಾರತೀಯ ಪರಿವರ್ತನ ಸಂಘ (ಬಿಪಿಎಸ್)ದ ವತಿಯಿಂದ ನಗರದ ಸರ್ಕಾರಿ ರೇಷ್ಮೆ ಇಲಾಖೆ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಭಾರತೀಯ ಪರಿವರ್ತನ ಸಂಘದ ಜಿಲ್ಲಾ ಕಾರ್ಯದರ್ಶಿ ವಾಸು ಮಾತನಾಡಿ, ರೇಷ್ಮೆ ಇಲಾಖೆಯಲ್ಲಿ ಡಿ ಗ್ರೂಪ್ ನೌಕರರಾಗಿ ಕಳೆದ ಹಲವಾರು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವ ಲೋಕೇಶ್ ಅವರು ವಸತಿ ಗೃಹಕ್ಕಾಗಿ ಪ್ರಭಾರ ಸಹಾಯಕ ನಿರ್ದೇಶಕರಿಗೆ ಅರ್ಜಿ ಸಲ್ಲಿಸಿ ದ್ದಾರೆ ಆದರೆ ಅವರು ದಲಿತ ಎಂಬ ಕಾರಣಕ್ಕಾಗಿ ಲೋಕೇಶ್‌ಗೆ ವಸತಿ ಗೃಹ ನೀಡದೆ ಮಾನಸಿಕ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿದರು.

ಈ ಕಿರುಕುಳವನ್ನು ಸಹಿಸಲಾರದೆ ಮನ ನೊಂದು ಕಚೇರಿಯಲ್ಲೇ ವಿಷಸೇವಿಸಿ ಆತ್ಮ ಹತ್ಯೆಗೆ ಯತ್ನಿಸಿದ್ದಾರೆ. ಇದಕ್ಕೆಲ್ಲ ಕಾರಣವಾ ಗಿರುವ ಪ್ರಭಾರ ಸಹಾಯಕ ನಿರ್ದೇಶಕರನ್ನು ಅಮಾನತುಪಡಿಸಬೇಕು. ಸೂಕ್ತ ರೀತಿಯಲ್ಲಿ ತನಿಖೆ ನಡೆಸಿ ಲೋಕೇಶ್‌ಗೆ ನ್ಯಾಯ ದೊರಕಿಸಿ ಕೊಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ನಗರಸಭಾ ಸದಸ್ಯ ಪ್ರಕಾಶ್, ಭಾರತೀಯ ಪರಿವರ್ತನ ಸಂಘದ ಟೌನ್ ಅಧ್ಯಕ್ಷ ರಾಮಸಮುದ್ರ ಬಾಬು, ಕಂದಹಳ್ಳಿ ರಮೇಶ್ ನಾಯಕ, ಹೊಂಗನೂರು ನಟ ರಾಜು, ನಾಗೇಶ್, ಗೌತಮ್, ಜಿ.ಎಂ. ಶಂಕರ್, ಪ್ರಸನ್ನ ಇತರರು ಭಾಗವಹಿಸಿದ್ದರು.



# ಆ.22, ಕಾಂಗ್ರೆಸ್‌ನಿಂದ ಸ್ವಾತಂತ್ರ್ಯ ಅಮೃತ ಮಹೋತ್ಸವ ಪಾದಯಾತ್ರೆ



ಚಾಮರಾಜನಗರ, ಆ.18– ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಆ.22 ರಂದು ಕಾಂಗ್ರೆಸ್ ವತಿಯಿಂದ ಜಿಲ್ಲಾ ಮಟ್ಟದಲ್ಲಿ ಬೃಹತ್ ಪಾದಯಾತ್ರೆ ಹಮ್ಮಿಕೊಂಡಿದ್ದು, ಕಾಂಗ್ರೆಸ್ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಮನವಿ ಮಾಡಿದ್ದಾರೆ.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಈ ಸಂಬಂಧ ನಡೆದ ಪೂರ್ವಭಾವಿ ಸಭೆ ಯಲ್ಲಿ ಅವರು ಮಾತನಾಡಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಪ್ರತಿ ಪಕ್ಷ ನಾಯಕ ಸಿದ್ದರಾಮಯ್ಯ ಕೆಪಿಸಿಸಿ ಕಾರ್ಯಾ ಧ್ಯಕ್ಷ ಆರ್.ಧ್ರುವನಾರಾಯಣ ಅವರ ಆದೇಶದ ಮೇರೆಗೆ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಅಮೃತ ಮಹೋತ್ಸವ ಪಾದಯಾತ್ರೆ ಹಮ್ಮಿಕೊಳ್ಳ ಲಾಗಿದೆ. ಅಂದು ಚಾಮರಾಜನಗರ– ಗುಂಡ್ಲುಪೇಟೆ ಮುಖ್ಯರಸ್ತೆಯಲ್ಲಿರುವ ಬಣ್ಣಾರಿ ಅಮ್ಮನ್ ದೇವಾಲಯದ ಆವರಣದಲ್ಲಿ ಬೆಳಗ್ಗೆ ಬೃಹತ್ ಪಾದಯಾತ್ರೆಗೆ ಚಾಲನೆ ನೀಡಲಾಗುವುದು ಎಂದರು.

ಸಂತೇಮರಹಳ್ಳಿ ವೃತ್ತದಿಂದ ಮಸಗಾಪುರ, ಮಾದಾಪುರ, ಮಂಗಲ, ಮಹಂತಾಳಪುರ ತಲುಪಿ ಪಾದಯಾತ್ರೆ ಮುಕ್ತಾಯಗೊಳ್ಳಲಿದೆ. ಕಾರ್ಯಕರ್ತರಿಗೆ ಕುಡಿಯುವ ನೀರು, ತಿಂಡಿ–ತಿನಿಸು, ಊಟದ ವ್ಯವಸ್ಥೆ ಮಾಡಲಾಗುವುದು ಎಂದ ಅವರು, ಪಾದಯಾತ್ರೆಯಲ್ಲಿ ಪಕ್ಷದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪಾದಯಾತ್ರೆ ಯಶಸ್ವಿಗೊಳಿಸ ಬೇಕು ಎಂದು ಮನವಿ ಮಾಡಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿ, ಕೆಪಿಸಿಸಿ ಅಧ್ಯಕ್ಷರ ಸೂಚನೆ ಮೇರೆಗೆ ಪಕ್ಷ ಸಂಘಟನೆ ದೃಷ್ಟಿಯಿಂದ ಈಗಾ ಗಲೇ ಗುಂಡ್ಲುಪೇಟೆಯಲ್ಲಿ ನಡೆದ ಪಾದ ಯಾತ್ರೆ ಯಶಸ್ವಿಯಾಗಿದೆ. ಮಳೆ ಹೆಚ್ಚಾದ ಕಾರಣ ಆ.10 ರಂದು ನಡೆಯಬೇಕಿದ್ದ ಪಾದ ಯಾತ್ರೆಯನ್ನು ರದ್ದುಪಡಿಸಲಾಗಿತ್ತು ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನಾ, ಎ.ಎಸ್.ಗುರುಸ್ವಾಮಿ, ಎಸ್ಟಿ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಪು.ಶ್ರೀನಿವಾಸನಾಯಕ, ಜಿಪಂ ಮಾಜಿ ಸದಸ್ಯರಾದ ರಮೇಶ್, ಕೆ.ಪಿ.ಸದಾಶಿವಮೂರ್ತಿ, ಕೆಪಿಸಿಸಿ ಒಬಿಸಿ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿ ಮಹದೇವಶೆಟ್ಟಿ, ಅಲ್ಪಸಂಖ್ಯಾ ತರ ವಿಭಾಗದ ಪ್ರಧಾನ ಕಾರ್ಯದರ್ಶಿ ಅಬ್ದುಲ್ ಷರೀಫ್, ಕಾನೂನು ಸಲಹೆಗಾರ ಪುಷ್ಟಿ, ಭಾಗ್ಯಮ್ಮ, ಎಪಿಎಂಸಿ ಸದಸ್ಯ ಸೋಮೇಶ್, ಮುಖಂಡರಾದ ಬಾಲಚಂದ್ರಮೂರ್ತಿ, ಕಾಗಲವಾಡಿ ಶಿವಸ್ವಾಮಿ, ಚಂದ್ರು ಮಹೇಶ್ ಕುಮಾರ್, ಪಿ.ಲಿಂಗರಾಜು, ವಕೀಲ ಅರುಣ್ ಕುಮಾರ್. ಶಿವಮೂರ್ತಿ, ನಾಗಬಸವಣ್ಣ, ಶಿವಮೂರ್ತಿ, ಮಹದೇವಸ್ವಾಮಿ, ವೀರಭದ್ರಸ್ವಾಮಿ, ನಾಗಯ್ಯ, ಬಿಸಲವಾಡಿ ಉಮೇಶ್, ಕುಮಾರ್, ಕಾರ್ಯಕರ್ತರು, ಹಾಜರಿದ್ದರು.

# ನನ್ನ ಕಲೆ ಗುರುತಿಸಿದ ಸರ್ಕಾರಕ್ಕೆ ವಂದನೆ

## ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಶಿವರುದ್ರಸ್ವಾಮಿ ಸಂತಸ

ಚಾಮರಾಜನಗರ,ಆ.18– ಪ್ರಸಕ್ತ ಸಾಲಿನ ಕರ್ನಾಟಕ ಜಾನಪದ ಅಕಾಡೆ ಮಿಯ ವಾರ್ಷಿಕ ಪ್ರಶಸ್ತಿಗೆ ಚಾಮ ರಾಜನಗರ ತಾಲೂಕಿನ ಗಂಗವಾಡಿ ಗ್ರಾಮದ ವೀರಗಾಸೆ (ವೀರಭದ್ರ ಕುಣಿತ) ಕಲಾವಿದರಾದ ಶಿವ ರುದ್ರಸ್ವಾಮಿ ಭಾಜನರಾಗಿದ್ದಾರೆ.



64 ವರ್ಷ ವಯಸ್ಸಿನ ಶಿವ ರುದ್ರಸ್ವಾಮಿ ಅವರು ಕಳೆದ 28 ವರ್ಷಗಳಿಂದ ವೀರಗಾಸೆ ಕಲೆಯನ್ನು ಪ್ರದರ್ಶಿ ಸುತ್ತಿದ್ದಾರೆ ಇವರ ತಂದೆ ಹಾಗೂ ತಾತನ ಕಾಲ ದಿಂದಲೂ ಈ ಕಲೆ ಹುಟುಂಬಕ್ಕೆ ಹುಗತವಾಗಿದೆ.

ಶಿವರುದ್ರಸ್ವಾಮಿ ಕಲೆಯನ್ನು ಗುರುತಿಸಿದ ಇಂಡಿಯನ್ ಯೂನಿವರ್ಸಿಟಿ 2017 ಜನ ವರಿ 21ರಂದು ಇವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಲಾಗಿದೆ ಇದಲ್ಲದೆ ಹಲವಾರು ಪ್ರಶಸ್ತಿಗಳಿಗೆ ಇವರು ಭಾಜನರಾಗಿದ್ದಾರೆ.

ಗಂಗವಾಡಿಯಲ್ಲಿ ವಾಸವಾಗಿರುವ ಶಿವ ರುದ್ರಸ್ವಾಮಿ ಅವರು ಗ್ರಾಮದಲ್ಲಿರುವ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಪೂಜೆ ಮಾಡುತ್ತಿದ್ದಾರೆ. ಪತ್ನಿ ರತ್ನಮ್ಮ, ಪುತ್ರ ಬೀರೇಶ್ ಜೊತೆ ವಾಸವಾಗಿದ್ದಾರೆ. ತನ್ನ ಇಬ್ಬರು ಹೆಣ್ಣು ಮಕ್ಕಳಾದ ದಾಕ್ಷಾಯಿಣಿ ಹಾಗೂ ಬೇಬಿ ಅವರಿಗೆ ಮದುವೆ ಮಾಡಿ ದ್ದಾರೆ. ತನ್ನ ಮಗ 22 ವರ್ಷದ ಬೀರೇಶನಿಗೆ ವೀರಗಾಸೆ ಕುಣಿತವನ್ನು ಕಲಿಸಿದ್ದಾರೆ.

'ಮೈಸೂರು ಮಿತ್ರ'ನೊಂದಿಗೆ ತನ್ನ ಸಂತಸ ಹಂಚಿಕೊಂಡ ಶಿವರುದ್ರಸ್ವಾಮಿ ಅವರು, ಜಾನಪದ ಅಕಾಡೆಮಿ ಪ್ರಶಸ್ತಿ ದೊರೆತಿದೆ ಎಂಬುದನ್ನು ತಿಳಿದು ಬಹಳ ಖುಷಿ ಆಯಿತು. ನನ್ನ ಕಲೆಯನ್ನು ಸರ್ಕಾರ ಗುರುತಿಸಿದ್ದಕ್ಕೆ ಖುಷಿ ಆಗುತ್ತಿದೆ. ಸರ್ಕಾರಕ್ಕೆ ನನ್ನ ವಂದನೆಗಳು ಮತ್ತು ಪ್ರಶಸ್ತಿ ದೊರೆ ಯಲು ಕಾರಣರಾದ ಎಲ್ಲರಿಗೂ ಧನ್ಯ ವಾದ ಸಲ್ಲಿಸುತ್ತೇನೆ ಎಂದರು.

# ಇಂದು ಮಲೆ ಮಹದೇಶ್ವರಸ್ವಾಮಿ ದೇವಸ್ಥಾನದ ಗೋಲಕ ಹಣ ಎಣಿಕೆ

ಚಾಮರಾಜನಗರ, ಆ.18– ಮಲೆಮಹದೇಶ್ವರಬೆಟ್ಟದ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನದ ಗೋಲಕಗಳ ಎಣಿಕೆ ಕಾರ್ಯ ವನ್ನು ಬೆಟ್ಟದ ಬಸ್ ನಿಲ್ದಾಣದಲ್ಲಿರುವ ವಾಣಿಜ್ಯ ಸಂಕೀರ್ಣ ಕಟ್ಟಡದ ಮೊದಲ ಮಹಡಿಯ ವಿಶ್ರಾಂತಿ ಗೃಹದಲ್ಲಿ ಆಗಸ್ಟ್ 19ರಂದು ಬೆಳಗ್ಗೆ ಸೂಕ್ತ ಪೊಲೀಸ್ ಬಂದೋಬಸ್ತ್‌ನೊಂದಿಗೆ ನಡೆಸಲಾಗುವುದು ಎಂದು ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



# ನಿಟ್ರೆಯಲ್ಲಿ ಸರ್ಕಾರಿ ಶಾಲಾ ಕೊಠಡಿ ಉದ್ಘಾಟನೆ

## ಕೆರೆಗಳಿಗೆ ನೀರು ತುಂಬಿಸುವ ಯೋಜನೆಯನ್ನು ಸವಾಲಾಗಿ ಸ್ವೀಕರಿಸಿರುವೆ

ಗುಂಡ್ಲುಪೇಟೆ, ಆ.18– ತಾಲೂಕಿನಲ್ಲಿ ಅವಶ್ಯಕತೆಯಿರುವ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು ಬಹುಜನರ ಬೇಡಿಕೆಯಂತೆ ಕೆರೆಗಳಿಗೆ ನೀರು ತುಂಬಿಸಲಾಗುತ್ತಿದೆ ಎಂದು ಶಾಸಕ ಸಿ.ಎಸ್.ನಿರಂಜನಕುಮಾರ್ ತಿಳಿಸಿದರು.

ತಾಲೂಕಿನ ನಿಟ್ರೆ ಗ್ರಾಮದಲ್ಲಿ ಉನ್ನತೀ ಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕೊಠಡಿ ಹಾಗೂ ನೂತನ ಅಂಗನ ವಾಡಿ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ತಾನು ಶಾಸಕನಾಗಿ ಆಯ್ಕೆಯಾದ ನಂತರ ನಿರಂತರ ಅಭಿವೃದ್ಧಿ ಕಾರ್ಯ ಗಳನ್ನು ಮಾಡುತ್ತಿದ್ದು ಕ್ಷೇತ್ರದ ಬಹುಜನರ ಬೇಡಿಕೆಯಾಗಿದ್ದ, ಕೆರೆಗಳಿಗೆ ನೀರು ತುಂಬಿಸುವ ಯೋಜನೆಯನ್ನು ಸವಾಲಾಗಿ ಸ್ವೀಕರಿಸಿ ಜಾರಿಗೊಳಿಸಿರುವೆ ಎಂದರು.



ಇದರಿಂದ ಮಳವಳ್ಳಿಕೆರೆಯಿಂದ ನಲ್ಲೂರು ಅಮಾನಿ ಕೆರೆಗೆ ನೀರು ತುಂಬಿಸಲು ಮುಂದಾ ಗಿದ್ದರೂ ಕೆಲವು ತಾಂತ್ರಿಕ ಕಾರಣಗಳಿಂದ ವಿಳಂಬವಾಗಿದೆ. ಹುರಾ ಏತ ನೀರಾವರಿ ಯೋಜನೆಯ ಟೆಂಡರ್ ಪ್ರಕ್ರಿಯೆ ಪೂರ್ಣ ಗೊಂಡಿದ್ದು ಇದರಲ್ಲಿ ಕಾಡಂಚಿನ ಶ್ರೀಕಂಠ ಪುರ, ಹೊಸಪುರ ಕೆರೆಗಳಿಗೂ ನೀರು ತುಂಬಲಿದೆ. ಅಲ್ಲದೆ ತಾಲೂಕಿನ 100 ಕೆರೆ ಗಳಿಗೆ ನೀರು ತುಂಬಿಸುವ ಯೋಜನೆಯ ಡಿಪಿಆರ್ ಆಗಿದ್ದು ಮುಂದಿನ ತಿಂಗಳಿನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದಲೇ ಭೂಮಿಪೂಜೆ ಮಾಡಿಸಲಾ ಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ನಿಟ್ರೆ ಗ್ರಾಪಂ ಅಧ್ಯಕ್ಷ ಮರಿಸ್ವಾಮಿ, ಸದಸ್ಯರಾದ ನಂದೀಶ್, ಗೌರಮ್ಮ, ಶ್ರೀನಿವಾಸ, ಮೀನಾಕ್ಷಿ, ರತ್ನಮ್ಮ, ಬಗರ್ ಹುಕುಂ ಸಮಿತಿಯ ಉಪಾಧ್ಯಕ್ಷ ನಿಟ್ರೆ ನಾಗರಾಜಪ್ಪ, ಬಿಜೆಪಿ ಮಂಡಲಾಧ್ಯಕ್ಷ ದೊಡ್ಡಹುಂಡಿ ಜಗದೀಶ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಶಿವಸ್ವಾಮಿ ಸೇರಿದಂತೆ ಹಲವರು ಇದ್ದರು.

# ಪೂಜಾ ಕಾರ್ಯಕ್ರಮ

**ಚಾಮರಾಜನಗರ:** ನೃಪತುಂಗ ವೃತ್ತದಲ್ಲಿ ರುವ ಶ್ರೀ ಶನೇಶ್ವರಸ್ವಾಮಿ ದೇವಸ್ಥಾನದಲ್ಲಿ ಆ.20ರಂದು ಪೂಜೆಯನ್ನು ಆಯೋಜಿಸಲಾಗಿದೆ. ಅಂದು ಬೆಳಗ್ಗೆ 11 ಗಂಟೆಗೆ ಶ್ರೀ ರಾಮದಾಸ್ ಅರಳವಾಡಿ ತಂಡದವರಿಂದ ಶ್ರೀ ಶನೇಶ್ವರ ಸ್ವಾಮಿ ಹರಿಕಥೆ ಏರ್ಪಡಿಸಲಾಗಿದೆ.

# ಪಾನ್‌ಕಾರ್ಡ್ ದುರ್ಬಳಕೆ ಆರೋಪ

ಚಾಮರಾಜನಗರ, ಆ.18– ನಗರದ ಹೆಚ್‌ಡಿ ಎಫ್‌ಸಿ ಬ್ಯಾಂಕ್‌ನವರು ನನ್ನ ಪಾನ್‌ಕಾರ್ಡ್‌ನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ನಗರದ ದೊಡ್ಡಂಗಡಿ ಬೀದಿ ನಿವಾಸಿ ನಾಗ ಭೂಷಣ್ ಗಂಭೀರ ಆರೋಪ ಮಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನನ್ನ ಪಾನ್‌ಕಾರ್ಡ್‌ನ್ನು ದುರ್ಬಳಕೆ ಮಾಡಿ ಕೊಂಡು ಲಕ್ಷಾಂತರ ರೂ. ಸಾಲ ಪಡೆಯ ಲಾಗಿದೆ. ಈ ಬಗ್ಗೆ ಸೂಕ್ತ ತನಿಖೆ ನಡೆಸಿ ನನಗೆ ನ್ಯಾಯ ದೊರಕಿಸುವಂತೆ ವಿನಂತಿಸಿದರು.

ನನ್ನ ಮಗಳ ಶೈಕ್ಷಣಿಕ ಸಾಲಕ್ಕಾಗಿ ಎಸ್‌ಬಿಐ ಬ್ಯಾಂಕಿಗೆ ನಾನು ಸಾಲ ಪಡೆಯಲು ತೆರಳಿದಾಗ ನನ್ನ ಪಾನ್ ಕಾರ್ಡ್‌ನ್ನು ದುರ್ಬಳಕೆ ಮಾಡಿಕೊಂಡಿರುವುದು ಗೊತ್ತಾಯಿತು. ಈಗ ನನಗೆ ಬ್ಯಾಂಕಿನಿಂದ ಸಾಲ ದೊರೆಯುತ್ತಿಲ್ಲ. ಇದರಿಂದ ಮಗಳ ವಿದ್ಯಾಭ್ಯಾಸಕ್ಕೆ ತುಂಬಾ ತೊಂದರೆ ಆಗಿದೆ ಎಂದರು. ಈ ಬಗ್ಗೆ ನಾನು ಹೆಚ್‌ಡಿಎಫ್‌ಸಿ ಬ್ಯಾಂಕ್‌ಗೆ ಹಾಗೂ ಪೊಲೀಸ್ ಠಾಣೆಗೆ ದೂರು ನೀಡಿದ್ದೇನೆ. ಆದರೂ ಸಹ ಯಾವುದೇ ಪ್ರಯೋಜನವಾಗಿಲ್ಲ ಎಂದು ಆರೋಪಿಸಿದರು.

# ರಾಜಸ್ಥಾನದಲ್ಲಿ ದಲಿತ ವಿದ್ಯಾರ್ಥಿ ಹತ್ಯೆ ಖಂಡಿಸಿ ಬಿಜೆಪಿ ಎಸ್‌ಸಿ ಮೋರ್ಚಾದಿಂದ ಪ್ರತಿಭಟನೆ

ಚಾಮರಾಜನಗರ, ಆ.18– ರಾಜಸ್ಥಾನ ದಲ್ಲಿ ದಲಿತ ವಿದ್ಯಾರ್ಥಿ ಹತ್ಯೆಗೈದ ಶಿಕ್ಷಕನಿಗೆ ಗಲ್ಲುಶಿಕ್ಷೆ ವಿಧಿಸುವಂತೆ ಒತ್ತಾಯಿಸಿ ಬಿಜೆಪಿ ಎಸ್‌ಸಿ ಮೋರ್ಚಾದ ಜಿಲ್ಲಾ ಸಮಿತಿ ವತಿ ಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಮೇಘಾ ಕಾಂಪ್ಲೆಕ್ಸ್‌ನಲ್ಲಿರುವ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಮೋರ್ಚಾದ ಜಿಲ್ಲಾಧ್ಯಕ್ಷ ಕಿನಕಹಳ್ಳಿ ರಾಚಯ್ಯ, ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ ಅವರ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾಕಾ ರರು ರಾಜಸ್ಥಾನ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.




ಪ್ರತಿಭಟನೆ ನೇತೃತ್ವ ವಹಿಸಿದ್ದ ಎಸ್‌ಸಿ ಮೋರ್ಚಾದ ಜಿಲ್ಲಾಧ್ಯಕ್ಷ ಕಿನಕಹಳ್ಳಿ ರಾಚಯ್ಯ ಮಾತನಾಡಿ, ರಾಜಸ್ಥಾನದ ಶಾಲೆಯೊಂದ ರಲ್ಲಿ ದಾಹದಿಂದ ವಿದ್ಯಾರ್ಥಿಯೊಬ್ಬ ಕುಡಿ ಯುವ ನೀರಿನ ಮಡಿಕೆ ಮುಟ್ಟಿ ನೀರು ಕುಡಿದ ಎಂಬ ಕಾರಣಕ್ಕೆ ಶಿಕ್ಷಕನೊಬ್ಬ ವಿದ್ಯಾರ್ಥಿ ಮೇಲೆ ಹಲ್ಲೆಮಾಡಿದ್ದಾನೆ ಇದರಿಂದ ವಿದ್ಯಾರ್ಥಿ ಮೃತಪಟ್ಟಿದ್ದಾನೆ. 75ನೇ ವರ್ಷದ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂದರ್ಭದಲ್ಲಿ ದಲಿತ ವಿದ್ಯಾರ್ಥಿ ಹತ್ಯೆ ಮಾಡಿರುವ ಶಿಕ್ಷಕನಿಗೆ ಗಲ್ಲುಶಿಕ್ಷೆ ವಿಧಿಸಬೇಕು ಒತ್ತಾಯಿಸಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾ ಕೂಡು ಪ್ರಕಾಶ್, ಜಿಲ್ಲಾ ಬಿಜೆಪಿ ಕಾರ್ಯದರ್ಶಿ ಪದ್ಮ ಮಾತನಾಡಿದರು. ಪ್ರತಿಭಟನೆಯಲ್ಲಿ ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮ ಚಂದ್ರ, ಗ್ರಾಮಾಂತರ ಮಂಡಲ ಅಧ್ಯಕ್ಷ ಬಸವಣ್ಣ, ನಗರ ಮಂಡಲ ಅಧ್ಯಕ್ಷ ರಾಜು, ಎಸ್‌ಟಿ ಮೋರ್ಚಾ ಜಿಲ್ಲಾಧ್ಯಕ್ಷ ಜಯ ಸುಂದರ್, ಪ್ರಧಾನ ಕಾರ್ಯದರ್ಶಿ ಶಿವಣ್ಣ, ಧಾರ್ಮಿಕ ದತ್ತಿ ಸದಸ್ಯ ಶಿವಮ್ಮ, ಯುವ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ಶಿವು ವಿರಾಟ್, ಎಸ್‌ಸಿ ಮೋರ್ಚಾದ ಜಿಲ್ಲಾ ಉಪಾಧ್ಯಕ್ಷರಾದ ವೇಣುಗೋಪಾಲ್, ನಲ್ಲೂರು ಪರಮೇಶ, ಲಕ್ಕೂರು ನಾಗೇಶ್, ಗ್ರಾಮಾಂತರ ಮಂಡಲ ಅಧ್ಯಕ್ಷ ಮುತ್ತಿಗೆ ಮೂರ್ತಿ, ಕುಲಗಾಣ ಷಡಕ್ಷರಿ, ಕಿಲಗೆರೆ ಬಸವರಾಜು ಶ್ಯಾನಡ್ರಳ್ಳಿ ರಾಜೇಂದ್ರ, ಗೋಪಿ, ರೇವಣ್ಣ, ಸಂಪತ್ತು, ಮಹೇಶ್, ದೊಡ್ಡರಾಜು ಇತರರು ಭಾಗವಹಿಸಿದ್ದರು.

# ಮಾಂಸ ಮಾರಾಟ ನಿಷೇಧ

ಚಾಮರಾಜನಗರ, ಆ.18– ಶ್ರೀ ಕೃಷ್ಣ ಜನ್ಮಾಷ್ಟಮಿ ಹಬ್ಬದ ಹಿನ್ನೆಲೆಯಲ್ಲಿ ಆಗಸ್ಟ್ 19ರಂದು ನಗರ ಸಭಾ ವ್ಯಾಪ್ತಿಯಲ್ಲಿ ಮಾಂಸ ಮಾರಾಟ ಹಾಗೂ ಪ್ರಾಣಿ ವಧೆಯನ್ನು ನಿಷೇಧಿಸಲಾಗಿದೆ.

ಒಂದನೇ ಪುಟದಿಂದ

## ಭಾರತದತ್ತ ನೋಡುತ್ತಿರುವ ವಿಶ್ವದ ದೇಶಗಳು

ಶಿಕ್ಷಣವನ್ನು ನೀಡುವ ಕಾರ್ಯವಾಗಲಿ, ಸುತ್ತೂರು ಮಠವು ದೇಶ ಮತ್ತು ವಿದೇಶಗಳಲ್ಲಿ ತನ್ನ 300 ಕ್ಕೂ ಹೆಚ್ಚು ಶಿಕ್ಷಣ ಮತ್ತು ಇತರ ಸಂಸ್ಥೆಗಳ ಮೂಲಕ ಅತ್ಯುತ್ತಮ ಕೆಲಸವನ್ನು ಮಾಡುತ್ತಿದೆ. ಅಗತ್ಯವಿರುವ ಮತ್ತು ಬಡ ವಿದ್ಯಾರ್ಥಿ ಗಳಿಗೆ ಮೌಲ್ಯಾಧಾರಿತ ಶಿಕ್ಷಣವನ್ನು ನೀಡಲು ಶ್ರೀ ಮಠವು ಯಾವಾಗಲೂ ಒತ್ತು ನೀಡಿದೆ. ಇಲ್ಲಿ ಉಚಿತ ಊಟ ಮತ್ತು ವಸತಿ ವ್ಯವಸ್ಥೆ ಮಾಡಲಾಗುತ್ತಿದ್ದು, ಇಂತಹ ಸಾವಿರಾರು ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡಲಾಗುತ್ತಿರುವುದು ಶ್ಲಾಘನೀಯ ಎಂದರು. ಸಾಮಾಜಿಕ ನ್ಯಾಯಕ್ಕಾಗಿ ಸುತ್ತೂರು ಮಠ ಮತ್ತು ಸಿದ್ದಗಂಗಾ ಮಠವನ್ನು ಶ್ಲಾಘಿಸಿದ ರಾಜ್ಯಪಾಲರು, ಮಠಗಳು 100 ವರ್ಷಗಳಿಂದ ಅಕ್ಷರ ದಾಸೋಹ, ಅನ್ನ ದಾಸೋಹ ಮತ್ತು ಆರೋಗ್ಯ ದಾಸೋಹವನ್ನು ಆಚರಿಸುತ್ತಿವೆ. ಆಧ್ಯಾತ್ಮಿಕ ನಂಬಿಕೆಗಳನ್ನು ಎತ್ತರದಲ್ಲಿ ಇಟ್ಟುಕೊಂಡರೆ, ಜೀವನದಲ್ಲಿ ಎಲ್ಲವನ್ನೂ ಜಯಿಸಬಹುದು. ಎಂಬು ದನ್ನು ತಾವು ನಂಬಿರುವುದಾಗಿ ತಿಳಿಸಿದರು.

ಸುತ್ತೂರು ಮಠವು ಸಾಮಾಜಿಕ, ಆರ್ಥಿಕ ಮತ್ತು ಪರಿವರ್ತನೆ, ಸಾಮಾಜಿಕ ಸಮಾನತೆ ಜ್ಞಾನೋದಯಕ್ಕಾಗಿ ಅಮೂಲ್ಯ ಶಿಕ್ಷಣ ನೀಡುತ್ತಿದೆ. ಜೆಎಸ್‌ಎಸ್ ವಿದ್ಯಾ ಪೀಠವು ಶಾಲಾ–ಕಾಲೇಜುಗಳಿಗೆ ಅಕ್ಷರ ದಾಸೋಹ, ವಿದ್ಯಾರ್ಥಿಗಳಿಗೆ ಅನ್ನದಾಸೋಹ, ಸಾರ್ವಜನಿಕರಿಗೆ ಆರೋಗ್ಯ ಸೇವೆ ನೀಡುತ್ತಿರುವುದನ್ನು ಶ್ಲಾಘಿಸಿದರು. ಸಾನ್ನಿಧ್ಯ ವಹಿಸಿದ್ದ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮತ್ತು ಶ್ರೀ ಸಿದ್ದಲಿಂಗ ಸ್ವಾಮೀಜಿ ಮಾತನಾಡಿ, ಡಾ.ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಮಾತೃ ವಾತ್ಸಲ್ಯದ ಮತ್ತೊಂದು ಹೆಸರಾಗಿದ್ದರು. ಪರಂಪರೆ, ಆಧುನಿಕ ಯುಗದ ಅಗತ್ಯಗಳಿಗೆ ಸ್ಪಂದಿಸಿದವರು. ಸುತ್ತೂರು ಮಠದ ದೃಷ್ಟಿಕೋನವನ್ನು ಬದಲಾಯಿಸಲು ಕಾರಣರಾಗಿದ್ದರು. ಇಂದು ಮಠವು ಆಹಾರ, ವಸತಿ, ಶಿಕ್ಷಣ ಮತ್ತು ಸಾಮಾಜಿಕ ಕಲ್ಯಾಣಕ್ಕೆ ಒತ್ತು ನೀಡಿದೆ. ಇದೇ ರೀತಿಯ ಬದಲಾವಣೆ ಗಳನ್ನು ಸಿದ್ದಗಂಗಾ ಮಠಕ್ಕೆ ಶ್ರೀ ಶಿವಕುಮಾರ ಸ್ವಾಮೀಜಿ ನೀಡಿದ್ದರು. ಈ ಇಬ್ಬರು ಸಮಾಜ ಸುಧಾರಕರು ಎಂದರು. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸುತ್ತೂರು ಮಠಕ್ಕೆ ಕಳಿಸಿದ್ದ ಸಂದೇಶ ವಾಚಿಸಿದರು. ಹಂಗಾಮಿ ಮೇಯರ್ ಸುನಂದಾ ಪಾಲ ನೇತ್ರ, ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ಎಂ.ಎನ್.ನಂದೀಶ ಹಂಚೆ, ಬಿ.ನಿರಂಜನಮೂರ್ತಿ ಉಪಸ್ಥಿತರಿದ್ದರು.

## ಸಿಎಂ ಬೊಮ್ಮಾಯಿಗೆ ವರಿಷ್ಠರ ಬುಲಾವ್

ಇದಾದ ನಂತರ ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಸಂತೋಷ್ ಕಳೆದ ಎರಡು ದಿನಗಳಲ್ಲಿ ಮುಖ್ಯಮಂತ್ರಿಯವರನ್ನು ಪ್ರತ್ಯೇಕವಾಗಿ ಎರಡು ಬಾರಿ ಭೇಟಿ ಮಾಡಿ, ಮುಖಾಮುಖಿ ಚರ್ಚೆ ಮಾಡಿದ್ದಾರೆ. ಉಭಯ ನಾಯಕರು ನಡೆಸಿರುವ ಮಾತುಕತೆ ಗೌಪ್ಯವಾಗಿಯೇ ಉಳಿದಿದೆ. ಆದರೆ ಎಲ್ಲವೂ ಚುನಾವಣಾ ತಯಾರಿಗಾಗಿಯೇ ಎನ್ನಲಾಗಿದೆ. ಸಂಘ ಪರಿವಾರ ಕೆಲವು ಸಲಹೆ ಸೂಚನೆಗಳನ್ನು ನೀಡಿದ ಆಧಾರದ ಮೇಲೆ ಇಂದು ರಾಜ್ಯ ಬಿಜೆಪಿ ಪದಾಧಿಕಾರಿಗಳ ಸಭೆಯಲ್ಲೂ ಕೆಲವು ಮಹತ್ತರ ತೀರ್ಮಾನ ಕೈಗೊಂಡು, ಸಂಘಟನೆಗೆ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ.

## ಬಿಜೆಪಿ ಕಾರ್ಯಕರ್ತರ ಘೇರಾವ್

'ಗೋ–ಬ್ಯಾಕ್ ಸಿದ್ದರಾಮಯ್ಯ' ಎಂದು ಘೋಷಣೆ ಕೂಗಿದ್ದಲ್ಲದೇ ಸ್ಥಳದಲ್ಲಿ ಅಳವಡಿಸಿದ್ದ ಸಿದ್ದರಾಮಯ್ಯ ಅವರ ಬ್ಯಾನರ್ ಅನ್ನು ಹರಿದು ಆಕ್ರೋಶ ವ್ಯಕ್ತಪಡಿಸಿದರು. ಸಿದ್ದರಾಮಯ್ಯ ಅವರ ಕಾರು ಆಗಮಿಸುತ್ತಿದ್ದಂತೆಯೇ ಪೊಲೀಸರು ಅಳವಡಿಸಿದ್ದ ಬ್ಯಾರಿಕೇಡ್‌ಗಳನ್ನು ತಳ್ಳಿ ಕಾರಿಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದ ಕಾರ್ಯಕರ್ತರು, ಅವರ ಕಾರಿನ ಮೇಲೆ ಮೊಟ್ಟೆಗಳನ್ನು ಎಸೆದರಾದರೂ, ಅದು ಕಾರಿಗೆ ಬೀಳುವ ಬದಲು ಸ್ಥಳದಲ್ಲಿದ್ದ ಪತ್ರಿಕಾ ಛಾಯಾಗ್ರಾಹಕರೊಬ್ಬರ ಮೇಲೆ ಬಿತ್ತು.

ಬಿಜೆಪಿ ಹಾಗೂ ಹಿಂದೂ ಸಂಘಟನೆ ಕಾರ್ಯಕರ್ತರು ಪ್ರತಿಭಟನೆ ನಡೆಸುತ್ತಿದ್ದಂತೆಯೇ ಮಂಗಳೂರು ರಸ್ತೆ ಕಡೆಯಿಂದ ಕಾಂಗ್ರೆಸ್ ಧ್ವಜ ಹಿಡಿದು ಕೆಪಿಸಿಸಿ ವಕ್ತಾರ ಎ.ಎಫ್. ಪೊನ್ನಣ್ಣ ನೇತೃತ್ವದಲ್ಲಿ ಆಗಮಿಸಿದ ಕಾಂಗ್ರೆಸ್ ಕಾರ್ಯಕರ್ತರು 'ಸಿದ್ದು...ಸಿದ್ದು....' ಎಂದು ಘೋಷಣೆ ಕೂಗಿದ್ದಲ್ಲದೇ, ಬಿಜೆಪಿ ಸರ್ಕಾರದ ವಿರುದ್ಧವೂ ಘೋಷಣೆ ಕೂಗಿದರು. ಸಿದ್ದರಾಮಯ್ಯ ಕಾರಿನ ಕಡೆ ಬಿಜೆಪಿ ಕಾರ್ಯಕರ್ತರು ಬಾರದಂತೆ ಪ್ರತಿರೋಧ ಒಡ್ಡಿದರು. ಈ ವೇಳೆ ಕಾಂಗ್ರೆಸ್ ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ಘರ್ಷಣೆ ಉಂಟಾಗುವ ಪರಿಸ್ಥಿತಿ ನಿರ್ಮಾಣವಾಯಿತಾದರೂ, ಪೊಲೀಸರು ಹರಸಾಹಸ ಪಟ್ಟು ಪರಿಸ್ಥಿತಿ ನಿಯಂತ್ರಿಸಿದರು. ಪೊಲೀಸ್ ಭದ್ರತೆಯೊಂದಿಗೆ ಸಿದ್ದರಾಮಯ್ಯ ಸುದರ್ಶನ ಅತಿಥಿ ಗೃಹಕ್ಕೆ ತೆರಳಿದ ನಂತರವೂ ಬಿಜೆಪಿ ಕಾರ್ಯಕರ್ತರು ಜನರಲ್ ತಿಮ್ಮಯ್ಯ ವೃತ್ತದಲ್ಲಿ ಪ್ರತಿಭಟನೆ ಮುಂದುವರೆಸಿ ಸಿದ್ದರಾಮಯ್ಯ ಕೊಡಗಿನಿಂದ ಹೊರ ಹೋಗಬೇಕು ಎಂದು ಆಗ್ರಹಿಸಿದರು. ಈ ವೇಳೆ ಎ.ಎಸ್.ಪೊನ್ನಣ್ಣ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಮೈಸೂರು ರಸ್ತೆಯಲ್ಲಿ ಕುಳಿತು ಪ್ರತಿಭಟನೆ ಆರಂಭಿಸಿದರು. ಮಾಜಿ ಮುಖ್ಯಮಂತ್ರಿಗಳು ಜಿಲ್ಲೆಗೆ ಆಗಮಿಸುವಾಗ ಪೊಲೀಸರು ಸೂಕ್ತ ಬಂದೋಬಸ್ತ್ ಮಾಡಿಲ್ಲ. ಅವರಿಗೆ ರಕ್ಷಣೆ ನೀಡುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ ಎಂದು ಆರೋಪಿಸಿದ ಪೊನ್ನಣ್ಣ, ಬಿಜೆಪಿ ಕಾರ್ಯಕರ್ತರನ್ನು ಹಿಂದಕ್ಕೆ ಕಳುಹಿಸಬೇಕು ಎಂದು ಆಗ್ರಹಿಸಿದರು. ಈ ವೇಳೆ ಬಿಜೆಪಿ ಕಾರ್ಯಕರ್ತರೂ ಕೂಡ ಸಿದ್ದರಾಮಯ್ಯ ಕೊಡಗಿನಿಂದ ಹೊರ ಹೋಗಲಿ ಎಂದು ಘೋಷಣೆ ಕೂಗಿದರು. ಕಾಂಗ್ರೆಸ್ ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ಘೋಷಣೆಗಳ ಸ್ಪರ್ಧೆಯೇ ನಡೆಯಿತು. ಪರಿಸ್ಥಿತಿಯ ಗಂಭೀರತೆ ಅರಿತು ಸ್ಥಳಕ್ಕೆ ಆಗಮಿಸಿದ ಜಿಲ್ಲಾ ಎಸ್ಪಿ ಎಂ.ಎ.ಅಯ್ಯಪ್ಪ ಉಭಯ ಪಕ್ಷದವರನ್ನು ಚರ್ಚಿಸಿ ಪರಿಸ್ಥಿತಿ ನಿಯಂತ್ರಿಸಿದರು. ಸಿದ್ದರಾಮಯ್ಯ ಹೋದರು ಎಂದು ಹೇಳುತ್ತಾ ಹರ್ಷೋದ್ಗಾರದೊಂದಿಗೆ ಬಿಜೆಪಿ ಕಾರ್ಯಕರ್ತರು ಸ್ಥಳದಿಂದ ತೆರಳಿದರು.

ತಿತಿಮತಿಯಲ್ಲಿ ಕೂಡ ಸಿದ್ದರಾಮಯ್ಯ ಅವರಿಗೆ ಬಿಜೆಪಿ ಕಾರ್ಯಕರ್ತರು ಯುವ ಮೋರ್ಚಾ ಜಿಲ್ಲಾಧ್ಯಕ್ಷ ದರ್ಶನ್ ಜೋಯಪ್ಪ ನೇತೃತ್ವದಲ್ಲಿ ಘೇರಾವ್ ಹಾಕಿ, ಕಪ್ಪು ಬಾವುಟ ಪ್ರದರ್ಶಿಸಿದರು. ಸಿದ್ದರಾಮಯ್ಯ ಕಾರನ್ನು ಅಡ್ಡಗಟ್ಟಿ ವೀರ್ ಸಾವರ್ಕರ್ ಅವರ ಭಾವಚಿತ್ರವನ್ನು ಕಾರಿನೊಳಗೆ ಎಸೆದರು. 'ಗೋ ಬ್ಯಾಕ್ ಸಿದ್ದೂಖಾನ್, ಗೋ ಬ್ಯಾಕ್ ಸಿದ್ದರಾಮಯ್ಯ' ಎಂದು ಘೋಷಣೆ ಕೂಗಿದರು. ಅತ್ತ ಗುಡ್ಡೆಹೊಸೂರಿನಲ್ಲೂ ಸಿದ್ದರಾಮಯ್ಯ ಅವರ ಕಾರನ್ನು ಅಡ್ಡಗಟ್ಟಿದ ಬಿಜೆಪಿ ಕಾರ್ಯಕರ್ತರು ಕಾರಿಗೆ ಮೊಟ್ಟೆ ಎಸೆದು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಪೊಲೀಸರು ಕೆಲ ಬಿಜೆಪಿ ಕಾರ್ಯಕರ್ತರನ್ನು ವಶಕ್ಕೆ ಪಡೆದು ಭದ್ರತೆಯೊಂದಿಗೆ ಸಿದ್ದರಾಮಯ್ಯ ಅವರನ್ನು ಕರೆದೊಯ್ದರು.

**ಇಂದು ಎಸ್ಪಿ ಕಚೇರಿ ಮುಂದೆ ಕಾಂಗ್ರೆಸ್ ಪ್ರತಿಭಟನೆ:** ಮಳೆ ಹಾನಿ ಪ್ರದೇಶ ವೀಕ್ಷಿಸಲು ಕೊಡಗಿಗೆ ಆಗಮಿಸಿದ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರಿಗೆ ಪೊಲೀಸರು ಸೂಕ್ತ ರಕ್ಷಣೆ ನೀಡಲಿಲ್ಲ ಎಂದು ಆರೋಪಿಸಿ ನಾಳೆ (ಆ.19) ಮಧ್ಯಾಹ್ನ 12 ಗಂಟೆಗೆ ಎಸ್ಪಿ ಕಚೇರಿ ಎದುರು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜಾ ಉತ್ತಪ್ಪ ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಸಿದ್ದರಾಮಯ್ಯ ಕೊಡಗಿಗೆ ಭೇಟಿ ನೀಡಿದ ವೇಳೆ ಬಿಜೆಪಿ ಹಾಗೂ ಕೆಲವು ಸಂಘಟನೆಗಳ ಕಾರ್ಯಕರ್ತರು ಪ್ರಜಾಪ್ರಭುತ್ವಕ್ಕೆ ವಿರೋಧ ರೀತಿಯಲ್ಲಿ ವರ್ತಿಸಿದ್ದಾರೆ. ಅಹಿತಕರ ವಾತಾವರಣ ಸೃಷ್ಟಿಸಿ ಪ್ರಜಾಪ್ರಭುತ್ವಕ್ಕೆ ಅಗೌರವ ತೋರಿದ ಆಡಳಿತ ಪಕ್ಷದವರ ಮುಂದಾಟವನ್ನು ನೋಡುತ್ತಾ ಕೈಚೆಲ್ಲಿ ಕುಳಿತ್ತಿದ್ದ ಪೊಲೀಸರ ಕ್ರಮದ ವಿರುದ್ಧ ಪ್ರತಿಭಟನೆ ನಡೆಸುತ್ತಿರುವುದಾಗಿ ಅವರು ಹೇಳಿದ್ದಾರೆ.

## ಅದನ್ನೆಲ್ಲಾ ನಾವು ಮಾಡಿಕೊಂಡೇ ಬಂದಿರೋದು

ಅದನ್ನೆಲ್ಲಾ ನಾವು ಮಾಡಿಕೊಂಡೇ ಬಂದಿರೋದು. ನಾವು ಹೋರಾಟ ಮಾಡೋಕೆ ಶುರು ಮಾಡಿದರೆ ಸಿಎಂ ಎಲ್ಲೂ ಓಡಾಡೋಕೆ ಆಗಲ್ಲ ಎಂದು ಎಚ್ಚರಿಕೆ ನೀಡಿದರು.

ಮೊಟ್ಟೆ ಎಸೆತ ಹೇಡಿಗಳ ಕೃತ್ಯವಾಗಿದೆ. ಟಿಪ್ಪು ವಿಚಾರನೂ ಇಲ್ಲ, ಏನೂ ಇಲ್ಲ, ಟಿಪ್ಪು ಜಯಂತಿ ಆದ್ಮೇಲೆ ನಾನು ಕೊಡಗಿಗೆ ಬಂದಿಲ್ವಾ, ಕಳಪೆ ಕೆಲಸ ನನಗೆ ಗೊತ್ತಾಗದಿರಲಿ ಎಂದು ಈ ರೀತಿ ಪ್ರತಿಭಟನೆ ಮಾಡಿದ್ದಾರೆ. ಹತಾಶರಾಗಿ ಈ ರೀತಿ ಮಾಡುತ್ತಿದ್ದಾರೆ. ಇವರಿಗೆ ಸರ್ಕಾರ ನಡೆಸಲು ಬರುವುದೇ ಇಲ್ಲ ಎಂದು ಕಿಡಿಕಾರಿದರು.

ರಾಜ್ಯದ ಹಲವು ಜಿಲ್ಲೆಗಳಲ್ಲಿ ವಾಡಿಕೆ ಮಳೆಗಿಂತ ಹೆಚ್ಚು ಮಳೆ ಬಿದ್ದಿದೆ. ಕರ್ನಾಟಕದಲ್ಲಿ 5 ಲಕ್ಷದ 23 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಷ್ಟ ಆಗಿದೆ. ಇವತ್ತಿನವರೆಗೆ ಸರ್ವೆ ಮಾಡಿ ಪರಿಹಾರ ಕೊಡುವ ಪ್ರಯತ್ನವನ್ನು ಸರ್ಕಾರ ಮಾಡಿಲ್ಲ. ರಾಜ್ಯ ಬಿಜೆಪಿ ಸರ್ಕಾರಕ್ಕೆ ಮಳೆಹಾನಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಕೊಡಗಿನ ಮಳೆಹಾನಿ ಆದ ಪ್ರದೇಶಗಳಿಗೆ ಭೇಟಿ ಕೊಟ್ಟು ಪರಿಶೀಲನೆ ಮಾಡಿದ್ದೇನೆ. 2018, 19, 20ರಲ್ಲಿ ಆದ ಮಳೆಯ ಹಾನಿಗೆ ಸರ್ಕಾರ ಇನ್ನೂ ಕೂಡ ಪರಿಹಾರ ನೀಡಿಲ್ಲ. ಸೇತುವೆ ತಡೆಗೋಡೆಗಳ ಕಾಮಗಾರಿ ತೀರಾ ಕಳಪೆಯಾಗಿ ಮಾಡಿದ್ದಾರೆ. ಅದಕ್ಕೆ ಅವೆಲ್ಲಾ ಹೀಗಾಗಿವೆ ಎಂದು ಬಿಜೆಪಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

## ಒಳ್ಳೆಯ ಸಂಸ್ಕೃತಿಯಲ್ಲ, ಆದರೆ...

ಅವರೇ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದರು. ಕೊಡಗು ಶಾಂತಿಯುತ ಜಿಲ್ಲೆ. 2015ರಲ್ಲಿ ಟಿಪ್ಪು ಜಯಂತಿ ಆಚರಿಸಲು ಯಾರು ಕೇಳಿದ್ದರು? ಎಂದು ಪ್ರಶ್ನಿಸಿದ ಅವರು, ಟಿಪ್ಪು ಬಗ್ಗೆ ಕೊಡಗಿನಲ್ಲಿ ಯಾವ ಅಭಿಪ್ರಾಯವಿದೆ ಎಂಬುದು ಸಿದ್ದರಾಮಯ್ಯನವರಿಗೆ ಗೊತ್ತಿಲ್ಲವೇ? ಟಿಪ್ಪುವನ್ನು 38 ಬಾರಿ ಕೊಡವರು ಓಡಿಸಿದ್ದರು. ನೇರವಾಗಿ ಯುದ್ಧ ಮಾಡಿದರೆ ಗೆಲ್ಲಲು ಸಾಧ್ಯವಿಲ್ಲವೆಂದು ದೇವಟ್ಟಿ ಪರಂಬುಗೆ ಕೊಡವರನ್ನು ಕರೆಸಿಕೊಂಡು ನಿರಾಯುಧ ಪಾಣಿಗಳಾಗಿದ್ದ ಅವರನ್ನು ಮೋಸದಿಂದ ಮಾರಣ ಹೋಮ ಮಾಡಲಾಯಿತು. ಹೀಗಾಗಿ ಕೊಡವರಿಗೆ ಬಹಳ ನೋವಿದೆ. ಈ ಕಾರಣದಿಂದಲೇ ಕೊಡವರು ತಮ್ಮ ಮನೆಯ ನಾಯಿಗೂ ಕೂಡ ಟಿಪ್ಪು ಹೆಸರಿಡುತ್ತಾರೆ ಎಂದ ಪ್ರತಾಪ್ ಸಿಂಹ, ಈ ಹಿಂದೆ ಸಿದ್ದರಾಮಯ್ಯನವರು ನಡೆದುಕೊಂಡ ರೀತಿಯಿಂದ ಈ ಪರಿಸ್ಥಿತಿ ಎದುರಿಸಬೇಕಾಯಿತು ಎಂದರು.

# ಗಜಪಡೆಯ ನಾಯಕ ಅಭಿಮನ್ಯುಗೆ ಭಾರ ಹೊರುವ ತಾಲೀಮು ಆರಂಭ



### 550 ಕೆ.ಜಿ ಭಾರ ಹೊತ್ತು 5 ಕಿ.ಮೀ. ಅಂತರವನ್ನು 1.15 ಗಂಟೆಯಲ್ಲೇ ಕ್ರಮಿಸಿದ ಅಭಿಮನ್ಯು

ಮೈಸೂರು, ಆ.18(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಗಮಿಸಿರುವ ಗಜಪಡೆಗೆ ಭಾರ ಹೊರುವ ತಾಲೀಮು ಆರಂಭಿಸಲಾಗಿದ್ದು, ಮೊದಲ ದಿನವೇ ಅಂಬಾರಿ ಆನೆ ಅಭಿಮನ್ಯು 300 ಕೆಜಿ ಮರಳಿನ ಮೂಟೆ ಸೇರಿದಂತೆ 550 ಕೆಜಿ ಭಾರವನ್ನು ಹೊತ್ತು ಸರಾಗವಾಗಿ ಸಾಗುವ ಮೂಲಕ ತನ್ನ ಸಾಮರ್ಥ್ಯ ಪ್ರದರ್ಶಿಸಿ, ಎಲ್ಲರಿಂದ ಮೆಚ್ಚುಗೆ ಗಳಿಸಿದ್ದಾನೆ.



ಪ್ರಸಕ್ತ ಸಾಲಿನ ದಸರಾ ಮಹೋತ್ಸವ ಸೆ.26ರಂದು ಆರಂಭವಾಗಲಿದ್ದು, ಅ.5ರಂದು ಜಂಬೂಸವಾರಿ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಆ.7ರಂದು ಮೈಸೂರಿಗೆ ಆಗಮಿಸಿದ್ದ ಮೊದಲ ತಂಡದ ಗಜಪಡೆ ಆ.10ರಂದು ಅರಮನೆ ಅಂಗಳಕ್ಕೆ ಪ್ರವೇಶಿಸಿದ್ದವು. ಆ.14ರಿಂದ ಜಂಬೂ ಸವಾರಿ ಮಾರ್ಗದಲ್ಲಿ ತಾಲೀಮು ಆರಂಭಿಸಿದ್ದ ಗಜಪಡೆಗೆ ಇಂದಿನಿಂದ ಅಧಿಕೃತವಾಗಿ ಭಾರ ಹೊರುವ ತಾಲೀಮು ಆರಂಭಿಸಲಾಗಿದೆ. ಮೊದಲ ದಿನವಾದ ಇಂದು ಅಭಿಮನ್ಯು ಭಾರ ಹೊತ್ತು ಸಾಗಿದ.

**1.15 ಗಂಟೆಯಲ್ಲೇ ತಲುಪಿದ ಧೀರ:** ಅರಮನೆ ಆವರಣದಿಂದ ಬನ್ನಿಮಂಟಪದ ಪಂಜಿನ ಕವಾಯತ್ ಮೈದಾನ 5 ಕಿ.ಮಿ ಅಂತರದಲ್ಲಿದ್ದು, ಅಭಿಮನ್ಯು 300 ಕೆಜಿ ತೂಕದ ಮರಳಿನ ಮೂಟೆ, 250 ಕೆಜಿ ತೂಕದ ಗಾದಿ, ನಮ್ದಾ, ತೊಟ್ಟಿಲು ಸೇರಿದಂತೆ 550 ಕೆಜಿ ಭಾರ ಹೊತ್ತಿದ್ದ ಅಭಿಮನ್ಯು ಬೆಳಗ್ಗೆ 8.15ಕ್ಕೆ ಅರಮನೆ ಆವರಣದಿಂದ ಹೊರಟು ಕೆ.ಆರ್.ವೃತ್ತ, ಸಯ್ಯಾಜಿರಾವ್ ರಸ್ತೆ, ಬಂಬೂಬಜಾರ್, ಹೈವೇ ವೃತ್ತದ ಮೂಲಕ ಬನ್ನಿಮಂಟಪದ ಪಂಜಿನ ಕವಾಯತ್ ಮೈದಾನದಕ್ಕೆ ಬೆಳಗ್ಗೆ 10 ಗಂಟೆಗೆ ತಲುಪಿತು. 5 ಕಿಮಿ ದೂರವನ್ನು ಅಭಿಮನ್ಯು 1.15 ಗಂಟೆಯಲ್ಲೇ ಕ್ರಮಿಸುವ ಮೂಲಕ ತನ್ನ ಭುಜಬಲದ ಸಾಮರ್ಥ್ಯವನ್ನು ಸಾಬೀತು ಮಾಡಿದ.

**ಪೂಜೆ:** ಭಾರದ ತಾಲೀಮು ಆರಂಭಿಸಿರುವ ಮುನ್ನ ಸಂಪ್ರದಾಯದಂತೆ ಪೂಜೆ ಸಲ್ಲಿಸಲಾಯಿತು. ಅರಮನೆ ಆವರಣದಲ್ಲಿರುವ ಕೋಡಿ ಸೋಮೇಶ್ವರ ದೇವಾಲಯದ ಬಳಿ ಇಂದು ಬೆಳಗ್ಗೆ 7.45ರಲ್ಲಿ ಅರ್ಚಕ ಎಸ್.ವಿ.ಪ್ರಹ್ಲಾದ್‌ರಾವ್ ಅವರಿಂದ ಅರಣ್ಯ ಇಲಾಖೆ ವತಿಯಿಂದ ಗಜಪಡೆ, ಗಾದಿ, ನಮ್ದಾ, ತೊಟ್ಟಿಲಿಗೆ ಪೂಜೆ ಸಲ್ಲಿಸಲಾಯಿತು. ಡಿಸಿಎಫ್ ಡಾ.ವಿ.ಕರಿಕಾಳನ್ ಆನೆಗಳಿಗೆ ಪುಷ್ಪಾರ್ಚನೆ ಮಾಡಿದರು. ಬಳಿಕ ಹಣ್ಣು ಮತ್ತು ಕಬ್ಬನ್ನು ನೀಡಿದರು.

ಬಳಿಕ ಅಭಿಮನ್ಯು ಮೇಲೆ ನಮ್ದಾ ಹಾಗೂ ಗಾದಿಯನ್ನಿಟ್ಟು ಕಟ್ಟಲಾಯಿತು. ಬಳಿಕ ತೊಟ್ಟಿಲು ಕಟ್ಟಿ ಅದರ ಮೇಲೆ ಮರಳಿನ ಮೂಟೆ ಇಡಲಾಯಿತು. ಕುಮ್ಕಿ ಆನೆಗಳಾದ ಚೈತ್ರ ಹಾಗೂ ಕಾವೇರಿಯೊಂದಿಗೆ ಕೋಟೆ ಆಂಜನೇಯಸ್ವಾಮಿ ದೇವಾಲಯದ ಗೇಟ್‌ನಿಂದ ಗಾಂಭೀರ್ಯವಾಗಿ ಹೆಜ್ಜೆ ಹಾಕಿದ ಅಭಿಮನ್ಯು ಎಲ್ಲರ ಗಮನ ಸೆಳೆಯಿತು. ಕೆ.ಆರ್.ವೃತ್ತದಿಂದ ಬನ್ನಿಮಂಟಪದವರೆಗೂ ಸಾಗಿದ ತಾಲೀಮಿನಲ್ಲಿ ಅರ್ಜುನ, ಗೋಪಾಲಸ್ವಾಮಿ, ಮಹೇಂದ್ರ, ಭೀಮ, ಧನಂಜಯ, ಚೈತ್ರಾ, ಕಾವೇರಿ, ಲಕ್ಷ್ಮೀ ಆನೆಗಳು ಸಾಗಿದವು.

**ಮಹೇಂದ್ರನ ಉತ್ತಮ ನಡೆ:** ಇದೇ ಮೊದಲ ಬಾರಿಗೆ ದಸರಾ ಉತ್ಸವದಲ್ಲಿ ಪಾಲ್ಗೊಳ್ಳುತ್ತಿರುವ ಮಹೇಂದ್ರ, ಎರಡನೇ ಬಾರಿ ಪಾಲ್ಗೊಳ್ಳುತ್ತಿರುವ ಭೀಮ, ಲಕ್ಷ್ಮೀ ಆನೆ ನಗರ ವಾತಾವರಣಕ್ಕೆ ಪೂರ್ಣ ಪ್ರಮಾಣದಲ್ಲಿ ಹೊಂದಿಕೊಂಡಿದ್ದು, ತಾಲೀಮಿನಲ್ಲಿ ಭಯ, ಆತಂಕವಿಲ್ಲದೇ ಹೆಜ್ಜೆ ಹಾಕಿದವು. ತಾಲೀಮಿನ ಮಾರ್ಗದುದ್ದಕ್ಕೂ ರಸ್ತೆಯಲ್ಲಿ ವಾಹನ ಸಂಚಾರವಿದ್ದರೂ ಹೊಸ ಆನೆಗಳಾದಿಯಾಗಿ ಯಾವುದೇ ಆನೆಯೂ ಭಯಪಡದೆ ಧೈರ್ಯದಿಂದ ಹೆಜ್ಜೆ ಇಡುವ ಮೂಲಕ ಅಧಿಕಾರಿಗಳಲ್ಲಿ ಭರವಸೆ ಮೂಡಿಸಿದವು.

### 5 ಗಂಡಾನೆಗಳಿಗೂ ತಾಲೀಮು

“ಇಂದು ಆನೆಗಳಿಗೆ ಭಾರ ಹೊರುವ ತಾಲೀಮು ಆರಂಭಿಸಲಾಗಿದೆ. ಇಂದು 300 ಕೆ.ಜಿ ಮರಳಿನ ಮೂಟೆ ಇಟ್ಟು ತಾಲೀಮು ನಡೆಸಲಾಗುತ್ತಿದೆ. ಮೊದಲ ತಂಡದಲ್ಲಿ ಆಗಮಿಸಿರುವ 6 ಗಂಡಾನೆಗಳಲ್ಲಿ ಅರ್ಜುನ ಆನೆಯನ್ನು ಹೊರತುಪಡಿಸಿ ಉಳಿದ 5 ಗಂಡಾನೆಗಳಿಗೆ ಭಾರ ಹೊರಿಸುವ ತಾಲೀಮನ್ನು ರೊಟೇಷನ್ ಆಗಿ ನಡೆಸಲಾಗುತ್ತದೆ. ದಿನಕ್ಕೊಂದು ಆನೆಗೆ ಭಾರ ಹೊರಿಸಲಾಗುತ್ತದೆ. 300 ಕೆಜಿ ಮರಳಿನ ಮೂಟೆ, ಗಾದಿ, ನಮ್ದಾ, ತೊಟ್ಟಿಲು ಸೇರಿದಂತೆ ಇಂದು 550 ಕೆಜಿ ತೂಕವನ್ನು ಅಭಿಮನ್ಯು ಹೊತ್ತಿದೆ. ಅದನ್ನು ಸರಾಗವಾಗಿ ಹೊತ್ತೊಯ್ದಿದೆ. ದಾರಿಯುದ್ದಕ್ಕೂ ಆನೆಗಳ ವರ್ತನೆಯನ್ನು ಸೂಕ್ಷ್ಮವಾಗಿ ಗಮನಿಸಲಾಗಿದೆ. ಎಲ್ಲಾ ಆನೆಗಳೂ ನಿರೀಕ್ಷೆಗೂ ಮೀರಿ ವರ್ತಿಸಿವೆ. ಈ ತಿಂಗಳ ಕೊನೆವರೆಗೂ ಮರಳಿನ ಮೂಟೆ ಹೊರಿಸಿ ತಾಲೀಮು ನಡೆಸಲಾಗುತ್ತದೆ. ಸೆ.1 ಅಥವಾ 2ರಿಂದ ಮರದ ಅಂಬಾರಿ ಹೊರಿಸಿ ತಾಲೀಮು ನಡೆಸಲಾಗುತ್ತದೆ. ಹಂತ ಹಂತವಾಗಿ ಭಾರವನ್ನು ಹೆಚ್ಚಿಸಿ, ಅಂತಿಮವಾಗಿ 750 ಕೆಜಿ ಭಾರ ಹೊರುವ ತಾಲೀಮು ನಡೆಸಲಾಗುತ್ತದೆ. ಸೆಪ್ಟೆಂಬರ್ ಮೊದಲ ವಾರದಲ್ಲಿ ಎರಡನೇ ಹಂತದ ಆನೆ ಕರೆತರಲಾಗುತ್ತದೆ. ಈಗಾಗಲೇ ಪೌಷ್ಟಿಕ ಆಹಾರ ನೀಡಲಾಗುತ್ತಿದ್ದು ಗಜಪಡೆಯ ಭುಜದ ಬಲವನ್ನು ಹೆಚ್ಚಿಸಲು ಅರಣ್ಯ ಇಲಾಖೆ ಕ್ರಮ ಕೈಗೊಂಡಿದೆ. – **ಡಿಸಿಎಫ್ ಡಾ. ವಿ.ಕರಿಕಾಳನ್**

**ಬನ್ನಿಮಂಟಪದಲ್ಲಿ ವಿಶ್ರಾಂತಿ:** ಪಂಜಿನ ಕವಾಯತ್ ಮೈದಾನ ತಲುಪಿದ ಕೂಡಲೇ ಅಭಿಮನ್ಯುವಿನ ಮೇಲೆ ಇಡಲಾಗಿದ್ದ ಮರಳಿನ ಮೂಟೆಯನ್ನು ಕೆಳಗಿಳಿಸಲಾಯಿತು. ಬಳಿಕ ಗಜಪಡೆಗೆ ವಿಶ್ರಾಂತಿ ನೀಡಲಾಯಿತು. ಮೈದಾನದಲ್ಲಿ ಆನೆಗಳಿಗಾಗಿಯೇ ನಿರ್ಮಿಸಿರುವ ನೀರಿನ ತೊಟ್ಟಿಯಲ್ಲಿ ತುಂಬಿದ್ದ ನೀರನ್ನು ಕುಡಿದು ಆನೆಗಳು ದಣಿವಾರಿಸಿಕೊಂಡವು. ನಂತರ ಮೈಮೇಲೆ ನೀರನ್ನು ಎರಚಿಸಿಕೊಂಡು ಸಂಭ್ರಮಿಸಿದವು. ಇದೇ ವೇಳೆ ಮಾವುತ ಮತ್ತು ಕಾವಾಡಿಗಳಿಗಾಗಿ ಉಪಹಾರದ ವ್ಯವಸ್ಥೆ ಮಾಡಲಾಗಿತ್ತು. ನಂತರ ಬಾರ ಹೊರಿಸದೆ ಅರಮನೆಗೆ ಆನೆಗಳನ್ನು ವಾಪಸ್ಸು ಕರೆತರಲಾಯಿತು.

ಈ ಸಂದರ್ಭದಲ್ಲಿ ಡಿಸಿಎಫ್ ಡಾ.ವಿ.ಕರಿಕಾಳನ್, ಆರ್‌ಎಫ್‌ಓ ಸಂತೋಷ್‌ಕುಮಾರ್, ಡಿಆರ್‌ಎಫ್‌ಓ ಲಕ್ಷ್ಮೀದೇವಿ, ಪಶುವೈದ್ಯ ಡಾ.ಮುಜೀಬ್, ಸಹಾಯಕರಾದ ರಂಗರಾಜು, ಅಕ್ರಮ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಹೆಚ್.ಡಿ.ದೇವೇಗೌಡರು ದಸರಾ ಉದ್ಘಾಟಿಸಲಿ

### ಕರ್ನಾಟಕ ಸೇನಾ ಪಡೆಯಿಂದ ಆಗ್ರಹಿಸಿ ಪ್ರತಿಭಟನೆ



ಮೈಸೂರು, ಆ.18(ಆರ್‌ಕೆಬಿ)– ವಿಶ್ವ ವಿಖ್ಯಾತ ಮೈಸೂರು ದಸರಾ ಕಾರ್ಯಕ್ರಮದ ಉದ್ಘಾಟನೆಗೆ ಈ ಬಾರಿ ಮಾಜಿ ಪ್ರಧಾನಿ, ಕೃಷಿ ನೀರಾವರಿ ತಜ್ಞ, ಪಕ್ಷಾತೀತ ರಾಜಕೀಯ ಮುತ್ಸದ್ದಿ ಹೆಚ್.ಡಿ.ದೇವೇಗೌಡ ಅವರನ್ನು ಆಹ್ವಾನಿಸುವಂತೆ ಕರ್ನಾಟಕ ಸೇನಾ ಪಡೆ ಮೈಸೂರು ಜಿಲ್ಲಾ ಘಟಕ ಮುಖ್ಯಮಂತ್ರಿಗಳನ್ನು ಒತ್ತಾಯಿಸಿದೆ.

ಈ ಸಂಬಂಧ ಗುರುವಾರ ಮೈಸೂರು ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದ ಸೇನಾ ಪಡೆ ಕಾರ್ಯಕರ್ತರು, ರಾಜ್ಯ ಸರ್ಕಾರ ಇದುವರೆಗೆ ದಸರಾ ಉದ್ಘಾಟನೆಗೆ ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ, ಆಧ್ಯಾತ್ಮ, ಪ್ರಗತಿಪರರು, ಕವಿಗಳು, ಬರಹಗಾರರು, ರೈತರಿಂದ ಉದ್ಘಾಟಕರ ಹೆಸರು ಆಯ್ಕೆ ಮಾಡಿದೆ. ಈ ಬಾರಿಯ ನಾಡಹಬ್ಬ ದಸರಾ ಉದ್ಘಾಟನೆಗೆ ಕನ್ನಡದ ಮಣ್ಣಿನ ಮಗ, ರೈತಾಪಿ ಕುಟುಂಬದ ಹೆಮ್ಮೆಯ ಕನ್ನಡಿಗ, ಕರ್ನಾಟಕದ ಏಕೈಕ ಪ್ರಧಾನಮಂತ್ರಿ, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ದೇವೇಗೌಡರನ್ನು ಆಯ್ಕೆ ಮಾಡಬೇಕು ಎಂದು ಆಗ್ರಹಿಸಿದರು.

ಹಿರಿಯ ಪಕ್ಷಾತೀತ ನಾಯಕರಾಗಿ ಕಳೆದ 5 ದಶಕಗಳಿಂದ ಕನ್ನಡ ನಾಡಿನ ನೆಲ, ಜಲ, ಭಾಷೆಗಾಗಿ ತಮ್ಮ ಜೀವನವನ್ನೇ ಸವೆಸಿರುವ, ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ರಾಜ್ಯಕ್ಕೆ ಅನ್ಯಾಯವಾಗುತ್ತಿದ್ದ ಸಂದರ್ಭದಲ್ಲಿ ಸರ್ಕಾರಕ್ಕೆ ಆಪದ್ಬಾಂಧವರಾಗಿ ಸಲಹೆ, ಸೂಚನೆಗಳನ್ನು ನೀಡಿರುವ ಹೆಚ್.ಡಿ.ದೇವೇಗೌಡರು, ಇಡೀ ದೇಶದ ಆಸ್ತಿ. ಹಾಗಾಗಿ ಅವರನ್ನು ದಸರಾ ಉದ್ಘಾಟನೆಗೆ ಆಹ್ವಾನಿಸುವುದರಿಂದ ಕರ್ನಾಟಕ ಮತ್ತು ಕನ್ನಡಿಗರಿಗೆ ಗೌರವ ಸಿಕ್ಕಂತಾಗುತ್ತದೆ ಎಂದು ಜಿಲ್ಲಾಧಿಕಾರಿ ಕಚೇರಿ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಕರ್ನಾಟಕ ಸೇನಾ ಪಡೆ ಮೈಸೂರು ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ ಅಧ್ಯಕ್ಷತೆಯಲ್ಲಿ ನಡೆದ ಪ್ರತಿಭಟನೆಯಲ್ಲಿ ಇ.ಚೇತನ್, ಪ್ರಭುಶಂಕರ, ಗುರುರಾಜ್, ಗಿರೀಶ್‌ಗೌಡ, ಸುಶೀಲ ನಂಜಪ್ಪ, ಸಿ.ಹೆಚ್. ಕೃಷ್ಣಯ್ಯ, ಪದ್ಮ, ಎಳನೀರು ರಾಮಣ್ಣ, ದರ್ಶನ್‌ಗೌಡ ಮಧುವನ ಚಂದ್ರು, ಡಾ.ಶಾಂತರಾಜೇಅರಸ್, ಮಂಜುನಾಥ, ವಿಜಯೇಂದ್ರ, ಬಂಗಾರಪ್ಪ, ಚಂದ್ರಶೇಖರ್ ಎಸ್. ನಾಗಣ್ಣ, ರಾಧಾಕೃಷ್ಣ, ಸ್ವಾಮಿ, ರಾಮ ನಾಯಕ್, ಜಗದೀಶ್ ಗೌಡ, ರವಿ ನಾಯಕ್, ಇನ್ನಿತರರು ಉಪಸ್ಥಿತರಿದ್ದರು.

## ಅರ್ಜಿ ಆಹ್ವಾನ

ಮೈಸೂರು, ಆ. 18 – ಮೈಸೂರಿನ ಲಯನ್ಸ್ ಕ್ಲಬ್ ಆಫ್ ಮೈಸೂರು ಮಿಲೇನಿಯಂ ಮತ್ತು ಸಂಜನಾ ಬಳಗ ಪ್ರತಿಷ್ಠಾನ ಸಹಯೋಗದಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಶೇ. 95ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಂದ ಪ್ರೋತ್ಸಾಹ ಧನಕ್ಕಾಗಿ ಅರ್ಜಿ ಆಹ್ವಾನಿಸಿದೆ. ಅರ್ಹ ವಿದ್ಯಾರ್ಥಿಗಳು ಆ. 25 ರೊಳಗೆ ಅಗತ್ಯ ದಾಖಲಾತಿ ಗಳೊಂದಿಗೆ ಅರ್ಜಿ ಸಲ್ಲಿಸಲು ಕೋರಲಾಗಿದೆ. ವಿವರಗಳಿಗೆ ಮೊ. 9480631186 ಸಂಪರ್ಕಿಸಬಹುದು.

# ಮುಡಾದಲ್ಲಿ ಮುಂದುವರಿದ ತನಿಖೆ

**ತಾಂತ್ರಿಕ ಸಮಿತಿ ಸದಸ್ಯರಿಂದ ದಾಖಲೆ ಪರಿಶೀಲನೆ, ಜೆರಾಕ್ಸ್ ಪ್ರತಿಗಳ ಸಂಗ್ರಹ**

ಮೈಸೂರು, ಆ.18(ಆರ್‌ಕೆ)–ಅನುದಾನ ದುರ್ಬಳಕೆ, ಅಕ್ರಮ, ಅವ್ಯವಹಾರ ನಡೆದಿದೆ ಎಂಬ ದೂರುಗಳ ಹಿನ್ನೆಲೆಯಲ್ಲಿ ಬುಧವಾರದಿಂದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ಕಚೇರಿಯಲ್ಲಿ ತನಿಖೆ ಆರಂಭಿಸಿರುವ ತಾಂತ್ರಿಕ ಸಮಿತಿ ಸದಸ್ಯರು, ಕಡತಗಳಿಂದ ಅಗತ್ಯ ದಾಖಲೆಗಳ ಜೆರಾಕ್ಸ್ ಪ್ರತಿಗಳನ್ನು ಸಂಗ್ರಹಿಸುತ್ತಿದ್ದಾರೆ.

ನಗರ ಮತ್ತು ಗ್ರಾಮಾಂತರ ಯೋಜನಾ ಅಡಿಷನಲ್ ಡೈರೆಕ್ಟರ್ ಟಿ.ವಿ.ಮುರಳಿ ನೇತೃತ್ವದ ತನಿಖಾಧಿಕಾರಿಗಳು ಇಂದೂ ಸಹ ಕಚೇರಿ ಸಭಾಂಗಣಕ್ಕೆ ದೂರುಗಳಿಗೆ ಸಂಬಂಧಿಸಿದ ಕಡತಗಳನ್ನು ತರಿಸಿಕೊಂಡು ಪ್ರತೀ ನೋಟ್‌ಶೀಟ್‌ಗಳನ್ನು ಜಾಲಾಡಿ, ಅಗತ್ಯ ಮಾಹಿತಿಗಳನ್ನು ಗುರುತು ಹಾಕಿಕೊಂಡು, ಪ್ರಮುಖ ಹಾಳೆಗಳನ್ನು ಜೆರಾಕ್ಸ್ ಮಾಡಿಸಿ ಪಡೆಯುತ್ತಿದ್ದಾರಲ್ಲದೆ, ಸಂಬಂಧಪಟ್ಟ ಆಯಾ ವಲಯಾಧಿಕಾರಿಗಳು, ವಿಶೇಷ ತಹಸೀಲ್ದಾರರು, ಇಂಜಿನಿಯರ್‌ಗಳಿಂದ ವಿವರಣೆ ಪಡೆಯುತ್ತಿದ್ದಾರೆ. ಮುಡಾ ನಗರ ಯೋಜಕ ಸದಸ್ಯ (TPM) ಶೇಷ ಅವರು, ತಾಂತ್ರಿಕ ಸಮಿತಿ ಸದಸ್ಯರಿಗೆ ತನಿಖೆ ನಡೆಸಲು ಸಹಕರಿಸುತ್ತಿದ್ದು, ಅಭಿಲೇಖಾಲಯದಿಂದ ಅವರು ಕೇಳಿದ ಮೂಲ ಕಡತಗಳನ್ನು ತರಿಸಿಕೊಟ್ಟು ಸಹಕರಿಸುತ್ತಿದ್ದಾರೆ. ನಾಳೆ(ಆ.20)ಯೂ ತನಿಖಾ ಕಾರ್ಯ ಮುಂದುವರಿಯಲಿದ್ದು, ಅಗತ್ಯವೆನಿಸಿದರೆ ಮತ್ತೊಮ್ಮೆ ತನಿಖಾಧಿಕಾರಿಗಳು ಮೈಸೂರಿಗೆ ಬಂದು ವಿಚಾರಣೆ ನಡೆಸುವರು ಎಂದು ಮುಡಾ ಕಚೇರಿ ಮೂಲಗಳು ತಿಳಿಸಿವೆ.

## ಯುವತಿ ನಾಪತ್ತೆ



ಮೈಸೂರು, ಆ.18–ಯುವತಿ ನಾಪತ್ತೆಯಾಗಿರುವ ಬಗ್ಗೆ ಇಲವಾಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇಲವಾಲ ಗ್ರಾಮದ ಆಸ್ಪತ್ರೆ ರಸ್ತೆ ನಿವಾಸಿ ಸುಬ್ಬಣ್ಣ ನಾಯಕ ಎಂಬುವರ ಪುತ್ರಿ ಎಸ್.ಅನೂಷ(20) ಜುಲೈ 31ರಂದು ರಾತ್ರಿ ಮನೆಯಿಂದ ಹೊರ ಹೋದವಳು ಇನ್ನೂ ವಾಪಸ್ಸಾಗಿಲ್ಲ ಎಂದು ಪೋಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ. ಈಕೆಯ ಬಗ್ಗೆ ಮಾಹಿತಿ ಇರುವವರು ಇಲವಾಲ ಠಾಣೆ ದೂರವಾಣಿ ಸಂಖ್ಯೆ 0821–2402222 ಅಥವಾ ಜಿಲ್ಲಾ ಕಂಟ್ರೋಲ್ ರೂಂ ಸಂಖ್ಯೆ 0821–2444800 ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ಕೋರಿದೆ.

### ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಗಿಡಮೂಲಿಕೋತ್ಸವ

# ಅರಣ್ಯ ಮೂಲ ವೃಕ್ಷಗಳ ಪಟ್ಟಿಯಲ್ಲಿದ್ದ 350 ತಳಿಗಳು ನಶಿಸಿವೆ

### ಮಾಜಿ ಸಚಿವ ಸಿ.ಹೆಚ್.ವಿಜಯ್‌ಶಂಕರ್ ಆತಂಕ

ಮೈಸೂರು, ಆ.18(ಎಂಟಿವೈ)– ಕರ್ನಾಟಕ ಮೂಲ ಅರಣ್ಯದ ವೃಕ್ಷಗಳ ಪಟ್ಟಿಯಲ್ಲಿ ಸೇರಿಸಿದ್ದ 603 ಬಗೆಯ ವೃಕ್ಷಗಳಲ್ಲಿ ಈಗಾಗಲೇ 350 ತಳಿಯ ಮರಗಳ ಸಂತತಿ ನಾಶವಾಗಿದ್ದು, ಇನ್ನಷ್ಟು ಮರಗಳ ತಳಿ ಅವನತಿಯತ್ತ ಸಾಗಿದೆ ಎಂದು ಆತಂಕ ವ್ಯಕ್ತಪಡಿಸಿದ ಮಾಜಿ ಸಚಿವ ಸಿ.ಹೆಚ್.ವಿಜಯಶಂಕರ್ ಅಳಿವಿನಂಚಿನಲ್ಲಿರುವ ಮರಗಳ ರಕ್ಷಣೆಗೆ ಕ್ರಮ ಕೈಗೊಳ್ಳಬೇಕಾದ ಅನಿವಾರ್ಯತೆ ಇದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಗಣಪತಿ ಆಶ್ರಮದ ನಾದಮಂಟಪದಲ್ಲಿ ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ ಹಾಗೂ ಸರ್ಕಾರಿ ಆಯುರ್ವೇದ ಮಹಾವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ 'ಆಜಾದಿ ಕಾ ಅಮೃತ ಮಹೋತ್ಸವ' ಅಂಗವಾಗಿ ಆಯೋಜಿಸಿದ್ದ 'ಗಿಡಮೂಲಿಕೋತ್ಸವ'ವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪರಿಸರದ ಮೇಲಿನ ದೌರ್ಜನ್ಯದಿಂದಾಗಿ ಹಲವು ಮರಗಳ ಸಂತತಿ ಅವನತಿಯತ್ತ ಸಾಗುತ್ತಿದೆ. ಈ ಹಿಂದೆ ರಾಜ್ಯದ ವಿವಿಧ ಅರಣ್ಯ ಪ್ರದೇಶಗಳಲ್ಲಿರುವ ಮೂಲವೃಕ್ಷಗಳನ್ನು ಗುರುತಿಸಿ ಪಟ್ಟಿ ತಯಾರಿಸಲಾಗಿತ್ತು. ಅದರಲ್ಲಿ 603 ಮೂಲ ವೃಕ್ಷಗಳನ್ನು ಪಟ್ಟಿಯಲ್ಲಿ ಸೇರಿಸಲಾಗಿತ್ತು. ಅದರಲ್ಲಿ ಈಗಾಗಲೇ 350 ಮರಗಳ ತಳಿ ಸಂಪೂರ್ಣವಾಗಿ ನಾಶವಾಗಿವೆ ಉಳಿದ 253 ತಳಿಯ ಮರಗಳಲ್ಲಿ ಹಲವು ಬಗೆಯ ಮರಗಳು ಅವನತಿಯತ್ತ ಸಾಗಿವೆ. ಅದರಲ್ಲೂ ಔಷಧೀಯ ಗುಣ ಹೊಂದಿದ್ದ 'ಅರ್ಜುನ' ಹೆಸರಿನ ಮರ ನಶಿಸಿ ಹೋಗಿದೆ ಕೇವಲ ಒಂದೇ ಒಂದೇ ಮರವಿದೆ ಹಾಗಾಗಿ ಅವನತಿಯತ್ತ ಸಾಗಿರುವ ಮರಗಳ ಸಂತತಿ ಸಂರಕ್ಷಣೆಗೆ ತುರ್ತಾಗಿ ಕ್ರಮ ಕೈಗೊಳ್ಳಬೇಕಾಗಿದೆ ಎಂದು ಮನವಿ ಮಾಡಿದರು.

**ಶ್ರೀಕೃಷ್ಣನೇ ಮೂಲ ರೂವಾರಿ:** ಗಿಡ–ಮರಗಳ ಮಹತ್ವ ತಿಳಿಸುವ ನಿಟ್ಟಿನಲ್ಲಿ ಶ್ರೀಕೃಷ್ಣನೇ ಮೂಲ ರೂವಾರಿ ಎಂದರೆ ತಪ್ಪಾಗಲಾರದು. ಔಷಧಿಯ ಸಸ್ಯಗಳು ಸೇರಿದಂತೆ ಗಿಡ–ಮರ ರಕ್ಷಣೆಗೆ ಪ್ರೇರಣೆ ನೀಡುವ ಕೆಲಸವನ್ನು ಮಾಡುವ ಮೂಲಕ ಜಾಗೃತಿ ಮೂಡಿಸಿದರು ಎಂದರು.

ಮೈಸೂರು ಅರಸರು ಪರಿಸರ ಸಂರಕ್ಷಣೆಗೆ ಆದ್ಯತೆ ನೀಡಿದ್ದರು. ಇಂದು ಮೈಸೂರಿನ ಪರಿಸರ ಹಸಿರಾಗಿರಬೇಕಾದರೆ ಮೈಸೂರು ಅರಸರು ನೀಡಿದ ಪ್ರಾಮುಖ್ಯತೆಯೇ ಕಾರಣ. ಮುಂದಿನ ದಿನಗಳಲ್ಲಿ ಮೈಸೂರು ಸೇರಿದಂತೆ ಎಲ್ಲೆಡೆ ಗಿಡ–ಮರಗಳ ಸಂರಕ್ಷಣೆಗೆ ಎಲ್ಲರೂ ಕಂಕಣ ಬದ್ಧರಾಗಿ ಶ್ರಮಿಸಬೇಕು ಎಂದು ಸಲಹೆ ನೀಡಿದರು.



ಮೈಸೂರಿನ ಗಣಪತಿ ಆಶ್ರಮದ ನಾದಮಂಟಪದಲ್ಲಿ ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ ಹಾಗೂ ಸರ್ಕಾರಿ ಆಯುರ್ವೇದ ಮಹಾವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ನಡೆದ 'ಗಿಡಮೂಲಿಕೋತ್ಸವ' ಕಾರ್ಯಕ್ರಮದಲ್ಲಿ ಆಶ್ರಮದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ವಿದ್ಯಾರ್ಥಿಗಳಿಗೆ ತುಳಸಿ ಗಿಡ ನೀಡಿದರು.

**ಹವಾಮಾನ ವೈಪರಿತ್ಯ:** ಇತ್ತೀಚಿನ ದಿನಗಳಲ್ಲಿ ಪರಿಸರದ ಮೇಲೆ ಭಾರಿ ಪ್ರಮಾಣದ ದೌರ್ಜನ್ಯ ನಡೆಯುತ್ತಿರುವುದರಿಂದ ಹವಾಮಾನದಲ್ಲಿ ಏರಿಳಿತ ಉಂಟಾಗುತ್ತಿದೆ ಇಂಗ್ಲೆಂಡ್‌ನಲ್ಲಿ 500 ವರ್ಷದ ಇತಿಹಾಸಲ್ಲೇ ಮೊದಲ ಬಾರಿಗೆ ಕಂಡು ಕೇಳರಿಯದ ಭೀಕರ ಬರಗಾಲದ ಸ್ಥಿತಿ ತಲೆದೋರಿದೆ. ಮಳೆ ಇಲ್ಲದೇ ಇದ್ದ ಅರಬ್ ರಾಷ್ಟ್ರಗಳಲ್ಲಿ ಭೀಕರ ಮಳೆ, ಭಾರತದಲ್ಲೂ ಕಂಡು ಕೇಳರಿಯದಂತಹ ಪ್ರಮಾಣದಲ್ಲಿ ಮಳೆ ಬರುತ್ತಿದೆ. ಇದಕ್ಕೆಲ್ಲಾ ಕಾರಣ ಪರಿಸರದ ಮೇಲೆ ಜನರು ವಿವಿಧ ಕಾರಣಗಳಿಂದ ದೌರ್ಜನ್ಯ ಎಸಗುತ್ತಿರುವುದೇ ಆಗಿದೆ. ಇನ್ನಾದರೂ ಪರಿಸರದ ಮೇಲಿನ ದೌರ್ಜನ್ಯ ತಡೆಗಟ್ಟಲೇಬೇಕಾಗಿದೆ. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಇನ್ನಷ್ಟು ಭೀಕರ ಪರಿಸ್ಥಿತಿ ಎದುರಿಸಬೇಕಾಗುತ್ತದೆ ಎಂದು ವಿಷಾದಿಸಿದರು.

ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಸ್ವಾಮೀಜಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಮಾತನಾಡಿ, ಈ ಹಿಂದೆಯೇ ಬರಗಾಲ ತಲೆದೋರಿದ್ದ ಸಂದರ್ಭದಲ್ಲಿ ವನಸ್ಪತಿ ದೇವರನ್ನು ಆರಾಧಿಸಿದ್ದ ನಿದರ್ಶನವಿದೆ. ಈ ಹಿನ್ನೆಲೆಯಲ್ಲಿ ಗಿಡಗಳನ್ನು ನೆಟ್ಟು, ಪೋಷಿಸಬೇಕು. ಯಾರು ಗಿಡವನ್ನು ನೆಟ್ಟು ಬೆಳೆಸುತ್ತಾರೋ ಅಂತಹವರನ್ನು ದೇವರು ಕಾಪಾಡುತ್ತಾರೆ. ನಾವು ಎಲ್ಲೋ ಇರುವ ದೇವರನ್ನು ಹುಡುಕುತ್ತೇವೆ. ಆದರೆ, ನಿಜವಾದ ದೇವರು ನಮ್ಮ ಸುತ್ತಮುತ್ತ ಇರುವ ಗಿಡ–ಮರಗಳೇ ಆಗಿವೆ ಈ ಹಿನ್ನೆಲೆಯಲ್ಲಿ ಎಲ್ಲರೂ ಗಿಡ–ಮರಗಳ ರಕ್ಷಣೆಗೆ ಕೈಜೋಡಿಸಬೇಕು ಎಂದು ಸಲಹೆ ನೀಡಿದರು.

ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಭಕ್ತರು ತಂಗಲು ರೂಮ್‌ಗಳ ಕೊರತೆ ಉಂಟಾಗುತ್ತಿದೆ. ಅದಕ್ಕಾಗಿ ಇನ್ನಷ್ಟು ಕೊಠಡಿಗಳನ್ನು ಕಟ್ಟಿಸಿಕೊಡುವುದಕ್ಕೆ ಭಕ್ತರು ಹಿರಿಯ ಸ್ವಾಮೀಜಿ ಅವರನ್ನು ಕೇಳಿದಾಗ, ಹಿರಿಯ ಸ್ವಾಮೀಜಿ ಆಶ್ರಮದ ಆವರಣದಲ್ಲಿರುವ ಒಂದೇ ಒಂದು ಗಿಡ–ಮರ ಕಡಿಯುವುದಕ್ಕೆ ಒಪ್ಪಲೇ ಇಲ್ಲ. ಗಿಡ–ಮರಗಳು ನನ್ನ ಮಕ್ಕಳಿದ್ದಂತೆ. ಯಾವುದೇ ಕಾರಣಕ್ಕೂ ಕೊಠಡಿ ನಿರ್ಮಾಣಕ್ಕಾಗಿ ಗಿಡ–ಮರ ಬಲಿಕೊಡುವುದಿಲ್ಲ ಎಂದು ಹೇಳುವ ಮೂಲಕ ತಮಗಿರುವ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಇದರಿಂದಾಗಿಯೇ ಆಶ್ರಮದ ಆವರಣ ತಂಪಾಗಿರುತ್ತದೆ ಎಂದರು.

**ಉಪಕಾರ ಸ್ಮರಣೆ ಅಗತ್ಯ:** ಗಿಡ–ಮರಗಳ ಮಹತ್ವ ಜನರಿಗೆ ಬಹುಬೇಗ ಅರ್ಥವಾಗುವುದಿಲ್ಲ. ಚಿಕ್ಕ ವಯಸ್ಸಿನಲ್ಲಿದ್ದಾಗ ಯಾವುದಾದರೂ ಒಂದು ಗಿಡ ನೆಟ್ಟು ನೀರುಣಿಸಿ ಪೋಷಿಸಿದ್ದ ಮರ ಫಲ ಕೊಡ ಲಾರಂಭಿಸಿದ್ದಾಗ ಅದರ ಮಹತ್ವ ಅರಿವಾಗುತ್ತದೆ. ತೆಂಗಿನ ಗಿಡವೊಂದನ್ನು ನೆಟ್ಟು ಬೆಳೆಸಿದಾಗ, ತಾನು ಬುಡದಲ್ಲಿ ಪಡೆದ ನೀರನ್ನು ನೆತ್ತಿಯ ಮೇಲೆ ಸಂಗ್ರಹಿಸಿ ಎಳನೀರು ರೂಪದಲ್ಲಿ ಕೊಡುತ್ತದೆ. ಇಂತಹ ಉಪಕಾರ ಸ್ಮರಣೆ ಅಗತ್ಯ ಎಂದರು.

**ಸಂಭಾಷಣೆ ಮಾಡಿ:** ಎಲ್ಲರೂ ಗಿಡ–ಮರಗಳೊಂದಿಗೆ ಪ್ರತಿದಿನ ಸಂಭಾಷಣೆ ಮಾಡಬೇಕು. ಗಿಡ–ಮರಗಳಿಗೂ ಜೀವವಿದೆ. ಅವುಗಳಿಗೂ ನಮ್ಮ ಮಾತಿಗೆ ಪ್ರತಿಕ್ರಿಯಿಸಿ, ಸ್ಪಂಧಿಸುತ್ತವೆ. ಹಾಗಾಗಿ ಎಲ್ಲರೂ ಸ್ನೇಹಿತರಂತೆ, ಸಹೋದರ, ಸಹೋದರಿಯಂತೆ ಗಿಡ–ಮರಗಳೊಂದಿಗೆ ಮಾತನಾಡುವಂತೆ ಸಲಹೆ ನೀಡಿದರು.

ಇದೇ ವೇಳೆ ವಿವಿಧ ಶಾಲೆಯ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪರಸ್ಕಾರ, ಟಿ–ಶರ್ಟ್ ವಿತರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಪ್ರಾಚಾರ್ಯ ಡಾ.ಗಜಾನನ ಹೆಗಡೆ ವಹಿಸಿದ್ದರು. ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಜಿಎಸ್‌ಎಸ್ ಸಂಸ್ಥೆಯ ಸಂಸ್ಥಾಪಕ ಶ್ರೀಹರಿ, ಆಯುಷ್ ಇಲಾಖೆ ಡಾ.ಎನ್.ಆಂಜನೇಯಮೂರ್ತಿ, ನಿವೃತ್ತ ಜಿಲ್ಲಾ ಆಯುಷ್ ಡಾ.ಎನ್.ನಾಗೇಶ್, ನಿವೃತ್ತ ಸ್ಥಾಯಿ ವೈದ್ಯಾಧಿಕಾರಿ ಡಾ.ಮಧೂಮತಿ, ನಿವೃತ್ತ ಅಂಚೆ ಇಲಾಖಾಧಿಕಾರಿ ಎಸ್.ಪ್ರಕಾಶ್, ಆಯುರ್ವೇದ ಅಕಾಡೆಮಿಯ ಜಂಟಿ ಕಾರ್ಯದರ್ಶಿ ಡಾ.ಪ್ರಶಾಂತ್ ಗೋಖಲೆ, ಸಮಾಜ ಸೇವಕ ಡಾ.ಪಿ.ಶಾಂತರಾಜೇ ಅರಸ್, ಆಯುರ್ವೇದ ಸಂಶೋಧನಾ ಕೇಂದ್ರ ಸಹಾಯಕ ನಿರ್ದೇಶಕ ಡಾ.ಲಕ್ಷ್ಮೀನಾರಾಯಣ ಶೆಣೈ ಹಾಗೂ ಇನ್ನಿತರರು ಇದ್ದರು.

**ಮಾಜಿ ಸಿಎಂ ಸಿದ್ದರಾಮಯ್ಯ ಕಾರಿನ ಮೇಲೆ ಮೊಟ್ಟೆ ಎಸೆತ ಖಂಡಿಸಿ**

# ಕಾಂಗ್ರೆಸ್ ಕಾರ್ಯಕರ್ತರಿಂದ ಹೆದ್ದಾರಿ ತಡೆದು ಪ್ರತಿಭಟನೆ



ತಿ.ನರಸೀಪುರ ಆ.18– ಮಡಿಕೇರಿಯಲ್ಲಿ ಅತಿವೃಷ್ಟಿಯಿಂದ ಹಾನಿಗೊಳಗಾದ ಪ್ರದೇಶಗಳ ಪರಿಶೀಲನೆಗೆ ತೆರಳಿದ್ದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾರಿನ ಮೇಲೆ ಮೊಟ್ಟೆ ಎಸೆದಿರುವ ಘಟನೆ ಹಾಗೂ ಪೊಲೀಸರ ಭದ್ರತಾ ವೈಫಲ್ಯ ಖಂಡಿಸಿ ತಾಲೂಕಿನ ಗರ್ಗೇಶ್ವರಿ ಗ್ರಾಮದ ಬಳಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ರಾಷ್ಟ್ರೀಯ ಹೆದ್ದಾರಿ ತಡೆದು ಗುರುವಾರ ಸಂಜೆ ಪ್ರತಿಭಟನೆ ನಡೆಸಿದರು.

ರಾಷ್ಟ್ರೀಯ ಹೆದ್ದಾರಿ ಯಲ್ಲಿ ಜಮಾಯಿಸಿದ ಕಾಂಗ್ರೆಸ್ ಕಾರ್ಯಕರ್ತರು ರಸ್ತೆ ತಡೆ ನಡೆಸಿ ರಾಜ್ಯ ಬಿಜೆಪಿ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿ ದರು. ಇದರಿಂದ ಅರ್ಧ ಗಂಟೆಗೂ ಹೆಚ್ಚು ಕಾಲ ಮೈಸೂರು– ತಿ.ನರಸೀಪುರ ರಸ್ತೆ ಸಂಚಾರ ಅಸ್ತವ್ಯಸ್ತವಾಗಿ, ವಾಹನ ಸವಾರರು ಪರದಾಡುವಂತಾಯಿತು.

ಶಾಸಕ ಡಾ.ಯತೀಂದ್ರ ಮಾತನಾಡಿ, ರಾಜ್ಯದಲ್ಲಿ ಕೋಮು ಸಂಘರ್ಷದ ಮೂಲಕ ಅಧಿಕಾರ ಹಿಡಿಯುವ ಹಂಬಲ ಹೊಂದಿರುವ ಬಿಜೆಪಿ, ಸಾಮಾನ್ಯ ಜನರಿಗೆ ರಕ್ಷಣೆ ನೀಡುತ್ತಿಲ್ಲ. ನೆರೆಹಾವಳಿ ಪ್ರದೇಶಗಳ ಪರಿಶೀಲನೆಗೆ ತೆರಳಿದ್ದ ವಿಪಕ್ಷ ನಾಯಕ ರಿಗೆ ರಕ್ಷಣೆ ನೀಡದಿರುವುದು ಆಡಳಿತ ವೈಫಲ್ಯತೆಗೆ ಹಿಡಿದ ಸಾಕ್ಷಿಯಾಗಿದೆ. ಇಂತಹ ಹೊಣೆಗೇಡಿ, ಬೇಜವಾ ಬ್ದಾರಿ ಸರ್ಕಾರದ ಆಡಳಿತ ವೈಫಲ್ಯತೆ ಹೀಗೆ ಮುಂದುವರೆದರೆ ರಾಜ್ಯಾದ್ಯಂತ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಜಿಪಂ ಮಾಜಿ ಸದಸ್ಯ ಕೆ.ಮಹದೇವ, ಕುರುಬರ ಸಂಘದ ಮಾಜಿ ಅಧ್ಯಕ್ಷ ಟಿ.ಎಸ್.ಪ್ರಶಾಂತ್ ಬಾಬು, ವರುಣಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಮುದ್ದೇಗೌಡ, ಮೃಗಾಲಯ ಪ್ರಾಧಿಕಾರದ ಮಾಜಿ ನಿರ್ದೇಶಕ ಅಮ್ಜದ್ ಖಾನ್, ತಾಪಂ ಮಾಜಿ ಸದಸ್ಯ ಎಂ.ರಮೇಶ್, ಪುರಸಭೆ ಮಾಜಿ ಅಧ್ಯಕ್ಷ ಎನ್.ಸೋಮಣ್ಣ, ಪುರಸಭಾ ಸದಸ್ಯ ಬಾದಾಮಿ ಮಂಜು, ಗ್ರಾಪಂ ಅಧ್ಯಕ್ಷ ಆನಂದ್, ಸದಸ್ಯರಾದ ಮಸೂರ್ ಅಹಮದ್, ಯುವ ಕಾಂಗ್ರೆಸ್ ಅಧ್ಯಕ್ಷ ಅಮಾಸೆ ಲಿಂಗರಾಜು, ಡಿ.ಕೆ.ಶಿವಕುಮಾರ್ ಅಭಿಮಾನಿ ಬಳಗದ ಅಧ್ಯಕ್ಷ ತಿರುಮಕೂಡಲು ಚೇತನ್, ರಾಮನಂಜಯ್ಯ, ಯಡದೊರೆ ಮರಯ್ಯ, ಸಿದ್ದರಾಜು, ಮಾಜಿ ಅಧ್ಯಕ್ಷ ಮನ್ನೇಹುಂಡಿ ಮಹೇಶ, ಗುತ್ತಿಗೆದಾರ ಮಾಧು, ಮುಖಂಡರಾದ ಎಂ.ಶಿವಪ್ರಸಾದ್, ಹಾಳೇಗೌಡ ಹಾಗೂ ಇನ್ನಿತರರಿದ್ದರು.

## ಬೆಂಗಳೂರು ವಿಶ್ವದ ಗಮನ ಸೆಳೆಯಲು ಕೆಂಪೇಗೌಡರೇ ಕಾರಣ

**ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಅಭಿಮತ**



ಹೆಚ್.ಡಿ.ಕೋಟೆ, ಆ.18– ಇಂದು ದೇಶ ವಿದೇಶಗಳು ಬೆಂಗಳೂರನ್ನು ತಿರುಗಿ ನೋಡುವಂತಾಗಿದೆ ಎಂದರೆ ಇದಕ್ಕೆ ನಾಡಪ್ರಭು ಕೆಂಪೇಗೌಡರೇ ಕಾರಣ. ಅವರ ದೂರಾಲೋಚನೆಯಿಂದ ಇಂದು ಬೆಂಗಳೂರು ವಿಶಾಲವಾಗಿ ಬೆಳೆದು ಸಿಲಿಕಾನ್ ಸಿಟಿಯಾಗಿ ವಿಶ್ವದ ಗಮನ ಸೆಳೆಯಲು ಕಾರಣವಾಗಿದೆ ಎಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರೂ ಆದ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್‌ಗೌಡ ಅಭಿಪ್ರಾಯಪಟ್ಟರು.

ತಾಲೂಕಿನ ಕಣಿಯನಹುಂಡಿ ಗ್ರಾಮದಲ್ಲಿ ನಾಡಪ್ರಭು ಕೆಂಪೇಗೌಡರ ಯುವಕರ ಸಂಘದ ಮತ್ತು ನಾಡಪ್ರಭು ಕೆಂಪೇಗೌಡರ 513ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬೆಂಗಳೂರಿನ ನಿರ್ಮಾತೃ ಕೆಂಪೇಗೌಡರು ಎಲ್ಲಾ ವರ್ಗದ ಜನರ ಅನುಕೂಲಕ್ಕಾಗಿ 28 ಪೇಟೆಗಳನ್ನು ನಿರ್ಮಿಸಿ, ಅದರ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದರು ಎಂದರು.

ನಮ್ಮ ತಂದೆ, ಶಾಸಕ ಜಿ.ಟಿ.ದೇವೇಗೌಡರು ಮೈಸೂರಿನಲ್ಲಿ ಕೆಂಪೇಗೌಡರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಿ ಸರ್ಕಾರದ ಗಮನ ಸೆಳೆದ ನಂತರ ಕೆಂಪೇಗೌಡರ ಜಯಂತಿ ಸರ್ಕಾರಿ ಕಾರ್ಯಕ್ರಮವಾಗಿ ರೂಪುಗೊಂಡು ಸರ್ಕಾರದಿಂದ ಆಚರಿಸಲಾಗುತ್ತಿದೆ ಎಂದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ವಿಶ್ವಮಟ್ಟದಲ್ಲಿ ಬೆಂಗಳೂರು ಗುರ್ತಿಸಿಕೊಂಡಿದೆ ಎಂದರೆ ಅದಕ್ಕೆ ಕೆಂಪೇಗೌಡರ ಕೊಡುಗೆಯೇ ಕಾರಣ. ಅಲ್ಲದೇ ಪರಿಸರ ಪ್ರೇಮಿಯಾಗಿದ್ದ ಅವರು ಸಾಕಷ್ಟು ಉದ್ಯಾನವನ ನಿರ್ಮಿಸಿದ್ದರು. ಅಲ್ಲದೇ ಸಾವಿರಾರು ಕೆರೆಕಟ್ಟೆಗಳನ್ನು ನಿರ್ಮಿಸಿ ಕೃಷಿಗೆ ನೀರೊದಗಿಸಿದರು ಎಂದ ಅವರು, ಕೆಂಪೇಗೌಡರ ಹೆಸರಿನಲ್ಲಿ ಗ್ರಾಮದಲ್ಲಿ ಸ್ಥಾಪಿಸಿರುವ ಯುವಕರ ಸಂಘದ ಸದಸ್ಯರು ಸಂಘದ ಏಳಿಗೆ, ಗ್ರಾಮದ ಅಭಿವೃದ್ಧಿಗೆ ಶ್ರಮಿಸಬೇಕು ಎಂದರು.

ನಮ್ಮ ತಂದೆ ಮತ್ತು ನನ್ನ ಅಧಿಕಾರಾವಧಿಯಲ್ಲಿ ಗ್ರಾಮದಲ್ಲಿ ಹಲವು ಅಭಿವೃದ್ಧಿ ಕಾರ್ಯ ಮಾಡಿದ್ದು, ಗ್ರಾಮದ ರೈತರ ಬೇಡಿಕೆಯಂತೆ ಸಾಗುವಳಿ ಮಂಜೂರು ಮಾಡಲು ಶ್ರಮಿಸಿದ್ದೇನೆ. ಮುಂದೆಯೂ ಗ್ರಾಮದ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ಕಾರ್ಯಕ್ರಮದಲ್ಲಿ ವಿಶ್ರಾಂತ ಪ್ರಾಂಶುಪಾಲ ಪ್ರೊ.ನಿ.ಗಿರಿಗೌಡ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಮರಿಸ್ವಾಮಿ, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ವೆಂಕಟೇಶ್, ಮೈಮುಲ್ ಹಾಗೂ ಸಹಕಾರ ಯೂನಿಯನ್ ನಿರ್ದೇಶಕ ಕೆ. ಈರೇಗೌಡ, ಜೆಡಿಎಸ್ ಮುಖಂಡ ಜಯಪ್ರಕಾಶ್ ಚಿಕ್ಕಣ್ಣ, ಒಕ್ಕಲಿಗರ ಸಂಘದ ನಿರ್ದೇಶಕ ಸುಧೀಂದ್ರ ಪ್ರೊ.ಡಾ.ಕೆ.ಎಂ.ಮಾದೇವಯ್ಯ, ಗಾಯಕರಾದ ಶಶಿಕಲಾ, ಗ್ರಾಪಂ ಅಧ್ಯಕ್ಷೆ ವಿಜಯ, ಸದಸ್ಯರಾದ ಈರೇಗೌಡ, ಬಸವರಾಜ್, ಸುಧಾ, ದೊಡ್ಡನಿಂಗೇಗೌಡ, ಬಿ.ಕೆ.ರಾಮು, ಮುಖಂಡರಾದ ಸಿ.ಕೆ.ರಮೇಶ, ಬಸವರಾಜು, ನಾಗಣ್ಣ, ಆರ್.ಕುಮಾರ್, ಡಾ.ಸಿ.ರವಿಕುಮಾರ್, ಮಾದಪ್ಪ, ಜಿ.ಕೆ.ಬಸವರಾಜು, ಮಹೇಶ್, ಸಣ್ಣನಿಂಗೇಗೌಡ, ಕೃಷ್ಣ, ಅನುರಾಜ್, ಬಸವರಾಜು, ಕೆಂಪೇಗೌಡ ಯುವಕರ ಸಂಘದ ಅಧ್ಯಕ್ಷ ಸಿ.ಚಂದ್ರು, ಉಪಾಧ್ಯಕ್ಷ ಸಿ.ಕೆಂಡಗಣ್ಣೇಗೌಡ, ನಿರ್ದೇಶಕರು, ಸದಸ್ಯರು ಸೇರಿದಂತೆ ಗ್ರಾಮಸ್ಥರಿದ್ದರು.

## ಹುಣಸೂರಿನ ವಿವಿಧೆಡೆ ಸಂಭ್ರಮದ ಸ್ವಾತಂತ್ರ್ಯೋತ್ಸವ



ಹುಣಸೂರು, ಆ.18– 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ತಾಲೂಕಿನ ಬಿಳಿಕೆರೆ, ಹುಸೇನಪುರ, ಹಳೇಬೀಡು ಹಾಗೂ ಗಾವಡಗೆರೆ ಗ್ರಾಪಂನಲ್ಲಿ ಅಮೃತ ಸರೋವರ ಯೋಜನೆಯಡಿ ಆಯ್ಕೆಗೊಂಡಿದ್ದ ಕೆರೆಗಳಲ್ಲಿ ಧ್ವಜಾರೋಹಣ ಮಾಡಿ ಸಂಭ್ರಮದಿಂದ ಸ್ವಾತಂತ್ರ್ಯೋತ್ಸವ ಆಚರಿಸಲಾಯಿತು.

ಬಿಳಿಕೆರೆ ಗ್ರಾಪಂನ ಪಟ್ಟದಲಮ್ಮನ ಕೆರೆ, ಹುಸೇನಪುರ ಗ್ರಾಪಂನ ಗುರುಮಠ ಕೆರೆ ಮತ್ತು ಕೆ.ಜಿ.ಕೊಪ್ಪಲು ಕೆರೆ, ಹಳೇಬೀಡು ಗ್ರಾಪಂ ವಡ್ಡರಹಳ್ಳಿಯ ಕುಂಚನಕಟ್ಟೆ ಕೆರೆ ಹಾಗೂ ಗಾವಡಗೆರೆ ಗ್ರಾಪಂನ ಕಾಳಸಿದ್ದನ ಕಟ್ಟೆ ಕೆರೆಯನ್ನು ನರೇಗಾದ ಅಮೃತ ಸರೋವರ ಯೋಜನೆಯಡಿ ಆಯ್ಕೆ ಮಾಡಿಕೊಳ್ಳಲಾಗಿದ್ದು, ಮಾಜಿ ಸೈನಿಕರಾದ ರಾಮಚಂದ್ರ, ಹಿರಿಯ ಸಮಾಜ ಸೇವಕ ರಾಮಕೃಷ್ಣೇ ಗೌಡ, ವಡ್ಡರಹಳ್ಳಿ ಗ್ರಾಮದ ಮಲ್ಲಾರ್ ಆರಾಧ್ಯ, ಗ್ರಾಪಂ ಮಾಜಿ ಅಧ್ಯಕ್ಷ ರಾಜಮಾನ್ ವೆಂಕಟೇಶ್‌ಗೌಡ ಹಾಗೂ ಮಾಜಿ ಸೈನಿಕ ಸಜ್ಜನರಾವ್ ಕದಂ ಮತ್ತು ವಿಶ್ವನಾಥ್ ಪವಾರ್ ಅವರಿಂದ ಧ್ವಜಾರೋಹಣ ಮಾಡಿಸಲಾಯಿತು.

ಈ ವೇಳೆ ಗ್ರಾಪಂ ಅಧ್ಯಕ್ಷ ಹೆಚ್.ಆರ್.ಮಹೇಶ್, ಬಿ.ಪಿ.ಶಿವಶಂಕರ್, ಡಿ.ದಿವ್ಯ, ಶೀಲಾವತಿ, ಪಿಡಿಓಗಾಳದ ನಾಗರಾಜ, ಮಹೇಂದ್ರ, ಮಂಜುಳ, ಮಹದೇವಸ್ವಾಮಿ, ತಾಂತ್ರಿಕ ಸಹಾಯಕ ಅಭಿಯಂತರ ಡಿ.ಹರ್ಷಿತ, ಗ್ರಾಮಸ್ಥರಾದ ಮಲ್ಲಿಕಾರ್ಜುನ, ರಾಜಶೇಖರ್, ಶಿವಲಿಂಗಪ್ಪ, ಜಯರಾಮೇಗೌಡ, ದೇವೇಗೌಡ ಸೇರಿದಂತೆ ಇನ್ನಿತರರಿದ್ದರು.

## ದೇಶಪ್ರೇಮ ಸ್ವಾತಂತ್ರ್ಯ ದಿನಕ್ಕೆ ಮಾತ್ರ ಸೀಮಿತವಾಗದಿರಲಿ



ಪಿರಿಯಾಪಟ್ಟಣ, ಆ.18– ದೇಶಪ್ರೇಮ ಸ್ವಾತಂತ್ರ್ಯ ದಿನಕ್ಕೆ ಮಾತ್ರ ಸೀಮಿತ ವಾಗಬಾರದು ಎಂದು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಬೆಕ್ಕರೆ ಸತೀಶ್ ಆರಾಧ್ಯ ತಿಳಿಸಿದರು.

ಪಟ್ಟಣದ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ವತಿಯಿಂದ ನಡೆದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ದೇಶಪ್ರೇಮ ಸಾರುವ ರಾಷ್ಟ್ರೀಯ ಹಬ್ಬಗಳನ್ನು ಕೇವಲ ಆಡಂಬರಕ್ಕೆ ಆಚರಿಸದೆ ಅವುಗಳ ಮಹತ್ವ ಅರಿತು ನಾಡು ನುಡಿ ಗೌರವಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.

ಜನಜಾಗೃತಿ ವೇದಿಕೆ ಸದಸ್ಯ ಷಣ್ಮುಗರಾವ್ ಮಾತನಾಡಿ, ದೇಶ ನಮಗೇನು ಕೊಟ್ಟಿದೆ ಎನ್ನುವ ಬದಲು ದೇಶಕ್ಕಾಗಿ ನಾವು ಏನು ಮಾಡಿದ್ದೇವೆ ಎಂಬುದನ್ನು ಅರಿತು ರಾಷ್ಟ್ರಧ್ವಜ, ರಾಷ್ಟ್ರಗೀತೆ ಹಾಗೂ ನಮ್ಮೆಲ್ಲರನ್ನು ದೇಶದ ಗಡಿಯಲ್ಲಿ ಶತ್ರುಗಳಿಂದ ಕಾಯುತ್ತಿರುವ ಸೈನಿಕರನ್ನು ಗೌರವಿಸಬೇಕು ಎಂದರು. ಯೋಜನಾಧಿಕಾರಿ ಸುರೇಶ್ ಶೆಟ್ಟಿ ಮಾತನಾಡಿ, ಹಲವು ಮಹನೀಯರ ತ್ಯಾಗ ಬಲಿದಾನದಿಂದ ನಾವಿಂದು ಸ್ವತಂತ್ರವಾಗಿ ಜೀವನ ನಡೆಸುತ್ತಿದ್ದು, ಸ್ವಾತಂತ್ರ್ಯ ಹೋರಾಟಗಾರರ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕಿದೆ ಎಂದರು.

ಇದೇ ವೇಳೆ ಸಂಘದ ಸದಸ್ಯರಿಗೆ ಸಾಂಕೇತಿಕವಾಗಿ ಆಯುಷ್ಮಾನ್ ಕಾರ್ಡ್ ಅನ್ನು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಬೆಕ್ಕರೆ ಸತೀಶ್ ಆರಾಧ್ಯ ವಿತರಿಸಿದರು. ಈ ಸಂದರ್ಭ ಪತ್ರಕರ್ತರ ಸಂಘದ ನಿರ್ದೇಶಕರಾದ ಪಿ.ಎಸ್.ವೀರೇಶ್, ಇಮ್ತಿಯಾಜ್ ಅಹಮದ್, ಕೆಬಿಟಿ ಟಿಂಬರ್ ಮಾಲೀಕ ಶೌಫ್, ಸಂಸ್ಥೆ ಮೇಲ್ವಿಚಾರಕರು, ಕಚೇರಿ ಸಿಬ್ಬಂದಿ, ಸೇವಾ ಪ್ರತಿನಿಧಿಗಳು ಇದ್ದರು.



ಹೆಚ್.ಡಿ.ಕೋಟೆ ತಾಲೂಕಿನ ಹೊಮ್ಮರಗಳ್ಳಿ ಸರ್ಕಾರಿ ಕನ್ನಡ ಮತ್ತು ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತು. ಈ ವೇಳೆ ಶಾಲಾ ಮುಖ್ಯಶಿಕ್ಷಕ ಬಿ.ಎನ್.ನಾಗಾರ್ಜುನ, ಎಸ್‌ಡಿಎಂಸಿ ಅಧ್ಯಕ್ಷೆ ಯಶೋಧ, ಉಪಾಧ್ಯಕ್ಷ ಪಿ.ರವಿಕುಮಾರ್ ಸೇರಿದಂತೆ ಮತ್ತಿತರರಿದ್ದರು.



ಕಂಪಲಾಪುರ ಸರ್ಕಾರಿ ಪ್ರೌಢಶಾಲೆಯಲ್ಲಿ 75ನೇ ಸ್ವಾತಂತ್ರ್ಯೋತ್ಸವ ವೇಳೆ ದಿ.ಕೆ.ಎಂ.ಚಿಕ್ಕಣ್ಣಶೆಟ್ಟರ ಸ್ಮರಣಾರ್ಥ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡಿ ಗೌರವಿಸಲಾಯಿತು. ಈ ವೇಳೆ ಎಸ್‌ಡಿಎಂಸಿ ಅಧ್ಯಕ್ಷ ಸದಾಶಿವ, ಮುಖ್ಯ ಶಿಕ್ಷಕ ಮಹದೇವಯ್ಯ, ಡೇರಿ ಅಧ್ಯಕ್ಷ ಕೃಷ್ಣೇಗೌಡ, ಕೆ.ಎಂ.ಲಕ್ಷ್ಮಣ್, ಬಂಕ್ ಮಾಲೀಕ ಕೆ.ಪಿ.ನಿಂಗರಾಜ್, ಕೆ.ಪಿ.ಕುಮಾರ್, ಪ್ರಕಾಶ್‌ಗೌಡ, ಹರ್ಷದ್, ಮೊಹಿದ್ದೀನ್, ಚಂದ್ರು, ರಾಜೇಶ್ ಸೇರಿದಂತೆ ಶಿಕ್ಷಕರಿದ್ದರು.

## ರೈತರ ಹಾಲಿನ ದರ ಹೆಚ್ಚಿಸಲು ಸರ್ಕಾರ ಮೀನಾಮೇಷ

**ಮೈಮುಲ್ ನಿರ್ದೇಶಕ ಚೆಲುವರಾಜು**



ತಿ.ನರಸೀಪುರ, ಆ.18– ರೈತರು ಉತ್ಪಾದಿಸುವ ಹಾಲಿನ ದರ ಹೆಚ್ಚಿಸಲು ಮೀನಾಮೇಷ ಎಣಿಸುತ್ತಿರುವ ಸರ್ಕಾರದ ವಿರುದ್ಧ ದೊಡ್ಡಮಟ್ಟದ ಪ್ರತಿಭಟನೆಯ ಅವಶ್ಯಕತೆ ಇದೆ ಎಂದು ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ಅಭಿಪ್ರಾಯಪಟ್ಟರು.

ತಾಲೂಕಿನ ದೊಡ್ಡ ಮುಲಗೂಡು ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ನಡೆದ 2021–22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಅವರು ಮಾತನಾಡಿದರು. ಕಳೆದ 5 ವರ್ಷಗಳಿಂದ ರೈತರ ಹಾಲಿನ ದರ ಹೆಚ್ಚಿಸುವಂತೆ ಮನವಿ ಮಾಡಿದರೂ, ರೈತರ ಹಿತ ಕಾಯಲು ಯಾವುದೇ ಕ್ರಮ ಕ್ರಮ ಕೈಗೊಳ್ಳದೇ ಸರ್ಕಾರ ನಿರ್ಲಕ್ಷ್ಯ ವಹಿಸಿದೆ. ಒಕ್ಕೂಟ ರೈತರ ಹಾಲಿನ ದರ ಏರಿಕೆ ಮಾಡಬೇಕಾದರೆ, ಸರ್ಕಾರ ನಂದಿನಿ ಹಾಲಿನ ಪ್ಯಾಕೆಟ್ ದರ ಹೆಚ್ಚಿಸಬೇಕು. ಆದರೆ ಸರ್ಕಾರ ಬೆಲೆ ಏರಿಕೆ ಮಾಡಿದರೆ ಗ್ರಾಹಕರಿಗೆ ಹೊರೆಯಾಗುತ್ತದೆ ಎಂಬ ಕುಂಟು ನೆಪ ಹೇಳುತ್ತಿದೆ. ಹಾಗಾಗಿ ಹಾಲಿನ ದರ ಏರಿಕೆ ಮಾಡುವ ಅಧಿಕಾರ ನಮಗಾಗಲೀ ಅಥವಾ ಕೆಎಂಎಫ್‌ಗಾಗಲಿ ಇಲ್ಲ ಎಂದರು.

ರಾಜ್ಯದ ಕೋಟ್ಯಾಂತರ ಜನ ಹೈನುಗಾರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅವರ ಆರ್ಥಿಕ ಮಟ್ಟ ಸುಧಾರಣೆಯಾಗಬೇಕಾದರೆ ಹಾಲಿನ ದರ ಹೆಚ್ಚಳವಾಗಲೇಬೇಕು. ಹಾಲಿನ ದರ ಏರಿಕೆ ಮಾಡುವಂತೆ ಒಕ್ಕೂಟಗಳೆಲ್ಲಾ ಒಂದಾಗಿ ಮಾಡಿದ ಮನವಿಯನ್ನು ಸರ್ಕಾರ ಕಡೆಗಣಿಸಿದೆ. ಹಾಗಾಗಿ ರೈತರೆಲ್ಲರೂ ಒಗ್ಗೂಡಿ ತಮ್ಮ ಉಳಿವಿಗಾಗಿ ಹಾಲಿನ ಬೆಲೆ ಏರಿಕೆ ಮಾಡುವಂತೆ ಸರ್ಕಾರದ ಗಮನ ಸೆಳೆಯಲು ಬೃಹತ್ ಪ್ರತಿಭಟನೆ ಮಾಡಲು ಮುಂದಾಗಬೇಕೆಂದು ಕರೆ ನೀಡಿದರು.

ಸಂಘದ ಸಿಇಓ ಡಿ.ಎಲ್.ಗುರುಪ್ರಸಾದ್ ವಾರ್ಷಿಕ ವರದಿ ಮಂಡಿಸಿ ಪ್ರಸಕ್ತ ಸಾಲಿನಲ್ಲಿ ಸಂಘ 6,45,954 ರೂ. ನಿವ್ವಳ ಲಾಭಗಳಿಸಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದರು.

ಈ ವೇಳೆ ಸಂಘದ ಅಧ್ಯಕ್ಷ ನಾಗರಾಜು, ಉಪಾಧ್ಯಕ್ಷೆ ಶಾಂತಮ್ಮ, ಸದಸ್ಯರಾದ ಪುಟ್ಟಸಿದ್ದೇಗೌಡ, ಡಿ.ಬಿ.ರಮೇಶ್, ನಾಗರಾಜು, ಗವಿಯಯ್ಯ, ಗೋವಿಂದೇಗೌಡ, ಮಾದೇಗೌಡ, ರುದ್ರೇಗೌಡ, ಮಹದೇವಮ್ಮ, ಡಿ.ಸಿ.ಮಹದೇವ, ಬಸವರಾಜು, ವಿಸ್ತರಣಾಧಿಕಾರಿ ಪ್ರಮೋದ್ ಮತ್ತಿತರರಿದ್ದರು.

## ಪ್ರತಿಯೊಬ್ಬರೂ ಆರೋಗ್ಯ ರಕ್ಷಣೆಗೆ ಒತ್ತು ನೀಡಿ



ನಂಜನಗೂಡು, ಆ.18– ಪ್ರತಿಯೊಬ್ಬರೂ ಆರೋಗ್ಯ ರಕ್ಷಣೆಗೆ ಒತ್ತು ನೀಡಬೇಕು ಎಂದು ಜಿಪಂ ಮಾಜಿ ಸದಸ್ಯ ಚಿಕ್ಕರಂಗನಾಯಕ ತಿಳಿಸಿದರು. ತಾಲೂಕಿನ ಹರತಲೆ ಗ್ರಾಮದಲ್ಲಿ 75ನೇ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ಚಿಕ್ಕರಂಗನಾಯಕ ಅಭಿಮಾನಿ ಬಳಗದಿಂದ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣೆ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜ ಆರೋಗ್ಯವಾಗಿದ್ದರೆ ಮನುಷ್ಯ ಆರೋಗ್ಯವಾಗಿರಬಹುದು. ಮನುಷ್ಯನಿಗೆ ಆರೋಗ್ಯ ಮುಖ್ಯವಾಗಿದ್ದು, ಪ್ರತಿಯೊಬ್ಬರೂ ತಮ್ಮ ಆರೋಗ್ಯದ ಬಗ್ಗೆ ಎಚ್ಚರ ವಹಿಸಬೇಕು ಎಂದರು.

ಅಭಿಮಾನಿ ಬಳಗದವರು ಆರೋಗ್ಯ ಶಿಬಿರ ಆಯೋಜಿಸಿರುವುದು ಸಂತಸದ ವಿಚಾರ. ಪ್ರತಿ ವರ್ಷ ಇದೇ ರೀತಿ ಕಾರ್ಯಕ್ರಮ ನಡೆಯಲಿ ಎಂದರು. ಈ ವೇಳೆ ಗ್ರಾಪಂ ಅಧ್ಯಕ್ಷ ಜಯಮ್ಮ, ಡಾ.ಸುಹಾಸ್, ಡಾ.ಅನಂತಮೂರ್ತಿ, ಗ್ರಾಪಂ ಸದಸ್ಯರಾದ ಗೋವಿಂದರಾಜು, ಕಾಂತರಾಜು, ಮೀನಾಕ್ಷಿ, ಚುಟುಕು ರಾಜ್ಯ ಸಂಚಾಲಕ ಎಂಜಿಆರ್ ಅರಸ್, ಚುಟುಕು ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷೆ ರತ್ನ, ಸಿಪಿಐ ಲಕ್ಷ್ಮಿಕಾಂತ ತಳವಾರ್ ಇತರರಿದದ್ದರು.



ಹುಲ್ಲಹಳ್ಳಿ ಗ್ರಾಪಂ ಆವರಣದಲ್ಲಿ ಆಯೋಜಿಸಿದ್ದ 75ನೇ ಸ್ವಾತಂತ್ರ್ಯೋತ್ಸವದ ಧ್ವಜಾರೋಹಣವನ್ನು ಗ್ರಾಪಂ ಅಧ್ಯಕ್ಷ ಹೆಚ್.ಎನ್.ಮಹೇಶ್ ನೆರವೇರಿಸಿದರು. ಈ ವೇಳೆ ಉಪಾಧ್ಯಕ್ಷೆ ಜ್ಯೋತಿ, ಸದಸ್ಯರಾದ ಶಿವಣ್ಣ, ನಾಗೇಂದ್ರ, ಲಕ್ಷ್ಮಮ್ಮ, ಪವಿತ್ರ, ಭಾಗ್ಯಮ್ಮ, ಅನ್ಸರ್ ಅಹಮದ್, ಲೋಕೇಶ್, ಗೋಪಾಲ್ ನಾಯಕ್, ಕುಮಾರ್, ಚೌಡಯ್ಯ, ಸುರೇಶ್, ರತ್ನಮ್ಮ, ಸೋಮಶೇಖರ್, ಕಾರ್ಯದರ್ಶಿ ಅರುಣ್ ಕುಮಾರ್ ಇನ್ನಿತರರಿದ್ದರು.

## ರಾಜ್ಯದಲ್ಲಿ ಕೋಮು ಸಂಘರ್ಷ, ಭ್ರಷ್ಟಾಚಾರ ಹೆಚ್ಚಳ

**ಬಿಜೆಪಿ ಸರ್ಕಾರದ ವಿರುದ್ಧ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ವಾಗ್ದಾಳಿ**



ನಂಜನಗೂಡು, ಆ.18– ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗಿದೆ. ಕೋಮು ಸಂಘರ್ಷ, ಭ್ರಷ್ಟಾಚಾರ ಹೆಚ್ಚಾಗಿದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ವಾಗ್ದಾಳಿ ನಡೆಸಿದರು.

ತಾಲೂಕಿನ ದೇವನೂರು ಗ್ರಾಮದಲ್ಲಿ ಕಾಂಗ್ರೆಸ್ ವತಿಯಿಂದ ಆಯೋಜಿಸಿದ್ದ 75ನೇ ಸ್ವಾತಂತ್ರ್ಯ ನಡಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕೇಂದ್ರದಲ್ಲಿ ಬಿಜೆಪಿ ಸರ್ಕಾರ 8 ವರ್ಷ ಪೂರೈಸಿದೆ. ಸಾಧನೆ ಮಾತ್ರ ಶೂನ್ಯ. ಮೋದಿ ರೈತರ ಆದಾಯ ದ್ವಿಗುಣಗೊಳಿಸುತ್ತೇವೆ ಎಂದಿದ್ದರು. ಆದರೆ ಇಂದು ರೈತರ ಆದಾಯ ಕುಸಿಯುವ ಜೊತೆಗೆ ಬೆಲೆ ಏರಿಕೆಯಿಂದಾಗಿ ಜನಸಾಮಾನ್ಯರು ತತ್ತರಿಸುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರ 30 ಕೋಟಿ ಬಡವರನ್ನು ಬಡತನ ರೇಖೆಯಿಂದ ಮೇಲೆತ್ತಿತ್ತು. ಬಿಜೆಪಿ ಸರ್ಕಾರದಲ್ಲಿ 20 ಕೋಟಿ ಜನ ಬಡತನ ರೇಖೆಗಿಂತ ಕೆಳಗೆ ಹೋಗಿದ್ದಾರೆ. ಅಭಿವೃದ್ಧಿಯಲ್ಲಿ ನಿಮ್ಮ ಕೊಡುಗೆ ಏನು? ಎಂದು ಪ್ರಶ್ನಿಸಿದ ಅವರು ರಾಜ್ಯ ಸರ್ಕಾರ ಶೇ.40 ಕಮೀಷನ್ ಸರ್ಕಾರವೆಂದು ಬಿರುದು ಪಡೆದಿದೆ. ಕೊಟ್ಟ 600 ಭರವಸೆಗಳಲ್ಲಿ ಶೇ.9 ರಷ್ಟನ್ನೂ ಪೂರೈಸಿಲ್ಲ. ಅವರದೇ ಸರ್ಕಾರದ ಸಚಿವ ಮಾಧುಸ್ವಾಮಿ ಕೂಡ ನಮ್ಮದು ಅಡ್ಜೆಸ್ಟ್‌ಮೆಂಟ್ ಸರ್ಕಾರ, ಸಹಕಾರ ಇಲಾಖೆಗೆ ನಾನೇ ಲಂಚ ಕೊಟ್ಟಿದ್ದೇನೆ ಎಂದು ಹೇಳಿಕೊಂಡಿದ್ದಾರೆ. ಇದು ನಿಮ್ಮ ಸಾಧನೆಯೇ? ಸರ್ಕಾರ ಸಾಧನ ಸಮಾವೇಶ ಮಾಡಲು ಅವರಿಗೆ ನೈತಿಕತೆ ಇದೆಯೇ? ಎಂದು ಜರಿದರು.

ರಾಜ್ಯ ಸರ್ಕಾರದ ಜಾಹೀರಾತಿನಲ್ಲಿ ಬಲಿಷ್ಠ ಭಾರತಕ್ಕೆ ಬುನಾದಿ ಹಾಕಿದ ನೆಹರು ಭಾವಚಿತ್ರ ಕೈಬಿಡಲಾಗಿದೆ. ಜೊತೆಗೆ ಸ್ವಾತಂತ್ರ್ಯಕ್ಕೆ ಏನೂ ಕೊಡುಗೆ ನೀಡದ ಸಾವರ್ಕರ್ ಭಾವಚಿತ್ರ ಮೇಲಿದ್ದು, ದೇಶಕ್ಕೆ ಸಂವಿಧಾನ ನೀಡಿದ ಅಂಬೇಡ್ಕರ್ ಭಾವಚಿತ್ರವನ್ನು ಕೆಳಗೆ ಹಾಕಲಾಗಿದೆ ಎಂದು ಟೀಕಿಸಿದರು. ಕಾಂಗ್ರೆಸ್ ಅವಧಿಯಲ್ಲಿ 56 ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆ ಜಾರಿಗೊಳಿಸಿದ್ದಲ್ಲದೆ, ನಂಜನಗೂಡು ಕ್ಷೇತ್ರಕ್ಕೆ ಶಾಶ್ವತ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಜೊತೆಗೆ ಕೆರೆ ತುಂಬಿಸುವ ಕೆಲಸ ಮಾಡಲಾಗಿದೆ. ನಾವು ಕೆಲಸ ಮಾಡಿದ್ದೇವೆಂದು ಧೈರ್ಯವಾಗಿ ಮತ ಕೇಳುವ ಹಕ್ಕಿದೆ ಎಂದ ಅವರು ಬಿಜೆಪಿ ಸರ್ಕಾರದ ಲೋಪದೋಷಗಳನ್ನು ಮತ್ತು ಕಾಂಗ್ರೆಸ್ ಸರ್ಕಾರದ ಸಾಧನೆಗಳನ್ನು ಗ್ರಾಮಮಟ್ಟದಲ್ಲಿ ಜನರಿಗೆ ತಿಳಿಸಿ ಜನಜಾಗೃತಿ ಮೂಡಿಸುವ ಸಲುವಾಗಿ ಈ ಪಾದಯಾತ್ರೆ ನಡೆಸಲಾಗುತ್ತಿದೆ ಎಂದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮಾತನಾಡಿ, ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ 75 ಕಿಮೀ ಪಾದಯಾತ್ರೆ ನಡೆಸಬೇಕೆಂಬ ಕೆಪಿಸಿಸಿ ನಿರ್ದೇಶನದ ಮೇರೆಗೆ ಈ ಪಾದಯಾತ್ರೆ ನಡೆಸಲಾಗುತ್ತಿದ್ದು, ಈ ದಿನ ದೇವನೂರು, ಚಿಕ್ಕಕವಲಂದೆ, ದೊಡ್ಡ ಕವಲಂದೆ, ಘಟ್ಟವಾಡಿ, ನೇರಳೆ, ಹಂಪಾಪುರ, ಬುಜಂಗಯ್ಯನಹುಂಡಿ, ಮಲ್ಲಹಳ್ಳಿ, ಕೂಡ್ಲಾಪುರ, ಹುಣಸನಾಳು ಮಾರ್ಗದಲ್ಲಿ ಪಾದಯಾತ್ರೆ ನಡೆಯಲಿದೆ ಎಂದರು.

ಪಾದಯಾತ್ರೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಮಹೇಶ್, ಸಿ.ಎಂ.ಶಂಕರ್, ಜಿಪಂ ಮಾಜಿ ಸದಸ್ಯೆ ಲತಾ, ಹಿಂದುಳಿದ ವರ್ಗದ ಜಿಲ್ಲಾಧ್ಯಕ್ಷ ಕೆ.ಮಾರುತಿ, ನಗರಸಭಾ ಸದಸ್ಯರಾದ ಮಹೇಶ್, ಗಂಗಾಧರ್, ಮುಖಂಡರಾದ ನಾಗರಾಜು, ರಾಜೇಶ್, ನಾಗರಾಜಯ್ಯ, ಶಿವಪ್ಪದೇವರು, ದೊರೆಸ್ವಾಮಿ ನಾಯಕ, ವಿಜಯ ಕುಮಾರ್, ಶಿವಣ್ಣ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಕೆಪಿಸಿಸಿ ಸದಸ್ಯ ಅಕ್ಬರ್ ಅಲಿಂ, ಎಪಿಎಂಸಿ ಮಾಜಿ ಅಧ್ಯಕ್ಷ ಮುದ್ದುಮಾದಶೆಟ್ಟಿ ಸೇರಿದಂತೆ ಕಾರ್ಯಕರ್ತರು ಇದ್ದರು.

## ನಿಷೇಧಾಜ್ಞೆ ತೆರವು; ಸಹಜ ಸ್ಥಿತಿಗೆ ಮರಳಿದ ಶಿವಮೊಗ್ಗ

ಶಿವಮೊಗ್ಗ, ಆ.18– ಸ್ವಾತಂತ್ರ್ಯ ಹೋರಾಟಗಾರ ವೀರ ಸಾವರ್ಕರ್– ಮೈಸೂರು ಹುಲಿ ಟಿಪ್ಪು ಸುಲ್ತಾನ್ ಫ್ಲೆಕ್ಸ್ ಹಾಕುವ ವಿಚಾರದಲ್ಲಿ ಹಿಂದೂ–ಮುಸ್ಲಿಂ ಕೋಮುಗಳ ಮಧ್ಯೆ ಗಲಾಟೆ ನಡೆದು ಬೂದಿಮುಚ್ಚಿದ ಕೆಂಡದಂತಿದ್ದ ಶಿವಮೊಗ್ಗದಲ್ಲಿ ಪರಿಸ್ಥಿತಿ ಸಹಜ ಸ್ಥಿತಿಗೆ ಮರಳಿದೆ. ಸ್ವಾತಂತ್ರ್ಯ ದಿನ ನಗರದ ಎಎ ಸರ್ಕಲ್‌ನಲ್ಲಿ ಸಾವರ್ಕರ್ ಭಾವಚಿತ್ರ ಹಾಕಿದ ಕಾರಣಕ್ಕೆ ಎರಡು ಕೋಮಿನ ನಡುವೆ ಗಲಾಟೆ ನಡೆದು ಪೊಲೀಸರು ಲಾಠಿ ಚಾರ್ಜ್ ಮಾಡಿದ್ದರು. ಯೂವಕ ಪ್ರೇಮ್ ಸಿಂಗ್ ಮೇಲೆ ದುಷ್ಕರ್ಮಿಗಳು ಚಾಕುವಿನಿಂದ ಇರಿದಿದ್ದರು. ಶಾಂತಿ ಸುವ್ಯವಸ್ಥೆ ಕಾಪಾಡಲು ಶಿವಮೊಗ್ಗ ನಗರ ಹಾಗೂ ಭದ್ರಾವತಿಯಲ್ಲಿ ಸೆಕ್ಷನ್ 144 ಜಾರಿ ಮಾಡಲಾಗಿತ್ತು. ಇದರಿಂದಾಗಿ ಅಂಗಡಿಗಳು ಬಂದ್ ಆಗಿದ್ದವು. ಇದೀಗ ನಿಷೇಧಾಜ್ಞೆಯನ್ನು ತೆರವುಗೊಳಿಸಲಾಗಿದ್ದು ಶಾಲಾ– ಕಾಲೇಜುಗಳು ಪುನರಾರಂಭಗೊಂಡಿವೆ. ಅಂಗಡಿ, ಮುಂಗಟ್ಟುಗಳು ಮತ್ತೆ ಆರಂಭವಾಗಿದ್ದು, ವ್ಯಾಪಾರ–ವಹಿವಾಟು ಎಂದಿನಂತೆ ಸಾಗಿದೆ. ಆಟೋ, ಕಾರು, ಬಸ್‌ಗಳ ಓಡಾಟ ಸಾಗಿದ್ದು, ಜನಜೀವನ ಸಹಜ ಸ್ಥಿತಿಗೆ ಮರಳಿದೆ. ಸ್ಕೂಟರ್‌ನಲ್ಲಿ ಹಿಂಬದಿ ಪ್ರಯಾಣಿಕರಿಗೆ ಅವಕಾಶ ನೀಡಿಲ್ಲ.








### ಸಾರ್ವಜನಿಕ ಪ್ರಕಟಣೆ

ಈ ಕೆಳಕಂಡ ಷೆಡ್ಯೂಲ್ ಸ್ವತ್ತು ಮೈಸೂರು ಸಿಟಿ, ಲಷ್ಕರ್ ಮೊಹಲ್ಲಾ, ಸಾಡೆ ರಸ್ತೆ, ಮನೆ ನಂ.3063 ರಲ್ಲಿ ವಾಸವಾಗಿರುವ ಲೇಟ್ ಅಬ್ದುಲ್ ಮಜೀದ್ ರವರ ಕುಟುಂಬಕ್ಕೆ ಸೇರಿದ ಪಿತ್ರಾರ್ಜಿತ ಸ್ವತ್ತಾಗಿದ್ದು ಸದರಿ ಸ್ವತ್ತನ್ನು ನಮ್ಮ ಕಕ್ಷಿದಾರರಾದ ಫಾರುಕ್ ಪಾಷಾ ಬಿನ್ ಅಲಿಫ್‌ಪಾಷಾ ರವರು ಖರೀದಿ ಮಾಡಲು ಕರಾರು ಮಾಡಿಕೊಂಡಿರುತ್ತಾರೆ. ಆದ್ದರಿಂದ ಯಾವುದೇ ವ್ಯಕ್ತಿಗಳು ಈ ಷೆಡ್ಯೂಲ್ ಸ್ವತ್ತಿನ ಮೇಲೆ ಹಕ್ಕು ಮತ್ತು ಹಿತಾಸಕ್ತಿಯನ್ನು ಹೊಂದಿದ್ದಲ್ಲಿ ಅಥವಾ ತಕರಾರು ಸಲ್ಲಿಸಲು ಇಚ್ಛಿಸಿದಲ್ಲಿ 7 ದಿನಗಳ ಒಳಗಾಗಿ ಈ ಕೆಳಕಂಡ ವಕೀಲರ ಕಛೇರಿಗೆ ಖುದ್ದಾಗಿ ಸಂಪರ್ಕಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

**ಷೆಡ್ಯೂಲ್ ಸ್ವತ್ತಿನ ವಿವರ:**

ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಸರ್ಕಾರಿ ಉತ್ತನಹಳ್ಳಿ ಗ್ರಾಮದ ಸರ್ವೆ ನಂ.142/1 ರಲ್ಲಿರುವ 2 ಎಕರೆ ಜಮೀನು ಈ ಪ್ರಕಟಣೆಗೆ ಒಳಪಟ್ಟ ಸ್ವತ್ತಾಗಿದೆ.

Sd/- M.Mahesh, B.Com, LLB,
Advocate.
Office: No.216, Yadahalli Village, R.T.Nagara, Mysore
Mob.: 9980267502
Date: 18-08-2022

### ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ ಬೆಂಗಳೂರು ಸಿಟಿ – 560 093, ಬೆಂಗಳೂರು ಉತ್ತರ, ಸಿ.ವಿ. ರಾಮನ್ ನಗರ, ಬಿಗ್ ಬಜಾರ್ ಹತ್ತಿರ, ಓಲ್ಡ್ ಮದ್ರಾಸ್ ರಸ್ತೆ, ಟ್ರಿನಿಟಿ ಎನ್‌ಕ್ಲೇವ್, ಮನೆ ನಂ. 322ರಲ್ಲಿ ವಾಸವಾಗಿರುವ ಶ್ರೀ ನೀಲಕಂಠರಾವ್. ಜಿ ರವರ ಮಗನಾದ ಶ್ರೀ ವಿಜಯ್ ವಾಘೆ ನೀಲಕಂಠ ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ವಿಚಾರದಲ್ಲಿ ಮೇಲೆ ಕಾಣಿಸಿದ ವ್ಯಕ್ತಿಗಲ್ಲದೆ ಬೇರೆ ಯಾರಿಗಾದರು, ಯಾವುದೇ ರೀತಿಯ ಹಕ್ಕಾಗಲೀ, ಹಿತಾಸಕ್ತಿಯಾಗಲೀ, ಭಾಗಾಂಶವಾಗಲೀ ಅಥವಾ ಋಣಗಳಾಗಲೀ ಇದ್ದಲಿ ಈ ಕೆಳಕಂಡವರನ್ನು ಈ ದಿನದಿಂದ ಏಳು (7) ದಿನಗಳ ಒಳಗಾಗಿ ಸಂಬಂಧಪಟ್ಟ ದಾಖಲಾತಿಗಳೊಡನೆ ಸಂಪರ್ಕಿಸುವುದು. ಇಲ್ಲವಾದಲ್ಲಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಮೇಲೆ ಕಾಣಿಸಿದವರಿಗಲ್ಲದೆ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿಯಾಗಲೀ ಇಲ್ಲವೆಂದೇ ಪರಿಗಣಿಸಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸುವರು.

**ಷೆಡ್ಯೂಲ್ ಸ್ವತ್ತು**

ಮೈಸೂರು ಸಿಟಿ, ಮಂಡಿ ಮೊಹಲ್ಲಾ, ಸಯ್ಯಾಜಿರಾವ್ ರಸ್ತೆಯಲ್ಲಿರುವ ಖಾಲಿ ನಿವೇಶನದ ಸಂಖ್ಯೆ 1482 M-53, 1482/A M-53/A, 1482/B-1 M-53/B-1, 1482/1A M-53/1A, ಇದರ ಒಟ್ಟು ವಿಸ್ತೀರ್ಣ 112.14 ಚದರ ಮೀಟರ್ ಅಳತೆಯ ಸ್ವತ್ತು ಮತ್ತು ಈ ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಸಯ್ಯಾಜಿರಾವ್ ರಸ್ತೆ, ಉತ್ತರಕ್ಕೆ: ಖಾಸಗೀ ಸ್ವತ್ತು ಮತ್ತು ಕನ್ಸರ್ವೆನ್ಸಿ, ದಕ್ಷಿಣಕ್ಕೆ: ಖಾಸಗೀ ಸ್ವತ್ತು.

ದಿನಾಂಕ : 16-08-2022

**ಕೆ.ಎನ್. ಮಹಾದೇವಸ್ವಾಮಿ**, ಬಿ.ಎಸ್‌ಸಿ., ಎಲ್.ಎಲ್.ಬಿ.,
ವಕೀಲರು ಮತ್ತು ನೋಟರಿ,
ರೂಂ ನಂ. ಎಫ್–1 & 2, ಒಂದನೇ ಮಹಡಿ, 5ನೇ ಕ್ರಾಸ್, ಅಲ್ಲಮ್ಮ ಪ್ರಭು ಕೃಪ ಕಾಂಪ್ಲೆಕ್ಸ್, ರಾಮಾನುಜ ರಸ್ತೆ, ಮೈಸೂರು–570 004.
Mob No. : 94482-22522, Office No. :0821- 4287998.

### ಸಾರ್ವಜನಿಕ ತಿಳುವಳಿಕೆ ಪತ್ರ

ನಮ್ಮ ಕಕ್ಷಿದಾರರು ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದಾಸನಕೊಪ್ಪಲು ಗ್ರಾಮದಲ್ಲಿ ವಾಸವಾಗಿರುವ ಲೇಟ್ ಚಿಕ್ಕಹೊನ್ನೇಗೌಡರವರ ಧರ್ಮಪತ್ನಿ ದಿವಂಗತ ಬೋರಮ್ಮನವರ ವಾರಸುದಾರರಿಂದ ಷೆಡ್ಯೂಲ್ ಆಸ್ತಿಯನ್ನು ಖರೀದಿ ಮಾಡಿಕೊಳ್ಳಲು ಒಪ್ಪಂದ ಮಾಡಿಕೊಂಡಿದ್ದು, ಈ ಕ್ರಯದ ವ್ಯವಹಾರಕ್ಕೆ ಯಾರದಾದರು ಯಾವುದಾದರು ತಕರಾರು ಅಥವಾ ಈ ಆಸ್ತಿಯ ಬಗ್ಗೆ ಹಕ್ಕು ಬಾಧ್ಯತೆಗಳಿದ್ದಲ್ಲಿ ಈ ತಿಳುವಳಿಕೆ ಪತ್ರ ಪ್ರಕಟವಾದ ಒಂದು ವಾರದ ಒಳಗಾಗಿ ಲಿಖಿತವಾಗಿ ಅದಕ್ಕೆ ಸಂಬಂಧಿಸಿದ ದಾಖಲಾತಿಗಳೊಡನೆ ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸಬಹುದಾಗಿದೆ. ಒಂದು ವೇಳೆ ಯಾವುದೇ ಕಾನೂನುಬದ್ಧ ತಕರಾರು ಬರದಿದ್ದಲ್ಲಿ ಈ ವ್ಯವಹಾರಕ್ಕೆ ಯಾರದು ಯಾವ ಆಕ್ಷೇಪಣೆಯೂ ಇಲ್ಲ ಎಂದು ತಿಳಿದು ಕ್ರಯದ ವ್ಯವಹಾರವನ್ನು ಪೂರ್ಣಗೊಳಿಸಲಾಗುವುದು ಮತ್ತು ನಂತರ ಬರುವ ಯಾವ ತಕರಾರಿಗು ನಮ್ಮ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂದು ತಿಳಿಯುವುದು.

**ಷೆಡ್ಯೂಲ್**

ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಕೆಮ್ಮಣ್ಣುಪುರ ಗ್ರಾಮದ ಸರ್ವೆ ನಂ.16 ರಲ್ಲಿ 1 ಎಕರೆ 12 ಗುಂಟೆ ಜಮೀನಿಗೆ ಚೆಕ್ಕುಬಂದಿ:
ಪೂರ್ವಕ್ಕೆ : ವಿರೂಪಾಕ್ಷರವರ ಸ್ವತ್ತು, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ: ಗಾರೆಹಟ್ಟಿ ಹೊನ್ನೇಗೌಡರವರ ಸ್ವತ್ತು.

Sd/- O.Shama Bhat, BA., L.L.B,
Reg. No. KAR 417/77
O.Sathisha, B.Sc, L.L.B.,
Reg. No. KAR721/89
Advocates
#20/C, 2nd Floor, Near Airlines Hotel, Jayalakshmi Vilas Road, Chamaraja Puram, Mysuru-05.
Date: 18-08-2022 Ph: 0821-4262475
Email: shamsathisha@gmail.com




### ವಿಶೇಷ ರುದ್ರಾಕ್ಷಗಳ ಪ್ರದರ್ಶನ ಮತ್ತು ಮಾರಾಟ

**ದಿನಾಂಕ: 19 ರಿಂದ 26 ಆಗಸ್ಟ್ ವರೆಗೆ ಮಾತ್ರ**

**ಶ್ರಾವಣ ಮಾಸದ ಮಾರಾಟ**

ಮೈಸೂರು: ಹೈದರಾಬಾದ ಮೂಲದ ಇಂಡಸ್– ನೇಪಾಳ ರುದ್ರಾಕ್ಷ ಸಂಸ್ಥೆಯು ಆಗಸ್ಟ್ 19 ರಿಂದ 26 ರವರೆಗೆ ನೇಪಾಳದ ರುದ್ರಾಕ್ಷಗಳ ಪ್ರದರ್ಶನ ಮತ್ತು ಮಾರಾಟವನ್ನು ಇಲ್ಲಿಯ **ಹೋಟೆಲ್ ಸಿಪಾಯ್ ಗ್ರಾಂಡೆ, ಎಂ.ಜಿ ರಸ್ತೆ, ಜೆಎಸ್‌ಎಸ್ ಆಸ್ಪತ್ರೆ ಎದುರು,** ಮೈಸೂರಿನಲ್ಲಿ ಏರ್ಪಡಿಸಿದೆ. ಈ ಜೀವಮಾನದ ಅವಕಾಶವನ್ನು ಪಡೆದುಕೊಳ್ಳಿ.



ಯಾವ ರುದ್ರಾಕ್ಷಿಯನ್ನು ಯಾವಾಗ ಯಾರು ಧರಿಸಬೇಕು ಎಂಬುದರ ಬಗ್ಗೆ ಯಾವುದೇ ಪಂಚಾಂಗ ಮತ್ತು ಕಂಪ್ಯೂಟರ್ ಸಹಾಯ ಇಲ್ಲದೇ ವೇದ ಗಣಿತದ ಮೂಲಕ ಜನ್ಮ ರಾಶಿ, ಜನ್ಮ ನಕ್ಷತ್ರ ಇವುಗಳನ್ನು ನೋಡಿ ಕ್ಷಣಾರ್ಧದಲ್ಲಿ ತಿಳಿಸಲಾಗುವುದು.

ಸಸ್ಯಹಾರಿಗಳು ಹಾಗೂ ಮಾಂಸಹಾರಿಗಳು ಸಹ ರುದ್ರಾಕ್ಷಿಯನ್ನು ಧರಿಸಿ ಆಧ್ಯಾತ್ಮವನ್ನು ಪಡೆದುಕೊಳ್ಳಬಹುದು ಎಂದು ಶಿವಪುರಾಣದಲ್ಲಿ ಉಲ್ಲೇಖಿಸಲಾಗಿದೆ.

ನಮ್ಮಲ್ಲಿ ಖರೀದಿಸಿದ ರುದ್ರಾಕ್ಷ ನಕಲಿ ಎಂದು ಸಾಬೀತು ಮಾಡಿದಲ್ಲಿ ಬೆಲೆಯ 2 ಪಟ್ಟು ಹಣವನ್ನು ಮರಳಿ ಕೊಡಲಾಗುವುದು.

ರುದ್ರಾಕ್ಷಿ ಬೆಲೆ ಕನಿಷ್ಠ ನೂರು ರೂಪಾಯಿಗಳಿಂದ ಗರಿಷ್ಠ ಒಂದೂವರೆ ಲಕ್ಷ ರೂಪಾಯಿಗಳವರೆಗೆ ಇವೆ.

ಈ ಪ್ರದರ್ಶನವು ಬೆಳಿಗ್ಗೆ 10 ರಿಂದ ರಾತ್ರಿ 9 ಗಂಟೆಯವರೆಗೆ ನಡೆಯಲಿದೆ.

**ORIGINAL RUDRAKSHA** ಸಂಪರ್ಕಿಸಿ: **9885211449, 7799211449**

## WANTED

India's Leading Financial Service Company
**REQUIRES IMMEDIATELY**
**SALES MANAGERS**
for it's Mysore Location.
Eligibility: Graduation, Age 25 & above with minimum 1 year experience in any discipline.
For registration please call:
**Mob: 7975384123**

### ದಾಸ್‌ವಿ ಪ್ಯಾರಾ ಮೆಡಿಕಲ್ ಕಾಲೇಜ್

\#ಎಲ್ 46/4, ಎಂ.ಜಿ. ಟವರ್ಸ್, 2ನೇ ಮಹಡಿ (ಕೆ.ಹೆಚ್.ಬಿ. ಕಾಂಪ್ಲೆಕ್ಸ್ ಹಿಂಭಾಗ), 1ನೇ ಹಂತ, ಕುವೆಂಪುನಗರ, ಮೈಸೂರು–570 023

(ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿವೆ)
ಈ ಸಂಸ್ಥೆಯಲ್ಲಿ ಪರಿಣಿತ ವೈದ್ಯರು ಮತ್ತು ತಾಂತ್ರಿಕ ತಜ್ಞರಿಂದ ಬೋಧನೆ

**ಪ್ರವೇಶ ತೆರೆದಿದೆ, ತ್ವರೆಮಾಡಿ**

**ಡಿಪ್ಲೋಮಾ–ಇನ್–ಮೆಡಿಕಲ್ ಹೆಲ್ತ್ ಇನ್ಸ್‌ಪೆಕ್ಟರ್ (DMHI)**
(ನಗರಸಭೆ / ನಗರಪಾಲಿಕೆ / ಸರ್ಕಾರಿ ಉದ್ಯೋಗಕ್ಕೆ ಅವಕಾಶ)

**ಡಿಪ್ಲೋಮಾ–ಇನ್–ಮೆಡಿಕಲ್ ಲ್ಯಾಬೋರೇಟರಿ ಟೆಕ್ನಾಲಜಿ (DMLT)**
(ಸರ್ಕಾರಿ / ಖಾಸಗಿ ಆಸ್ಪತ್ರೆಗಳಲ್ಲಿ ಉದ್ಯೋಗಕ್ಕೆ ಅವಕಾಶ)
ಎಸ್.ಎಸ್.ಎಲ್.ಸಿ. ಪಾಸಾದವರಿಗೆ 3 ವರ್ಷ ಮತ್ತು ಪಿ.ಯು.ಸಿ. (ಪಿ.ಸಿ.ಎಂ.ಬಿ) ಪಾಸಾದವರಿಗೆ 2 ವರ್ಷ ಅವಧಿ.

ಸಂಪರ್ಕಿಸಿ: **8904403905, 8792237303, 9731507047**

### ನಂಜನಗೂಡು ತಾಲ್ಲೋಕು ಪದವೀಧರರ ಸಹಕಾರ ಸಂಘ (ರಿ) ನಂಜನಗೂಡು

**ವಾರ್ಷಿಕ ಮಹಾಸಭೆ**

2021–22ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ: 20–08–2022ನೇ ಶನಿವಾರ ಬೆಳಿಗ್ಗೆ 11.00 ಘಂಟೆಗೆ ಭಾರತ್ ವಿಕಾಸ ಶಾಲೆ, ನಂಜನಗೂಡು ಇಲ್ಲಿ ಏರ್ಪಡಿಸಲಾಗಿದೆ. ಸಂಘದ ಸದಸ್ಯರಿಗೆ ಈಗಾಗಲೆ ಅಂಚೆ ಮೂಲಕ ಆಹ್ವಾನ ಪತ್ರಿಕೆಯನ್ನು ಕಳುಹಿಸಲಾಗಿದೆ. ತಲುಪದೇ ಇದ್ದವರು ಇದನ್ನೇ ಆಹ್ವಾನವೆಂದು ತಿಳಿದು ಸಭೆಗೆ ಹಾಜರಾಗಲು ಕೋರಲಾಗಿದೆ.

ಸಹಿ/– ಅಧ್ಯಕ್ಷರು

### ವಿಕಲಾಂಗ ವ್ಯಕ್ತಿಗಳ ಸಬಲೀಕರಣಕ್ಕಾಗಿ ರಾಷ್ಟ್ರೀಯ ಪ್ರಶಸ್ತಿಗಳು, 2021 ಮತ್ತು 2022

2021 ಮತ್ತು 2022 ನೇ ಸಾಲಿನ ವಿಕಲಾಂಗ ವ್ಯಕ್ತಿಗಳ ಸಬಲೀಕರಣಕ್ಕಾಗಿ ಪ್ರಧಾನ ಮಾಡುವ ರಾಷ್ಟ್ರೀಯ ಪ್ರಶಸ್ತಿಗಳಿಗೆ ಅರ್ಜಿಗಳನ್ನು ಆಹ್ವಾನಿಸಿ 15ನೇ ಜುಲೈ 2022 ರಂದು ಪತ್ರಿಕೆಗಳಲ್ಲಿ ಜಾಹೀರಾತನ್ನು ಪ್ರಕಟಿಸಲಾಗಿದೆ.

2. ಪಾಸ್‌ವರ್ಡ್ ಸಂರಕ್ಷಿತ ಕೇಂದ್ರೀಕೃತ ಪೋರ್ಟಲ್‌ನಲ್ಲಿ **(www.awards.gov.in)** ಆನ್‌ಲೈನ್ ಮಾಧ್ಯಮದ ಮೂಲಕ ಅರ್ಜಿಗಳನ್ನು / ನಾಮನಿರ್ದೇಶನಗಳನ್ನು ಸಲ್ಲಿಸಬಹುದಾಗಿದೆಯೆಂದು ಆಕಾಂಕ್ಷಿತ ಅರ್ಜಿದಾರರು ಸೇರಿದಂತೆ ಎಲ್ಲರ ಮಾಹಿತಿಗೆ ತಿಳಿಸಲಾಗಿದೆ.

3. ಅರ್ಜಿಗಳು / ನಾಮನಿರ್ದೇಶನಗಳನ್ನು / ಸಲ್ಲಿಸಲು ಪ್ರಶಸ್ತಿ ಪೋರ್ಟಲ್ 15ನೇ ಜುಲೈ, 2022 ರಿಂದ 28ನೇ ಆಗಸ್ಟ್ 2022 ರವರೆಗೆ ತೆರೆದಿರುತ್ತದೆ. ಅರ್ಹತಾ ಮಾನದಂಡಗಳು ಮತ್ತು ಇತರ ವಿವರಗಳು ವಿಕಲಾಂಗ ವ್ಯಕ್ತಿಗಳ ಸಬಲೀಕರಣಕ್ಕಾಗಿ ಪ್ರಧಾನ ಮಾಡುವ ರಾಷ್ಟ್ರೀಯ ಪ್ರಶಸ್ತಿಗಳ ಸರಳೀಕೃತ ಮತ್ತು ತರ್ಕಬದ್ಧ ಮಾರ್ಗಸೂಚಿಗಳಲ್ಲಿ ಲಭ್ಯವಿದ್ದು, ಇದನ್ನು ಇಲಾಖೆಯ ವೆಬ್‌ಸೈಟ್ (**www.disabilityaffairs.gov.in**) ಮತ್ತು ಪ್ರಶಸ್ತಿ ಪೋರ್ಟಲ್ (**www.awards.gov.in**) ಇವುಗಳಲ್ಲಿ ಲಭ್ಯವಿದೆ.

4. ಈ ರಾಷ್ಟ್ರೀಯ ಪ್ರಶಸ್ತಿಗಳಿಗೆ ಭೌತಿಕವಾಗಿ / ಇ–ಮೇಲ್ ಮೂಲಕ ಸಲ್ಲಿಸಲ್ಪಡುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ / ಪರಿಗಣಿಸಲಾಗುವುದಿಲ್ಲ.

CBC38117/11/0029/2223

### SDJ JEWELERS

ಪುರುಷರು ಮತ್ತು ಮಹಿಳೆಯರು
**Tele Callers** ಮತ್ತು **Sales Executive** ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
**8884304444**

### ಸರಿಯಾದ ಬೆಲೆ /ಸರಿಯಾದ ಸರ್ವಿಸ್

ಕಾಪರ್ ಗ್ಯಾಸ್ ಪೈಪ್ – 120per ft.
ಚಿಮಿನಿ ಕ್ಲೀನಿಂಗ್ – 399 per hr.
ಗ್ಯಾಸ್ ಸ್ಟೌವ್ ಕ್ಲೀನಿಂಗ್ – 99per hr.
ಹೆಚ್ಚಿನ ಆಫರ್‌ಗಾಗಿ ಸಂಪರ್ಕಿಸಿ
www.app2serv.com
Call: 8088888115

### SITES FOR SALE

30x40 30x50
Sites available
Near Jettihundi, Off. Bogadhi Gaddige Road
Call : 98453 55122

### ಬೇಕಾಗಿದ್ದಾರೆ

ಬಿ.ಕಾಂ ಪದವೀಧರ 25 ರಿಂದ 40 ವಯಸ್ಸಿನ ಕನಿಷ್ಠ 2 ವರ್ಷ ಅನುಭವವಿರಬೇಕು, ಟ್ಯಾಲಿಯ ಅನುಭವ ಹೊಂದಿರಬೇಕು, ಇದಲ್ಲದೆ ಕಂಪ್ಯೂಟರ್ ಟೈಪಿಂಗ್‌ನಲ್ಲಿ ಉತ್ತಮ ಅನುಭವವಿರಬೇಕು. ಪಾರ್ಟ್‌ಟೈಮ್ ಬೆಳಗ್ಗೆ 9 ರಿಂದ 11. 30 ರವರೆಗೆ ಆಸಕ್ತಿವುಳ್ಳವರು ಸಂಪರ್ಕಿಸಿ
9606222435 / 9886209339

### ಬೇಕಾಗಿದ್ದಾರೆ

ಪೆಟ್ರೋಲ್ ಬಂಕ್‌ನಲ್ಲಿ ಕಾರ್ಯನಿರ್ವಹಿಸಲು 20 ರಿಂದ 30 ವಯಸ್ಸಿನ ಯುವಕ/ ಯುವತಿಯರು ಬೇಕಾಗಿದ್ದಾರೆ, ಎಸ್‌ಎಸ್‌ಎಲ್‌ಸಿ/ಪಿಯುಸಿ ವಿದ್ಯಾಭ್ಯಾಸ ವಿರಬೇಕು ಆಸಕ್ತಿವುಳ್ಳವರು ಸಂಪರ್ಕಿಸಿ
9606222435 / 9886209339

### 7ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಭಾಗ್ಯ ಎನ್.
ಸಹ ಶಿಕ್ಷಕಿ, ಮಂಗಲ
18.06.1974–19.08.2015

ನೀವು ನಮ್ಮನ್ನಗಲಿ 7 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ಇಂತಿ ದುಃಖತಪ್ತರು
ಪತಿ: ಆನಂದ. ಸಿ., ತಂಗಿ: ಎನ್. ಪ್ರಭಾ ಮಕ್ಕಳು: ಎ.ಬಿ.ರೋಶ್ನಿ, ಎ.ಬಿ. ಶಾಶ್ವತ್, ಅಶೋಕನಗರದ ಜೋಗಯ್ಯನ ಕುಟುಂಬವರ್ಗ ಸಂತೇಮರಹಳ್ಳಿ ನಂಜಯ್ಯ ನವರ ಕುಟುಂಬವರ್ಗ

### 20ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಹನುಮಂತಪ್ಪ ಶ್ರೀರಂಗಪಟ್ಟಣ
ನೀವು ನಮ್ಮನ್ನಗಲಿ ಇಂದಿಗೆ 20 ವರ್ಷ ಕಳೆದರೂ ನಿಮ್ಮ ನೆನೆಪು ಸದಾ ನಮ್ಮ ಮನದಲ್ಲಿದೆ
ದುಃಖಿತಪ್ತರು: ಕುಟುಂಬವರ್ಗದವರು ಹಾಗೂ ಬಂಧುಮಿತ್ರರು

### REQUIRED

FRONT OFFICE ASSISTANT
Male / Female
with experience for a reputed hotel in the heart of Mysuru City.
Call : 96116 22009
Call between 11am to 6pm

Crystal City MUDA & RERA Aprd.
30x40 30x50
40 Acre Premium Layout
Fully Developed
5 Mins from Kuvempu Nagar
90714 01234

### Brand New & Fully Furnished 3 BHK FLAT AVAILABLE FOR SALE

**Ground Floor-Area 2150 Sft.,**
Having latest amenities like Swimming Pool, Gym, Children Play Area & Party Hall, Spacious 2 Car parking space.
Gated Community with 24 Hr Power Backup
Location: Blue bells Apartment
Vijayanagar 3rd Stage, Behind Roost Hotel, Mysore.
Interested parties please contact:
9741916989 / 9845499709


### ಎರಡನೇ ವರ್ಷದ ಪುಣ್ಯಸ್ಮರಣೆ




## ಶ್ರೀ ಎಂ.ಎನ್. ಕೃಷ್ಣರವರು

(ನರ್ಮದಾ ಸ್ವೀಟ್ಸ್, ಸುಭಾಶ್ ನಗರ, ಮಂಡ್ಯ)
ನಿಧನ : 19–08–2020
ನೀವು ನಮ್ಮನ್ನಗಲಿ ಇಂದಿಗೆ 2 ವರ್ಷವಾಯಿತು. ಸದಾ ನಿಮ್ಮ ಸ್ಮರಣೆಯಲ್ಲಿದ್ದು, ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ,
ದುಃಖತಪ್ತರು: ಮೃತರ ಪತ್ನಿ–ಯು.ಸಿ.ಲಲಿತಾ, ಮಗಳು–ಸ್ಮಿತಾ ಎಂ.ಕೆ. ಅಳಿಯ–ಮಂಜುನಾಥ ಡಿ, ಮೊಮ್ಮಕ್ಕಳು–ಭವಿನ್ ಎಂ.ಎಸ್ ಮತ್ತು ಮಿಥುನ್ ಕೃಷ್ಣ ಎಂ.ಎಸ್ ಹಾಗೂ ಕುಟುಂಬವರ್ಗದವರು

### REMEMBRANCE



**SRI BADRI PRASADJI**
02-09-1902 to 19-08-1984
Your blessings, guidance and love will be cherished forever & ever
— Founder, Indra Group of Concerns



### ಎರಡನೇ ವರ್ಷದ ಪುಣ್ಯಸ್ಮರಣೆ



## ಶ್ರೀ ಸಿ. ಗುರುಸ್ವಾಮಿ

ಮಾಜಿ ಶಾಸಕರು, ಚಾಮರಾಜನಗರ

ಲಿಂಗೈಕ್ಯ ಶ್ರೀ ಸಿ. ಗುರುಸ್ವಾಮಿರವರ ಧರ್ಮಪತ್ನಿ ಶ್ರೀಮತಿ ಶೀಲಗುರುಸ್ವಾಮಿಯವರು ಮಾಡುವ ವಿಜ್ಞಾಪನೆಗಳು,
ಆತ್ಮೀಯ ಶರಣ ಬಂಧುಗಳೇ, ನನ್ನ ಪೂಜ್ಯ ಪತಿಯವರಾದ ಮಾಜಿ ಶಾಸಕರಾದ ಶ್ರೀ ಸಿ. ಗುರುಸ್ವಾಮಿಯವರು ಎರಡನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ದಿನಾಂಕ 20-08-2022ನೇ ಶನಿವಾರ ಬೆಳಗ್ಗೆ 10 ಗಂಟೆಗೆ ಚಾಮರಾಜನಗರ ತಾಲ್ಲೂಕಿನ ಯಾನಗಹಳ್ಳಿ ಗ್ರಾಮದ ಹತ್ತಿರ ಅಜ್ಜಟ್ಟಿಪುರ ತೋಟದ ಮನೆಯಲ್ಲಿ ಏರ್ಪಡಿಸಲಾಗಿದೆ. ಈ ಕಾರ್ಯಕ್ರಮಕ್ಕೆ ಹರಗುರು ಚರಮೂರ್ತಿಗಳು ಹಾಗೂ ಗಣ್ಯರು ಆಗಮಿಸಲಿದ್ದಾರೆ. ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಶ್ರೀಗುರುಗಳ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

**ಧಾರ್ಮಿಕ ಸಭೆ ಹಾಗೂ ಪುಣ್ಯಸಂಸ್ಮರಣೆ**

ದಿವ್ಯ ಸಾನಿಧ್ಯ

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರಮಹಾಸ್ವಾಮಿಗಳು
ಪರಮಪೂಜ್ಯ ಶ್ರೀ. ಮ ನಿ.ಪ್ರ.ಸ್ವ. ಶ್ರೀ ಶ್ರೀ ಶ್ರೀ ಸಿದ್ದಲಿಂಗಮಹಾಸ್ವಾಮಿಗಳು

ದಿವ್ಯ ಸಮ್ಮುಖ

ಶ್ರೀ. ಮ ನಿ.ಪ್ರ.ಸ್ವ. ಶ್ರೀ ಮಹಾಂತಸ್ವಾಮಿಗಳು
ಶ್ರೀ. ಮ ನಿ.ಪ್ರ.ಸ್ವ. ಶ್ರೀ ಚನ್ನಬಸವಸ್ವಾಮಿಗಳು
ಶ್ರೀ. ಮ ನಿ.ಪ್ರ.ಸ್ವ. ಶ್ರೀ ಶಿವಲಿಂಗೇಂದ್ರಸ್ವಾಮಿಗಳು
ಶ್ರೀ.ಷ. ಬ್ರ. ಶ್ರೀ ಶಾಂತ ಮಲ್ಲಿಕಾರ್ಜುನಸ್ವಾಮಿಗಳು
ಶ್ರೀ.ಷ. ಬ್ರ. ಶ್ರೀ ಬಸವಣ್ಣಸ್ವಾಮಿಗಳು
ಶ್ರೀ. ವಿದ್ವಾನ್ ಪಟ್ಟದ ಪಂಚಾಕ್ಷರಿಸ್ವಾಮಿಗಳು
ಶ್ರೀ.ಷ. ಬ್ರ. ಶ್ರೀ ಸಿದ್ಧಲಿಂಗಶಿವಾಚಾರ್ಯಸ್ವಾಮಿಗಳು
ಶ್ರೀ.ಷ. ವೇ ಬ್ರ. ಶ್ರೀ ಸಿದ್ದಮಲ್ಲಸ್ವಾಮಿಗಳು
ಶ್ರೀ.ಷ. ವೇ ಬ್ರ. ಶ್ರೀ ಗುರುಶಾಂತಿಸ್ವಾಮಿಗಳು
ಶ್ರೀ. ಮ ನಿ.ಪ್ರ.ಸ್ವ. ಶ್ರೀ ಸರ್ಪಭೂಷಣಸ್ವಾಮಿಗಳು
ಶ್ರೀ.ಷ. ಬ್ರ. ಶ್ರೀ ಇಮ್ಮಡಿ ಮುರುಘರಾಜೇಂದ್ರಸ್ವಾಮಿಗಳು
ಶ್ರೀ. ನಿ.ಪ್ರ.ಸ್ವ. ಶ್ರೀ ಚನ್ನಬಸವಸ್ವಾಮಿಗಳು

ಹಾಗೂ
ಹರಗುರುಚರಮೂರ್ತಿಗಳು ಆಗಮಿಸಲಿದ್ದಾರೆ

ಇಂತಿ ತಮ್ಮ ಆಗಮನಾಭಿಲಾಷಿಗಳು : ಜಿ.ನಾಗಶ್ರೀಪ್ರತಾಪ್, ಅಧ್ಯಕ್ಷರು, ಸಿ.ಗುರುಸ್ವಾಮಿ ಸೇವಾ ಪ್ರತಿಷ್ಠಾನ, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷರು, ಚಾಮರಾಜನಗರ ಮತ್ತು ಲಿಂಗೈಕ್ಯ ಶ್ರೀ ಸಿ ಗುರುಸ್ವಾಮಿಯವರ ಕುಟುಂಬವರ್ಗದವರು ಹಾಗೂ ಅಭಿಮಾನಿಗಳು, ಯಾನಗಹಳ್ಳಿ, ಅಜ್ಜಟ್ಟಿಪುರ ಗ್ರಾಮಸ್ಥರು.